महाकवि–कालिदास–विरचितम्

# रघुवंशम्

## प्रथमः सर्गः

ಮಹಾಕವಿ ಕಾಲಿದಾಸ ವಿರಚಿತಂ

**ರಘುವಂಶಮ್**

ಪ್ರಥಮಸರ್ಗಃ

ಸಂಸ್ಕೃತಭಾಷಾ ಪಠ್ಯ ಪೀಠಿಕೆ–ಅನುವಾದ ಟಿಪ್ಪಣಿಗಳೊಂದಿಗೆ

(ಬಿ.ಎ./ಬಿ.ಎಸ್ಸಿ/ಬಿ.ಎಸ್ಸಿ. (ಫ್ಯಾಡ್) ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗಾಗಿ)

# Raghuvamsam - I Canto

ಸಂಪಾದಕರು

ಪ್ರೊ. ಎನ್.ಆರ್. ಸುಬ್ರಹ್ಮಣ್ಯ

ಮುಖ್ಯಸ್ಥರು, ಸಂಸ್ಕೃತ ವಿಭಾಗ

ಸಿಂಧಿ ಕಾಲೇಜು, ಕೆಂಪಾಪುರ, ಬೆಂಗಳೂರು

ಪ್ರಸಾರಾಂಗ :

ಬೆಂಗಳೂರು ನಗರ ವಿಶ್ವವಿದ್ಯಾಲಯ

ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು–1

**Raghuvamsam - I Canto:** A prescribed text book in Sanskrit for 1st Sem B.A./B.Sc.,/B.Sc.,FAD Degree classess. Edited by Prof. N.R. Subrahmanya, H.O.D., Dept., of Sanskrit, Sindhi College, Kempapura, Hebbala, Bengaluru-24.

Published by :

Prasaranga,

Bengaluru City University,

Bengaluru.

Page :

Price :

Printed at : Prasaranga,

Bengaluru City University,

Bengaluru.

# ಮುನ್ನುಡಿ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು 2018–19ನೇ ಸಾಲಿನಿಂದ ಮೊದಲನೆ ಸೆಮಿಸ್ಟರ್ ಬಿ.ಎ/ಬಿ.ಎಸ್ಸಿ/ಫ್ಯಾಡ್ ಪದವಿ ತರಗತಿಗಳ ಸಂಸ್ಕೃತ ವಿದ್ಯಾರ್ಥಿಗಳಿಗೆ ರಘುವಂಶದ ಪ್ರಥಮ ಸರ್ಗವನ್ನು ಪಠ್ಯವಾಗಿ ನಿಯಮಿಸಿದೆ. ರಘುವಂಶವು ಮಹಾಕವಿ ಕಾಳಿದಾಸನ ಅನರ್ಘ್ಯರತ್ನ. ಭಾರತೀಯ ಸಂಸ್ಕೃತಿಯನ್ನು ಪರಿಚಯಿಸುವುದರಲ್ಲಿ ಇದರ ಪಾತ್ರ ಮಹತ್ತರವಾದುದು. ಭಾರತೀಯ ಆದರ್ಶಗಳನ್ನು, ಉಜ್ಜ್ವಲ ಪರಂಪರೆಯನ್ನು ಪ್ರಖ್ಯಾತವಾದ ಸೂರ್ಯವಂಶದ ದೊರೆಗಳ ಚರಿತ್ರೆಯನ್ನಿರಿಸಿಕೊಂಡು ಅವನು ಈ ಮಹಾಕಾವ್ಯವನ್ನು ರಚಿಸಿದ್ದಾನೆ. ಈ ಪಠ್ಯಪುಸ್ತಕವು ಪ್ರಕಟಗೊಂಡು ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಕೈಯಲ್ಲಿಡಲು ಅತೀವ ಸಂತೋಷವಾಗುತ್ತದೆ.

ರಘುವಂಶ ಪ್ರಥಮ ಸರ್ಗವನ್ನು ಮೂಲ ಪಠ್ಯ ಪೀಠಿಕೆ ವ್ಯಾಕರಣಾಂಶ ಸಹಿತ ಕನ್ನಡ ಅನುವಾದ ಹಾಗೂ ಆಂಗ್ಲ ಅನುವಾದವನ್ನು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎನ್.ಆರ್. ಸುಬ್ರಹ್ಮಣ್ಯ ಸಹ ಪ್ರಾಧ್ಯಾಪಕರು (Associate Professor) ಸಂಸ್ಕೃತ ವಿಭಾಗ, ಸಿಂಧಿ ಕಾಲೇಜು ಇವರು ಸಂಪಾದಿಸಿರುವರು. ಇವರಿಗೆ ನನ್ನ ಅಭಿನಂದನೆಗಳು. ಸಂಸ್ಕೃತ ಅಧ್ಯಯನ ಮಂಡಳಿಯ ಅಧ್ಯಕ್ಷರಾದ **ಡಾ|| ಪಂಕಜನಯನ** ಅವರಿಗೆ ನನ್ನ ಹಾರ್ದಿಕ ವಂದನೆಗಳು. ಈ ಪುಸ್ತಕವನ್ನು ಪ್ರಕಟಿಸಲು ಶ್ರಮ ವಹಿಸಿದ ಪ್ರಸಾರಾಂಗದ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರಿಗೆ ವಂದನೆಗಳು. ಸಂಸ್ಕೃತ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಇದರ ಪ್ರಯೋಜನ ಪಡೆಯಬೇಕೆಂದು ಆಶಿಸುತ್ತೇನೆ.

**ಡಾ|| ಎಸ್. ಜಾಫೆಟ್**

ಕುಲಪತಿಗಳು

ಬೆಂಗಳೂರು ನಗರ ವಿಶ್ವವಿದ್ಯಾಲಯ

# ಸಂಪಾದಕರ ನುಡಿ

ಸಂಸ್ಕೃತದ ಪಂಚಮಹಾಕಾವ್ಯಗಳಲ್ಲಿ ಮೊದಲನೆಯದಾದ ರಘುವಂಶವು ಸೂರ್ಯವಂಶದ ರಾಜರ ಚರಿತ್ರೆಯನ್ನು ವಸ್ತುವನ್ನಾಗಿ ಹೊಂದಿದೆ. 29 ರಾಜರ ಚರಿತ್ರ ವರ್ಣನೆಯುಳ್ಳ ಈ ಕಾವ್ಯದಲ್ಲಿ ಯಾವೊಂದು ವರ್ಣನೆಯೂ ಪುನರುಕ್ತವಾಗಿಲ್ಲ. ಒಂದು ಎಳೆಯಲ್ಲಿ ಪೋಣಿಸಿದ ವಿವಿಧ ಮಣಿಗಳಂತೆ ಎಲ್ಲಾ ವರ್ಣನೆಗಳೂ ಸೇರಿ ಒಂದು ದಿವ್ಯಹಾರವಾಗಿದೆ. ಇದರ ಶೈಲಿ ಲಲಿತ, ಭಾಷೆ ಸುಲಭ, ವರ್ಣನೆಗಳು ಮನೋಹರ. ಸಂಸ್ಕೃತದ ಪ್ರಥಮಭ್ಯಾಸಿಗಳು ಮೊದಲು ರಘುವಂಶವನ್ನು ಓದುವ ಪರಿಪಾಠ ಇದಕ್ಕೆ ನಿದರ್ಶನ.

ಕವಿತಾಕಾಮಿನಿವಿಲಾಸ, ಕವಿಕುಲಗುರು ಎಂಬ ಮನ್ನಣೆಗೆ ಪಾತ್ರನಾದ ಕಾಳಿದಾಸನು ಸಂಸ್ಕೃತ ಸಾಹಿತ್ಯಕ್ಕೆ ನೀಡಿದ ಅನರ್ಘ್ಯರತ್ನ ಈ ರಘುವಂಶ. ಅವನಿಗೆ ಇಡೀ ಭರತ ಖಂಡದ ಸಮಗ್ರವಾದ ಪರಿಚಯವಿತ್ತೆಂದು ಈ ಕೃತಿಯಿಂದ ತಿಳಿದುಬರುತ್ತದೆ. ಚೇತೋಹಾರಿಯಾದ ಉಪಮೆಗಳನ್ನು ನೀಡುವುದರಲ್ಲಿ ಕಾಳಿದಾಸನು ಅಗ್ರಗಣ್ಯ. ಪ್ರಸ್ತುತ ಪಠ್ಯವಾದ ರಘುವಂಶದ ಮೊದಲನೇ ಸರ್ಗದಲ್ಲಿ ರಘುವಂಶದ ರಾಜರ ವರ್ಣನೆಯನ್ನು ಕವಿಯು ಮಾಡುತ್ತಾ ರಾಜಧರ್ಮದ ಶ್ರೇಷ್ಠತೆ, ಹಾಗೂ ಪ್ರಜೆಗಳೂ ರಾಜಾಜ್ಞೆಯನ್ನು ಪಾಲಿಸುತ್ತಾ ಪ್ರಜಾಧರ್ಮವನ್ನು ಅನುಸರಿಸುವುದನ್ನು ವಿವರಿಸಿದ್ದಾನೆ. ರಾಜರ ಮತ್ತು ಪ್ರಜೆಗಳ ಮಧುರ ಬಾಂಧವ್ಯದ ಆದರ್ಶವನ್ನು ಇಲ್ಲಿ ಕಾಣಬಹುದು.

ಸೂರ್ಯ ಪುತ್ರನಾದ ವೈವಸ್ವತ ಮನುವಿನ ವಂಶದಲ್ಲಿ ಜನಿಸಿದ ದಿಲೀಪನು ತನ್ನ ಪತ್ನಿಯಾದ ಸುದಕ್ಷಿಣೆಯೊಡನೆ ಕುಲಗುರುಗಳಾದ ವಸಿಷ್ಠರ ಬಳಿ ಹೋಗಿ ತನಗೆ ಸಂತತಿಯಾಗಿಲ್ಲವೆಂಬ ಪರಿತಾಪವನ್ನು ಅವರಲ್ಲಿ ನಿವೇದಿಸಿ ಸಂತತಿಯಾಗುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುವುದು. ವಸಿಷ್ಠರು ಕಾಮಧೇನುವಿನ ಶಾಪದಿಂದ ನಿನಗೆ ಸಂತತಿಯಾಗಲಿಲ್ಲವೆಂದೂ, ಈಗ ಕಾಮಧೇನುವು ಇಲ್ಲಿ ಇಲ್ಲದಿರುವುದರಿಂದ ಇಲ್ಲಿಯೇ ಇರುವ ಅವಳ ಮಗಳಾದ ನಂದಿನಿಯನ್ನು ಸೇವಿಸು ಎಂದು ದಿಲೀಪನಿಗೆ ಆಜ್ಞೆ ಮಾಡುವುದು ರಾಜನು ಆಶ್ರಮದಲ್ಲಿಯೇ ರಾತ್ರಿಯನ್ನು ಕಳೆಯುವುದು. ಇಷ್ಟು ವಿಷಯಗಳು ವರ್ಣಿತವಾಗಿವೆ.

ಸಂಸ್ಕೃತ ಭಾಷೆಯ ಅಂತಃಸತ್ವವನ್ನು ಅರಿಯಲು ಅನುಕೂಲವಾಗುವ ಈ ರಘುವಂಶ ಮಹಾಕಾವ್ಯದ ಮೊದಲನೇ ಸರ್ಗವನ್ನು ಪ್ರಥಮ ಬಿ.ಎ/ಬಿ.ಎಸ್ಸಿ/ಫ್ಯಾಡ್ ವಿದ್ಯಾರ್ಥಿಗಳಿಗೆ ಸಂಸ್ಕೃತ ಪಠ್ಯಪುಸ್ತಕವಾಗಿ ನಿಯಮಿಸಿದ ಸಂಸ್ಕೃತ ಅಧ್ಯಯನ ಮಂಡಳಿಯು ಪಠ್ಯ ಪುಸ್ತಕದ ಸಂಪಾದನಾ

ಕಾರ್ಯವನ್ನು ನನಗೆ ವಹಿಸಿರುವುದರಿಂದ ಇದನ್ನು ಯಥಾಶಕ್ತಿ ಮಾಡಿದ್ದೇನೆ. ರಘುವಂಶದ ಮೊದಲನೆ ಸರ್ಗದ ಮೂಲಪಾಠಕ್ಕೆ ಕನ್ನಡ ಪ್ರತಿಪದಾರ್ಥವನ್ನು ತಾತ್ಪರ್ಯ ಟಿಪ್ಪಣಿ ಸಹಿತವಾಗಿ ಬರೆದು ಈಗಾಗಲೇ ಪ್ರಕಟಿತವಾಗಿದ್ದ **ಮಹಾಮಹೋಪಾಧ್ಯಾಯ ಆಚಾರ್ಯ ಸಾಣೂರು ಭೀಮಭಟ್ಟರು** ಬರೆದ ಪುಸ್ತಕವನ್ನು ಅವಲಂಬಿಸಲಾಗಿದೆ.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಂಗ್ಲಭಾಷೆಯಲ್ಲಿ **ಟಿ.ಕೆ. ರಾಮಚಂದ್ರ ಅಯ್ಯರ್**ರವರು ಬರೆದ **ಆರ್.ಎಸ್. ವಾದ್ಯಾರ್ ಅಂಡ್ ಸನ್ಸ್** ನವರು ಪ್ರಕಟಿಸಿದ ಪುಸ್ತಕದ ಪ್ರಯೋಜನವನ್ನು ಪಡೆಯಲಾಗಿದೆ. ಪೀಠಿಕೆಯ ರಚನೆಯ ಸಂದರ್ಭದಲ್ಲಿ ಸಂಸ್ಕೃತ ಭಾಷಾ ಶಾಸ್ತ್ರ, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ಹಾಗೂ ಈ ಹಿಂದೆ ಪಠ್ಯವಾಗಿದ್ದ ಕಾಳಿದಾಸನ ಕೃತಿಗಳನ್ನು ಅವಲೋಕಿಸಲಾಗಿದೆ. ಎಲ್ಲಾ ಮಹನೀಯರಿಗೂ ನಾನು ಚಿರಋಣಿ.

ಈ ಸಂಪಾದನಾ ಕಾರ್ಯದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಮ್ಮ ತಂದೆಯವರು ಬರೆದ ಪುಸ್ತಕವನ್ನು ಬಳಸಿಕೊಳ್ಳಲು ಅನುಮತಿಯಿತ್ತು, ಪ್ರೋತ್ಸಾಹಿಸಿದ ಸಾಣೂರು ಭೀಮಭಟ್ಟರ ಸುಪುತ್ರರೂ, ವಿದ್ವಾಂಸರೂ ಆದ **ಶ್ರೀಯುತ ಕೃಷ್ಣಮೂರ್ತಿ**ಯವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂದರ್ಭದಲ್ಲಿ ಸಹಕರಿಸಿದ ಮಿತ್ರರಾದ ಜನಾರ್ದನಾಚಾರ್‌ರವರಿಗೂ, ಅನಂತಪದ್ಮನಾಭರವರಿಗೂ ವಂದನೆಗಳು.

ಈ ಪಠ್ಯದ ಸಂಪಾದನಾ ಕಾರ್ಯವನ್ನು ನನಗೆ ವಹಿಸಿ, ಉಪಯುಕ್ತ ಸಲಹೆಗಳನ್ನು ನೀಡಿದ ಸಂಸ್ಕೃತ ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಡಾ॥ ಪಂಕಜನಯನರವರಿಗೂ, ಪ್ರೋತ್ಸಾಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಪ್ರಣಾಮಗಳು.

ಭಾಷಾಧ್ಯಯನವನ್ನು ಸದಾ ಪ್ರೋತ್ಸಾಹಿಸುವ ನಮ್ಮ ಕುಲಪತಿಗಳಾದ ಪ್ರೊ. ಎಸ್. ಜಾಫೆಟ್‌ರವರಿಗೆ ನನ್ನ ಹೃತ್ಪೂರ್ವಕ ಪ್ರಣಾಮಗಳು. ಈ ಪಠ್ಯಪುಸ್ತಕವನ್ನು ಅಂದವಾಗಿ ಮುದ್ರಿಸಿದ ಪ್ರಸಾರಾಂಗದ ನಿರ್ದೇಶಕರಿಗೂ, ಸಿಬ್ಬಂದಿಗಳಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಪಠ್ಯ ಭಾಗದ ಡಿ.ಟಿ.ಪಿ. ಕಾರ್ಯವನ್ನು ಅತ್ಯಂತ ದಕ್ಷತೆಯಿಂದ ಪೂರ್ಣಗೊಳಿಸಿದ ಶ್ರದ್ಧಾ ಗ್ರಾಫಿಕ್ಸ್‌ನ ಶ್ರೀಮತಿ ದೀಪಾರವರಿಗೂ ನಾನು ಆಭಾರಿಯಾಗಿದ್ದೇನೆ.

**ಪ್ರೊ. ಎನ್.ಆರ್. ಸುಬ್ರಹ್ಮಣ್ಯ**

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸಂಸ್ಕೃತ ವಿಭಾಗ,

ಸಿಂಧಿ ಕಾಲೇಜು, ಕೆಂಪಾಪುರ, ಬೆಂಗಳೂರು

## महाकवि–कालिदास–विरचितम्

# रघुवंशम् – प्रथमः सर्गः

## *ವಿಷಯಾನುಕ್ರಮಣಿಕೆ :*


| | | | ಪುಟಗಳ ಸಂಖ್ಯೆ |
|---|---|---|---|
| 1. ಪೀಠಿಕೆ | – | ಕನ್ನಡ | 7–23 |
| 2. ಪೀಠಿಕೆ | – | ಆಂಗ್ಲ | 24–35 |
| 3. ಪ್ರಥಮಸರ್ಗ | – | ಮೂಲ | 36–48 |
| 4. ಅನ್ವಯ ಮತ್ತು ತಾತ್ಪರ್ಯ | – | ಕನ್ನಡ | 49–85 |
| 5. ವ್ಯಾಕರಣಾಂಶಗಳು | – | ಸಂಸ್ಕೃತ | 86–105 |
| 6. ಅನುವಾದ | – | ಆಂಗ್ಲ | 106–120 |
| 7. ಮಾದರಿ ಪ್ರಶ್ನೆಪತ್ರಿಕೆ | – | ಸಂಸ್ಕೃತ | 121–125 |

# ಕಾಳಿದಾಸನ ಮಹಾಕಾವ್ಯಗಳು

**ಕಾವ್ಯ :**

ಸಂಸ್ಕೃತದಲ್ಲಿ 'ಕಾವ್ಯ' ಎಂಬ ಪದವನ್ನು ವಿಶಾಲವಾದ ಅರ್ಥದೊಂದಿಗೆ ಬಳಸುತ್ತಾರೆ. **'ಕವೇಃ ಕರ್ಮ ಕಾವ್ಯಮ್'** ಎಂಬ ವ್ಯುತ್ಪತ್ತಿಯಂತೆ ಕವಿ ಬರೆದದ್ದೆಲ್ಲವೂ ಕಾವ್ಯವೇ ಆಗುತ್ತದೆ. ಈ ಕಾವ್ಯದಲ್ಲಿ ಮುಖ್ಯವಾಗಿ ಎರಡು ವಿಧ. ಕೇಳಿ ಅಥವಾ ಓದಿ ಮಾತ್ರ ಆನಂದಿಸಲು ಯೋಗ್ಯವಾಗಿರುವ ಮೊದಲನೆಯ ಪ್ರಕಾರಕ್ಕೆ ಶ್ರವ್ಯಕಾವ್ಯವೆಂದು ಹೆಸರು. ಕೇಳುವುದು ಅಥವಾ ಓದುವುದರ ಜೊತೆಗೆ ನೋಡಿ ಕೂಡ ಆನಂದಿಸಲು ಯೋಗ್ಯವಾಗಿರುವ ಎರಡನೆಯ ಭೇದವು ದೃಶ್ಯಕಾವ್ಯ. ಶ್ರವ್ಯಕಾವ್ಯದಲ್ಲಿ  ಗದ್ಯ, ಪದ್ಯ ಮತ್ತು ಚಂಪುಗಳೆಂದು ಮತ್ತೆ ಮೂರು ವಿಧಗಳುಂಟು. **'ವೃತ್ತಬಂಧೋಜ್ಝಿತಂ ಗದ್ಯಮ್'**–ಅಂದರೆ ಅಕ್ಷರ ಪಾದ ಮುಂತಾದವುಗಳ ನಿಯಮವಿಲ್ಲದ ರಚನೆಯು ಗದ್ಯ. **'ಪದ್ಯಂ ತತ್ರ ಚತುಷ್ಪದಮ್'**–ನಾಲ್ಕು ಪಾದಗಳುಳ್ಳ ರಚನೆಯು ಗದ್ಯ. ಗದ್ಯ–ಪದ್ಯಗಳೆರಡೂ ಹಿತ–ಮಿತವಾಗಿ ಸೇರಿಕೊಂಡಿರುವ ಕಾವ್ಯಪ್ರಕಾರವೇ ಚಂಪೂ– **'ಗದ್ಯಪದ್ಯಮಯಂ ಕಾವ್ಯಂ ಚಂಪೂರಿತ್ಯಭಿಧೀಯತೇ'**. ದೃಶ್ಯಕಾವ್ಯದಲ್ಲಿಯೂ ರೂಪಕ ಮತ್ತು ಉಪರೂಪಕಗಳೆಂಬ ಭೇದವಿದೆ.

ಪದ್ಯ ಕಾವ್ಯವನ್ನು ಮಹಾಕಾವ್ಯ, ಖಂಡಕಾವ್ಯ ಮತ್ತು ಮುಕ್ತಕಗಳೆಂದು ಪುನಃ ವಿಭಾಗಿಸಬಹುದು. ಹೆಸರಿಗೆ ತಕ್ಕಂತೆ ಗಾತ್ರದಲ್ಲಿ ದೊಡ್ಡದಾಗಿರುವುದು ಮಹಾಕಾವ್ಯ. ಇದರ ಲಕ್ಷಣಗಳಲ್ಲಿ ಕೆಲವನ್ನು ಮಾತ್ರ ಪಡೆದುಕೊಂಡಿರುವುದು ಖಂಡಕಾವ್ಯ. ಬಿಡಿಪದ್ಯವು ಮುಕ್ತಕ. ಅನೇಕ ಸುಭಾಷಿತಗಳು ಈ ಗುಂಪಿಗೆ ಸೇರುತ್ತವೆ.

ಸಂಸ್ಕೃತ ಸಾಹಿತ್ಯದಲ್ಲಿ ಮಹಾಕಾವ್ಯಗಳು ಅಧಿಕ ಸಂಖ್ಯೆಯಲ್ಲಿಯೇ ಇವೆ. ಸಾಮಾನ್ಯವಾಗಿ ಎಲ್ಲ ಆಲಂಕಾರಿಕರೂ ಇದರ ಲಕ್ಷಣವನ್ನು ಚರ್ಚಿಸಿದ್ದಾರೆ. ಆದರೆ ನಮಗೆ ಇಂದು ದೊರಕುತ್ತಿರುವ ಲಕ್ಷಣಗಳು ಪ್ರಖ್ಯಾತ ಮಹಾಕಾವ್ಯಗಳ ಸ್ವರೂಪವರ್ಣನೆಗಳು ಮಾತ್ರ. ಏಕೆಂದರೆ ಎಷ್ಟೋ ಮಹಾಕಾವ್ಯಗಳಲ್ಲಿ ಇವುಗಳ ಅನೇಕ ಲಕ್ಷಣಗಳನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ವಿವರಗಳನ್ನು

ತಿಳಿಯಬಯಸುವವರು ಶ್ರೀ ಟಿ.ವಿ. ವೆಂಕಟಾಚಲ ಶಾಸ್ತ್ರಿಯವರ **"ಮಹಾಕಾವ್ಯ ಲಕ್ಷಣ"** ಎಂಬ ಗ್ರಂಥವನ್ನು ಅವಲೋಕಿಸಬಹುದು.

ಮಹಾಕಾವ್ಯದ ಲಕ್ಷಣವನ್ನು ನಿರೂಪಿಸಿದವರಲ್ಲಿ ಸಾಹಿತ್ಯ ದರ್ಪಣಕಾರನಾದ ವಿಶ್ವನಾಥನು ಮೊದಲಿಗನಲ್ಲದಿದ್ದರೂ ಈತನ ಲಕ್ಷಣವು ಹೆಚ್ಚು ಸಮರ್ಪಕ ಅಥವಾ ಸ್ವಸಂಪೂರ್ಣವಾಗಿರುವುದರಿಂದ ಇವನು ಕೊಟ್ಟಿರುವ ಲಕ್ಷಣವನ್ನು ಇಲ್ಲಿ ಕೊಡಲಾಗಿದೆ.

सर्गबन्धो महाकाव्यं तत्रैको नायकः सुरः ।
सद्वंशः क्षत्रियो वापि धीरोदात्तगुणान्वितः ॥
एकवंशभवा भूपाः कुलजा बहवोऽपि वा ।
शृङ्गारवीरशान्तानामेकोऽङ्गी रस इष्यते ॥
अङ्गानि सर्वेऽपि रसाः सर्वे नाटकसन्धयः ।
इतिहासोद्भवं वृत्तमन्यद्वा सज्जनाश्रयम् ॥
चत्वारस्तस्य वर्गाः स्युस्तेष्वेकं च फलं भवेत् ।
आदौ नमस्क्रियाऽऽशीर्वा वस्तुनिर्देश एव वा ॥
क्वचिन्निन्दा खलादीनां सतां च गुणकीर्तनम् ।
एकवृत्तमयैः पद्यैरवसानेऽन्यवृत्तकैः ॥
नातिस्वल्पा नातिदीर्घा सर्गा अष्टाधिका इह ।
नानावृत्तमयः क्वापि सर्गः कश्चन दृश्यते ॥
सर्गान्ते भाविसर्गस्य कथायाः सूचनं भवेत् ।
सन्ध्यासूर्येन्दुरजनीप्रदोषध्वन्तवासराः ॥
प्रातर्मध्याह्नमृगयाशैलर्तुवनसागराः ।
सम्भोगविप्रलम्भौ च मुनिस्वर्गपुराध्वराः ॥
रणप्रयाणोपयममन्त्रपुत्रोदयादयः ।
वर्णनीया यथायोगं साङ्गोपाङ्गा अमी इह ॥

कवेर्वृत्तस्य वा नाम्ना नायकस्येतरस्य वा ।

नामस्य सर्गोपादेयकथया सर्गनाम तु ॥

(Sahitya Darpana 6.315 -325)

–'ಸರ್ಗಬದ್ಧವಾದುದು ಮಹಾಕಾವ್ಯ. ಅದರಲ್ಲಿ ಧೀರೋದಾತ್ತ ಗುಣಾನ್ವಿತನಾದ ಒಬ್ಬ ದೇವತೆಯೋ ಅಥವಾ ಸದ್ವಂಶಜನಾದ ಒಬ್ಬ ಕ್ಷತಿಯನೋ ನಾಯಕನಾಗಿರುತ್ತಾನೆ. ಸತ್ಕುಲ ಪ್ರಸೂತರಾಗಿದ್ದು, ಒಂದೇ ವಂಶದಲ್ಲಿ ಹುಟ್ಟಿದ ಅನೇಕ ರಾಜರೂ ಕೆಲವೊಮ್ಮೆ ನಾಯಕರಾಗಿರುವುದುಂಟು. ಶೃಂಗಾರ, ವೀರ ಮತ್ತು ಶಾಂತರಸಗಳಲ್ಲಿ ಒಂದು ಪ್ರಧಾನವಾಗಿರುತ್ತದೆ. ಪ್ರಧಾನ ರಸಕ್ಕೆ ಅಧೀನವಾಗಿ ಉಳಿದೆಲ್ಲ ರಸಗಳೂ ಬರುತ್ತವೆ. ಎಲ್ಲ ನಾಟಕ ಸಂಧಿಗಳೂ ಇದರಲ್ಲಿ ಇರುತ್ತವೆ. ಇದರ ಕಥಾವಸ್ತುವು ಇತಿಹಾಸದಿಂದ ಹುಟ್ಟಿದ್ದಾಗಿರಬಹುದು; ಅಥವಾ ಇತರ ಸತ್ಪುರುಷರನ್ನು ಕುರಿತದ್ದಾಗಿರಬಹುದು. ಇದರಲ್ಲಿ ಚತುರ್ವರ್ಗಗಳೂ ಬಂದಿದ್ದು ಅವುಗಳಲ್ಲಿ ಒಂದರ ಫಲವು ಮುಖ್ಯವಾಗಿ ಉದ್ದಿಷ್ಟವಾಗಿರುತ್ತದೆ. ಆದಿಯಲ್ಲಿ ನಮಸ್ಕಾರ ಆಶೀರ್ವಚನ ವಸ್ತು ನಿರ್ದೇಶ ಇವುಗಳಲ್ಲಿ ಒಂದು ಇರುತ್ತದೆ. ಕೆಲವೊಮ್ಮೆ ದುಷ್ಟರ ನಿಂದೆ ಮತ್ತು ಸಜ್ಜನರ ಗುಣಕೀರ್ತನೆ ಇರುತ್ತವೆ. ಏಕವಿಧವಾದ ವೃತ್ತಜಾತಿಯ ಪದ್ಯಗಳಿಂದ ರಚಿತವಾಗಿ ಕೊನೆಯಲ್ಲಿ ಭಿನ್ನ ವೃತ್ತಗಳಿಂದ ಕೂಡಿರುವ, ಅತಿ ಸಂಕ್ಷೇಪವೂ ಅತಿ ವಿಸ್ತಾರವೂ ಆಗಿರದ ಸಂಖ್ಯೆಯಲ್ಲಿ ಎಂಟಕ್ಕೆ ಹೆಚ್ಚಾಗಿರುವ ಸರ್ಗಗಳಿಂದ ಕೂಡಿರುತ್ತದೆ. ಒಮ್ಮೊಮ್ಮೆ ನಾನಾ ವೃತ್ತಮಯವಾದ (ಪದ್ಯಗಳಿಂದ ಕೂಡಿರುವ) ಸರ್ಗವೂ ಕಂಡುಬರುತ್ತದೆ. ಸರ್ಗದ ಕೊನೆಯಲ್ಲಿ ಮುಂದಿನ ಸರ್ಗದ ಕಥೆಯ (ವಿಷಯದ) ಸೂಚನೆಯಿರಬೇಕು. ಸಂಧ್ಯೆ, ಸೂರ್ಯ, ಚಂದ್ರ, ರಜನಿ, ಪ್ರದೋಷ, ಕತ್ತಲೆ, ಹಗಲು, ಪ್ರಾತಃಕಾಲ, ಮಧ್ಯಾಹ್ನ, ಬೇಟೆ, ಬೆಟ್ಟ, ಋತುಗಳು ವನ, ಸಾಗರ, ಸಂಭೋಗ, ವಿಪ್ರಲಂಭ, ಮುನಿ, ಸ್ವರ್ಗ, ಪುರ, ಅಧ್ವರ, ಯುದ್ಧ, ಪ್ರಯಾಣ, ವಿವಾಹ, ಮಂತ್ರ, ಪುತ್ರೋದಯ ಮೊದಲಾದವುಗಳು ಯಥಾ ಯೋಗ್ಯವಾಗಿ ಸಾಂಗೋಪಾಂಗವಾಗಿ ವರ್ಣಿಸಲ್ಪಡಬೇಕು. ಕವಿ, ಇತಿವೃತ್ತ, ನಾಯಕ ಅಥವಾ ಇತರ ಯಾವುದಾದರೂ ಒಂದರ ಹೆಸರನ್ನು ಅವಲಂಬಿಸಿ ಮಹಾಕಾವ್ಯಕ್ಕೆ ಹೆಸರಿಡಬೇಕು. ಸರ್ಗದಲ್ಲಿ ಉಪಾದೇಯವಾದ ಕಥೆಯಿಂದ ಸರ್ಗಕ್ಕೆ ಹೆಸರಿಡಬೇಕು.

# ಕಾಳಿದಾಸ

ವರಕವಿ, ಕವಿಕುಲಗುರು–ಎಂಬ ಶ್ಲಾಘನೆಗೆ ಪಾತ್ರನಾಗಿ ಅಮರ ಕೃತಿಗಳನ್ನು ರಚಿಸಿ ಸಂಸ್ಕೃತಸಾಹಿತ್ಯಕ್ಕೆ ಶಾಶ್ವತ ಕೀತಿಯನ್ನು ಗಳಿಸಿಕೊಟ್ಟ ಕಾಳಿದಾಸನ ಕಾಲ, ದೇಶ, ಜೀವಿತಾದಿಗಳು ಇಂದಿಗೂ ನಿಶ್ಚಿತವಾಗಿಲ್ಲ. ಅವನ ಕಾವ್ಯಗಳು ವಿಶ್ವಮನ್ನಣೆ ಪಡೆದಿವೆ. ಅಭಿಜ್ಞಾನ ಶಾಕುಂತಲವು ಜಗತ್ತಿನ ಬೆಳೆದ ಭಾಷೆಗಳಿಗೆಲ್ಲಾ ಭಾಷಾಂತರಗೊಂಡಿದೆ. ಮೊಟ್ಟ ಮೊದಲಿಗೆ ಇದನ್ನು ಸರ್ ವಿಲಿಯಂ ಜೋನ್ಸ್ ಅವರು 1789ರಲ್ಲಿ ಪಾಶ್ಚಾತ್ಯ ಭಾಷೆಗೆ ಅನುವಾದಿಸಿದರು. ಕಾಳಿದಾಸನನ್ನು ಕುರಿತು, ಅಪಾರ ವಿಚಾರ ಸಾಹಿತ್ಯ ಬೆಳೆದಿದೆ. ಸಂಶೋಧಕ ವಾದ ವಿವಾಗಳಿಗೇನೂ ಕಡಿಮೆಯಿಲ್ಲ. ಆದರೆ ಪ್ರಯತ್ನಕ್ಕೆ ತಕ್ಕ ಫಲ ದೊರೆತಿಲ್ಲ. ಶಾಸನವೇ ಮೊದಲಾದ ಬಾಹ್ಯ ಸಾಧನದಿಂದಲೂ ಕಾವ್ಯಗತ ಸಾಮಗ್ರಿಯಿಂದಲೂ ಕವಿಯ ಕಾಲ, ದೇಶಾದಿಗಳನ್ನು ಕಾಣಲು ಹೊರಟ ಫಲವಾಗಿ ಮೂಡಿರುವ ಹಲವು ಮತಗಳಲ್ಲಿ ಪ್ರಧಾನವಾಗಿ ಎರಡು ಮತಗಳನ್ನಿಲ್ಲಿ ಪ್ರಸ್ತಾಪಿಸಲಾಗುವುದು.

ಮಹಾಪುರುಷರ ವಿಷಯದಲ್ಲಿ ಪವಾಡ ಕಥೆಗಳು ಹುಟ್ಟಿಕೊಂಡಿರುವಂತೆ ಕಾಳಿದಾಸನ ವಿಷಯದಲ್ಲಿಯೂ ಹಲವು ದಂತಕಥೆಗಳು ಪ್ರಚಾರದಲ್ಲಿವೆ. ಇವು ಕಥೆ ಕಟ್ಟಿದವರ ಸರಳತೆ, ಕುತೂಹಲ, ಅವಿಮರ್ಶಬುದ್ಧಿ ಮತ್ತು ಕವಿಯ ಬಗ್ಗೆ ಮೆಚ್ಚುಗೆಗಳನ್ನು ಪ್ರಕಟಿಸುತ್ತವೆಯೇ ಹೊರತು ಕವಿಯ ಕಾಲ, ದೇಶ, ವ್ಯಕ್ತಿತ್ವಾದಿಗಳ ನಿರ್ಣಯಕ್ಕೆ ಯೋಗ್ಯ ಪ್ರಮಾಣಗಳಾಗುವುದಿಲ್ಲ, ಕಾಳಿದಾಸನು ದಡ್ಡ ಶಿಖಾಮಣಿಯಾದ ಕುರುಬನಾಗಿದ್ದು, ಮಂತ್ರಿಯ ನೆರವಿನಿಂದ ಪ್ರಾಜ್ಞಳಾದ ರಾಜಕುಮಾರಿಯನ್ನು ಮದುವೆಯಾಗಿ ಕಾಳಿಯ ವರದಿಂದ ಕವಿಯಾದನೆಂಬ ಒಂದು ಕಥೆ ಇದೆ.

ವೇದ, ಶಾಸ್ತ್ರ, ಪುರಾಣಾದಿಗಳ ಪರಿಚಯವಿರುವ, ಕಾವ್ಯ ರಚನೆಯಲ್ಲಿ ಸಿದ್ಧಿ ಪಡೆದು ರಸಋಷಿಯೆನಿಸಿದ ಕಾಳಿದಾಸನನ್ನು ಕ್ಷಣ ಮಾತ್ರದಲ್ಲಿ ಕಾಳಿಯ ಬೀಜಾಕ್ಷರ ಪ್ರಭಾವದಿಂದ ಮಹಾಕವಿಯಾದನೆಂದು ಹೇಳಿದರೆ ನಂಬುವುದು ಹೇಗೆ ಸಾಧ್ಯ. ಇದು ಕಾಳಿದಾಸನೆಂಬ ಹೆಸರನ್ನೂ, ವರಕವಿ ಎಂಬ ಕೀರ್ತಿಯನ್ನೂ ಅವಲಂಬಿಸಿ ಕೈಕಾಲು ಬೆಳೆದು ಆಗಿರುವ ಕಥೆಯಾಗಿ ತೋರುತ್ತದೆ. ಧಾರಾನಗರಿಯ ಭೋಜನ (ಕ್ರಿ.ಶ. 11ನೇ ಶ.ಮಾ)

ಆಸ್ಥಾನಕವಿಯಾಗಿದ್ದು, ಸಮಸ್ಯಾ ಪೂರಣ ಮಾಡುತ್ತಿದ್ದನೆಂಬುದು ಮತ್ತೊಂದು ಕಥೆ. ಕಾಳಿದಾಸನು ಇಷ್ಟು ಆರ್ವಾಚೀನನಲ್ಲವೆಂಬುದಕ್ಕೆ ಸಾಕಷ್ಟು ಪ್ರಮಾಣಗಳಿವೆ. ಸ್ವತಃ ಕವಿಯೂ, ಕವಿಗಳಿಗೆ ಆಶ್ರಯದಾತನೂ ಆಗಿದ್ದು ಭೋಜರಾಜನ ಆಸ್ಥಾನದಲ್ಲಿ ಕಾಳಿದಾಸನಂತಹ ಕವಿಯಿದ್ದರೆ ಶೋಭಿಸುತ್ತದೆಂದು ಭಾವಿಸಿ ಯಾರೋ ಈ ಕಥೆಯನ್ನು ಕಟ್ಟಿರಬೇಕು. ಕಾಳಿದಾಸನು ಭವಭೂತಿಯ (ಕ್ರಿ.ಶ. 8ನೇ ಶ.ಮಾ) ಸಮಕಾಲೀನನೆಂದೂ, "ಅವಿದಿತಗತ ಯಾಮಾ ರಾತ್ರಿ ರೇವಂವ್ಯರಂಸೀತ್" ಎಂಬ ಭವಭೂತಿಯ ಮಾತನ್ನು "ರಾತ್ರಿರೇವ ವ್ಯರಂ ಸೀತ್" ಎಂದು ತಿದ್ದಿದನೆಂದೂ ಒಂದು ಹೇಳಿಕೆಯಿದೆ. ಇದಕ್ಕೆ ಯಾವ ಆಧಾರವೂ ಇಲ್ಲ. ಕಾಳಿದಾಸನನ್ನು ಪ್ರೀತಿಸುವವನು ಅರ್ಥಪುಷ್ಟಿಯ ದೃಷ್ಟಿಯಿಂದ ತಿದ್ದಿ ಈ ಕಥೆ ಕಟ್ಟಿರಬೇಕು.

ಕುಮಾರದಾಸನ ಕಾಲದಲ್ಲಿ ಸಿಂಹಳ ದ್ವೀಪಕ್ಕೆ ಹೋಗಿ ಅಲ್ಲಿ ವೇಶ್ಯಾಗೃಹದಲ್ಲಿ ಹತನಾದನೆಂಬ ಇನ್ನೊಂದು ಕಥೆಯಿದೆ. ಕುಮಾರದಾಸನ ಕಾಲ ಕ್ರಿ.ಶ. 6ನೇ ಶತಮಾನ, ಕಾಳಿದಾಸನು ಇನ್ನೂ ಹಿಂದಿನವನೆಂಬುದಕ್ಕೆ ಆಧಾರಗಳಿವೆ. ವೇಶ್ಯಾ ಸಂಬಂಧವಾದ ಅಭಾಸದ ಕಥೆಗಳಿಗೆ ಅವರ ಕಾವ್ಯಗಳ ಶೃಂಗಾರ ಕಾರಣವಾಗಿರಬಹುದು.

ಕಾಳಿದಾಸನು ವಿಕ್ರಮಾದಿತ್ಯನ ಆಸ್ಥಾನದ ನವಮಣಿಗಳಲ್ಲಿ ಒಬ್ಬನೆಂಬ ಹೇಳಿಕೆಯಿದೆ :

धन्वन्तरि क्षपणकामरसिम्ह शङ्कु वेताळभट्टघटकर्पर काळिदासाः ।
ख्यातो वराहमिहिरो नृपतेस्सभायां रत्नानि वै वररुचिर्नवविक्रमस्य ॥

ಧನ್ವಂತರಿ ಕ್ಷಪಣಾದಿಗಳು ಭಿನ್ನ ಭಿನ್ನಕಾಲದವರು, ಅವರೆಲ್ಲರ ಕಾಲವು ಗೊತ್ತಿಲ್ಲ. ವರಾಹಮಿಹಿರನು ಕ್ರಿ.ಶ. 587 ರಲ್ಲಿ ಕಾಲವಾದನೆಂದು ಹೇಳಲು ಆಧಾರವಿದೆ. ಮಿಕ್ಕವರೂ ಸುಮಾರು ಇದೇ ಕಾಲದವರೆಂದು ಸಾಧಿಸಿದರೂ ಕಾಳಿದಾಸನು ಇಷ್ಟು ಈಚಿನವನಲ್ಲವೆಂಬುದಕ್ಕೆ ಪ್ರಮಾಣಗಳಿವೆ. ನವಮಣಿಗಳನ್ನು ಆಯ್ದು ಒಟ್ಟುಗೂಡಿಸಿದವನ ಬುದ್ಧಿಯನ್ನು ಮೆಚ್ಚಬಹುದಾದರೂ ಈ ಹೇಳಿಕೆಯು ಕಾಳಿದಾಸನ ನಿರ್ಣಯಕ್ಕೆ ಸಾಧು ಪ್ರಮಾಣವಲ್ಲ. ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದನೆಂಬ ಅಂಶವೂ ವಿಚಾರಾರ್ಹ, ಭರತಖಂಡದಲ್ಲಿ ಈ ಬಿರುದಿನ ಹಲವು ದೊರೆಗಳಿದ್ದರೂ ಕ್ರಿ.ಪೂ. 57 ರಲ್ಲಿ ಶಕರನ್ನು ಗೆದ್ದು ತನ್ನ ಶಕೆಯನ್ನು ಪ್ರಾರಂಭಿಸಿದ ವಿಕ್ರಮಾದಿತ್ಯನೇ ನವಮಣಿಗಳ ಪೋಷಕನೆಂಬುದು

ಸಂಪ್ರದಾಯದಿಂದ ಬಂದ ನಂಬಿಕೆ. ಕಾಳಿದಾಸನು ಇಷ್ಟು ಪ್ರಾಚೀನನೆಂಬುದನ್ನು ಪಾಶ್ಚಾತ್ಯ ವಿದ್ವಾಂಸರು ಒಪ್ಪುವುದಿಲ್ಲ.

ಅಲ್ಲದೆ ಅವನು ಇನ್ನೂ ಈಚಿನವನೆಂಬುದಕ್ಕೆ ಪ್ರಮಾಣಗಳಿವೆ. ಕ್ರಿ.ಶ. 6ನೇ ಶತಮಾನದಲ್ಲಿದ್ದ ಯಶೋಧರ್ಮನಿಗೂ ವಿಕ್ರಮಾದಿತ್ಯನೆಂಬ ಬಿರುದಿತ್ತು. ಕಾಳಿದಾಸನು ಇಷ್ಟು ಈಚಿನವನಲ್ಲವೆಂಬುದಕ್ಕೂ ವಿಶ್ವಾಸಾರ್ಹ ಆಧಾರಗಳಿವೆ. ಗುಪ್ತರ ಪ್ರಸಿದ್ಧ ದೊರೆಯಾದ ಇಮ್ಮಡಿಯ ಚಂದ್ರಗುಪ್ತ (357–413) ಮತ್ತು ಇವನ ಮೊಮ್ಮಗನಾದ ಸ್ಕಾಂದಗುಪ್ತ (455–480) ಇವರಿಗೂ ವಿಕ್ರಮಾದಿತ್ಯರೆಂಬ ಬಿರುದಿದ್ದಿತು. ಕಾಳಿದಾಸನ ಕಾವ್ಯಗಳು ಶಾಂತಿ, ಸಂತೃಪ್ತಿಗಳಿಂದ ತುಂಬಿದ ಜನ ಜೀವನವನ್ನು ಪ್ರತಿಬಿಂಬಿಸುತ್ತವೆ. ಗುಪ್ತರ ಕಾಲದಲ್ಲಿ ದೇಶ ಸರ್ವತೋಮುಖವಾದ ಅಭ್ಯುದಯವನ್ನು ಪಡೆದಿದ್ದಿತು. ಶತ್ರುಪೀಡೆ ಇರಲಿಲ್ಲ. ಸೌಭಾಗ್ಯ ಸಂಪತ್ತುಗಳು ನೆಲೆಸಿದ್ದವು. ಕಲೆ ಸಾಹಿತ್ಯಗಳಿಗೆ ಹೆಚ್ಚು ಪ್ರೋತ್ಸಾಹವಿದ್ದಿತು. ಗುಪ್ತರ ಕಾಲವನ್ನು ಸಂಸ್ಕೃತ ಸಾಹಿತ್ಯದ ಸ್ವರ್ಣಯುಗವೆಂದು ಹೇಳುವುದುಂಟು. ಇಂತಹ ಕಾಲದಲ್ಲಿಯೇ ಸಂಸ್ಕೃತ ಸಾಹಿತ್ಯ ಗಿರಿಯ ಉತ್ತುಂಗ ಶಿಖರ ಮುಟ್ಟಿದ ಕಾಳಿದಾಸನು ಜೀವಿಸಿರಬೇಕೆಂದು ಊಹಿಸಿದರೆ ತಪ್ಪಾಗಲಾರದು. ವಿಕ್ರಮಾದಿತ್ಯನೆಂಬ ಬಿರುದಿನಿಂದ ಉಜ್ಜಯಿನಿಯಲ್ಲಿ ಆಳುತ್ತಿದ್ದ ಇಮ್ಮಡಿ ಚಂದ್ರಗುಪ್ತನು ಕಾಳಿದಾಸನ ಪೋಷಕನಾಗಿದ್ದಿರಬಹುದು. ಅವನ ಕಾವ್ಯಗಳ ಹಲವು ಸಂಗತಿಗಳು ಈ ವಿಚಾರವನ್ನು ಪೋಷಿಸುತ್ತವೆ.

ಪುರಾಣಾದಿಗಳು ಪುರೂರವಸ್ಸನ್ನು ವಿಕ್ರಮನೆಂದು ಕರೆಯದಿದ್ದರೂ ಕಾಳಿದಾಸನು ಪೋಷಕನ ಬಿರುದನ್ನು ಶಾಶ್ವತಗೊಳಿಸಲು ಬಯಸಿ ತನ್ನ ಒಂದು ನಾಟಕಕ್ಕೆ 'ವಿಕ್ರಮೋರ್ವಶೀಯ' ಎಂಬ ಹೆಸರನ್ನಿಟ್ಟಿರುವಂತೆ ತೋರುತ್ತದೆ. 'ಕುಮಾರಸಂಭವ'ವು ದೊರೆಯ ಮಗನಾದ ಕುಮಾರಗುಪ್ತನ ಜನನವನ್ನೂ, ಮಾಲವಿಕಾಗ್ನಿಮಿತ್ರದಲ್ಲಿ ಬಂದಿರುವ ಅಶ್ವಮೇಧಯಾಗದ ಮತ್ತು ರಘುವಂಶದಲ್ಲಿ ಬಂದಿರುವ ರಘುವಿನ ದಿಗ್ವಿಜಯಗಳು ದೊರೆಯ ತಂದೆಯಾದ ಸಮುದ್ರಗುಪ್ತನ ಅಶ್ವಮೇಧಯಾಗ ಮತ್ತು ದಂಡಯಾತ್ರೆಗಳನ್ನೂ ಸೂಚಿಸುವಂತಿವೆ. ಹೀಗೆ ಕಾಳಿದಾಸನು ತನ್ನ ಕಾವ್ಯಗಳ ಮೂಲಕ ತನ್ನ ಪೋಷಕನ ಬಗ್ಗೆ ಅವರ ಗೌರವಗಳನ್ನು ಪ್ರಕಟಿಸಿರಬಹುದು. ರವಿಕೀರ್ತಿಯ ಐಹೊಳೆ ಶಿಲಾಶಾಸನ (ಕ್ರಿ.ಶ. 634)ದಲ್ಲಿ ಕಾಳಿದಾಸನ ಪ್ರಶಂಸೆ ಇದೆ. ಕ್ರಿ.ಶ. 7ನೆಯ ಶತಮಾನದ ಪ್ರಾರಂಭದಲ್ಲಿದ್ದ

ಬಾಣನು ತನ್ನ ಹರ್ಷಚರಿತ ಕಾವ್ಯದಲ್ಲಿ ಕಾಳಿದಾಸನನ್ನು ಪ್ರಶಂಸಿದ್ದಾನೆ. ವತ್ಸಭಟ್ಟಿಯಿಂದ ರಚಿತವಾದ ಮಾಂಡಸೋರಿನ ಶಿಲಾ ಪ್ರಶಸ್ತಿ (ಕ್ರಿ.ಶ. 473)ಯಲ್ಲಿ ಕಾಳಿದಾಸನ ಸ್ಪಷ್ಟವಾದ ಅನುಕರಣವಿದೆ. ಆದ್ದರಿಂದ ಕಾಳಿದಾಸನು ಈ ಶಿಲಾಶಾಸನಕ್ಕಿಂತಲೂ ಹಿಂದಿನವನೆಂಬುದು ನಿರ್ವಿವಾದ. ಅವನ ಕಾವ್ಯಗಳಲ್ಲಿ ಗ್ರೀಕ್ ಪದಗಳಿಂದ ಜನ್ಯವಾದ 'ಉಚ್ಚ', 'ಜಾಮಿತ್ರ' ಮುಂತಾದ ಜ್ಯೋತಿಷ ಶಬ್ದಗಳ ಪ್ರಯೋಗವಿದೆ. ಇದನ್ನು ನೋಡಿದರೆ ಅವನು ಕ್ರಿ.ಶ. 350 ಕ್ಕಿಂತ ಹಿಂದಿನವನಲ್ಲವೆಂದು ಹೇಳಬೇಕಾಗುತ್ತದೆ. ಪ್ರಸಿದ್ಧ ವ್ಯಾಖ್ಯಾನಕಾರನಾದ ಮಲ್ಲಿನಾಥನು (ಕ್ರಿ.ಶ. 14ನೆ ಶ.ಮಾ) ಮೇಘಸಂದೇಶದ 14ನೆಯ ಪದ್ಯದ ವ್ಯಾಖ್ಯಾನದಲ್ಲಿ ಕವಿಯು ಶ್ಲೇಷೆಯಿಂದ ತನ್ನ ಮಿತ್ರನಾದ ನಿವುಲನನ್ನೂ ಪ್ರತಿಪಕ್ಷಿಯಾದ ದಿಙ್ನಾಗನನ್ನೂ ಸೂಚಿಸಿದ್ದಾನೆಂದು ಹೇಳಿದ್ದಾನೆ. ನಿಚುಲನ ವಿಚಾರವಾಗಿ ಏನೂ ತಿಳಿಯದು. ಬೌದ್ಧ ತಾರ್ಕಿಕನಾದ ದಿಙ್ನಾಗನು ಪ್ರತಿಪಕ್ಷಿಯಾಗಲು ಕಾರಣವು ತಿಳಿಯದು. ಒಂದು ವೇಳೆ ಪ್ರತಿಪಕ್ಷಿಯೆಂದು ಒಪ್ಪಿಕೊಂಡರೆ ಅವನ ಕಾಲ ಕ್ರಿ.ಶ. ಸುಮಾರು 400. ಒಂದು ಸಾವಿರ ವರ್ಷಗಳ ಕಾಲ ಈಚಿನವನಾದ ಮಲ್ಲಿನಾಥನ ಮಾತನ್ನು ಪ್ರಮಾಣವೆಂದು ಒಪ್ಪಿಕೊಳ್ಳುವುದಾದರೂ ಹೇಗೆ? ಕಾಳಿದಾಸನು ಭಾಸ (ಕ್ರಿ.ಶ. ಸಂ–300)ನನ್ನು ಸ್ಮರಿಸಿದ್ದಾನೆ. ಕಾಳಿದಾಸನ ಪ್ರಾಕೃತ ಭಾಸನಪ್ರಾಕೃತಕ್ಕಿಂತ ಈಚಿನದೆಂದು ತೋರುತ್ತದೆ. ಈ ಹಿಂದಿನ ಅಂಶಗಳ ಪರಿಶೀಲನೆಯಿಂದ **ಕಾಳಿದಾಸನ ಕಾಲ ಕ್ರಿ.ಶ. ನಾಲ್ಕು ಅಥವಾ ಐದನೆಯ ಶತಮಾನವೆಂದು** ಬಹಳ ಮಂದಿ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯವಾಗಿದೆ.

ಕಾಳಿದಾಸನು ವತ್ಸಭಟ್ಟಿಗಿಂತ ಹಿಂದಿನವನೆಂಬುದು ನಿಜವಾದರೂ ಎಷ್ಟು ಹಿಂದಿನವನೆಂಬುದನ್ನು ನಿಶ್ಚಯಿಸಲು ಸಾಧ್ಯವಿಲ್ಲ; ಅಶ್ವಘೋಷನು (ಕ್ರಿ.ಶ. ಸು–100) ಇವನ ಶೈಲಿಯನ್ನು ಅನುಕರಣ ಮಾಡಿದ್ದಾನೆ. ಆದ್ದರಿಂದ ಇವನು ಕ್ರಿ.ಪೂ.ಸು 100–150ರಲ್ಲಿ ಇದ್ದಿರಬಹುದೆಂಬುದು ಇನ್ನೊಂದು ಮತ. ಈ ಮತಕ್ಕೆ ಮಾಲವಿಕಾಗ್ನಿಮಿತ್ರದಲ್ಲಿರುವ ಐತಿಹಾಸಿಕ ಭಿತ್ತಿಯು ಪ್ರಧಾನ ಕಾರಣ. ಈ ನಾಟಕದಲ್ಲಿ ಬಂದಿರುವ ಶುಂಗವಂಶದ ರಾಜರಾದ ಪುಷ್ಯಮಿತ್ರ, ಅಗ್ನಿಮಿತ್ರ, ವಸುಮಿತ್ರ, ಮೊದಲಾದವರು ಕ್ರಿ.ಪೂ. 178 ರಿಂದೀಚೆಗೆ ಇದ್ದ ಚಾರಿತ್ರಿಕ ವ್ಯಕ್ತಿಗಳು. ಅಗ್ನಿಮಿತ್ರನಿಂದ ಹೇಳಿಸಿರುವ ಭರತವಾಕ್ಯ ಮತ್ತು ಅವನಿಗೆ ಬಹು ಪತ್ನೀತ್ವವನ್ನು ಸಂಪಾದಿಸಿರುವ ರೀತಿಗಳು ಕವಿಗೆ ತನ್ನ ಆಶ್ರಯದಾತನಲ್ಲಿರುವ ಆದರ

ಗೌರವಗಳಿಂದ ಕಲ್ಪಿಸಿದಂತಿವೆ. ಶಾಕುಂತಲದಲ್ಲಿ ದುಷ್ಯಂತನು ಅಪುತ್ರನಾಗಿ ಸತ್ತ. ಸಮುದ್ರ ವ್ಯಾಪಾರಿ ಧನಮಿತ್ರನ ಗರ್ಭಿಣಿಯಾಗಿದ್ದ ಹೆಂಡತಿಗೆ ಅವನ ಅಸ್ತಿಯನ್ನು ಕೊಡಿಸಿದ ಸಂಗತಿ ಮತ್ತು ಉಂಗುರದ ಕಳುವಿಗಾಗಿ ಬೆಸ್ತನಿಗೆ ಮರಣದಂಡನೆಯಾಗಬಹುದಾದ ಸಂದರ್ಭಗಳು ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದ ಬೃಹಸ್ಪತಿಯ ಧರ್ಮಶಾಸ್ತ್ರಕ್ಕೆ ಅನುಗುಣವಾಗಿವೆ. ಹೀಗೆ ಕಾಳಿದಾಸನ ಕಾಲ ಇನ್ನೂ ವಾದಗ್ರಸ್ತವಾಗಿಯೇ ಉಳಿದಿದೆ.

ಕಾಳಿದಾಸನ ಕಾವ್ಯಗಳ ಪರಿಶೀಲನೆಯಿಂದ ಅವನ ಒಂದು ಅಸ್ಪಷ್ಟವಾದ ಸಾರಸ್ವತ ಚಿತ್ರ ಮಾತ್ರ ಮೂಡುತ್ತದೆ. ಅವನ ಹುಟ್ಟು, ವಾಸ, ಜೀವಿತಾವಧಿಗಳೊಂದೂ ಸ್ಪಷ್ಟವಾಗಿ ಗೊತ್ತಿಲ್ಲ. ಅವನ ಕಾವ್ಯಗಳಲ್ಲಿ ಉಜ್ಜಯಿನಿಯ ಅಭಿಮಾನ ತುಂಬಿ ತುಳುಕುತ್ತದೆ. ಭೂಮಿಗೆ ಇಳಿದು ಬಂದ ಸ್ವರ್ಗದ ಬಿಂದು ಭಾಗದಂತಿರುವ ಸಿಪ್ರಾ ತೀರದ ಉಜ್ಜಯಿನಿ. ಅಲ್ಲಿನ ದೇವನಾದ ಮಹಾಕಾಲ, ಸುತ್ತ ಹರಿಯುವ ನದಿಗಳು ಕಾಳಿದಾಸನ ಮೇಲೆ ಪ್ರಭಾವ ಬೀರಿರಬೇಕೆಂದು ಮೇಘದೂತದಿಂದ ತಿಳಿದು ಬರುತ್ತದೆ. ಆದ್ದರಿಂದ ಕಾಳಿದಾಸನ ಜನ್ಮಸ್ಥಳ **ಉಜ್ಜಯಿನಿ**ಯಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ. ಕಾಶ್ಮೀರದಲ್ಲಿ ಮಾತ್ರ ಬೆಳೆಯುವ ಕೇಸರ ಪುಷ್ಪವನ್ನು ಕಣ್ಣಾರೆ ಕಂಡಂತೆ ವರ್ಣಿಸಿರುವುದರಿಂದ ಅವನು ಕಾಶ್ಮೀರವಾಸಿಯಾಗಿಯೂ ಇದ್ದಿರಬಹುದು. ಮಾಳವ ಮತ್ತು ವಿದರ್ಭದವರು ಇವನನ್ನು ತಮ್ಮವನೆಂದು ಹೇಳುತ್ತಾರೆ. ಇವನು ತನ್ನ ಆಶ್ರಯದಾತನೊಡನೆ ಭಾರತದಾದ್ಯಂತ ಸುತ್ತಾಡಿ ನಾನಾ ದೇಶ, ಗಿರಿ, ನದಿ ಮುಂತಾದವುಗಳ ಪರಿಚಯ ಪಡೆದಿದ್ದನೆಂದು ರಘುವಿನ ದಿಗ್ವಿಜಯದಿಂದ ಊಹಿಸಲು ಅವಕಾಶವಿದೆ. ಇವನ ಎಲ್ಲಾ ಕೃತಿಗಳೂ ಶಿವಸ್ತೋತ್ರದಿಂದ ಪ್ರಾರಂಭವಾಗಿವೆ. ಇವನ ಸ್ತೋತ್ರಗಳಲ್ಲಿ ಅದ್ವೈತಸಿದ್ಧಾಂತವೂ, ಉಪನಿಷತ್ತತ್ತ್ವಗಳೂ ಅಡಕವಾಗಿವೆ. ಕಾಳಿದಾಸನಿಗೆ ಶೃತಿ, ಸ್ಮೃತಿ, ಪುರಾಣ, ಮಹಾಭಾರತ, ರಾಮಾಯಣ, ಧರ್ಮಶಾಸ್ತ್ರ, ರಾಜನೀತಿ, ವೇದಾಂಗಗಳು, ಸಂಗೀತ, ಜ್ಯೋತಿಷ, ಆಯುರ್ವೇದ ಮುಂತಾದವುಗಳ ಪರಿಚಯವಿದೆ. ಅವನು ವೀತರಾಗನಲ್ಲ. ಅವನದು ಧರ್ಮಕ್ಕೆ ವಿರುದ್ಧವಾಗದ ಶೃಂಗಾರ, ದಾಂಪತ್ಯ ಜೀವನದ ಪ್ರಧಾನ ಫಲ ಸಂತಾನ ಅದಿಲ್ಲದೆ ಇಹಪರ, ಸುಖಗಳಿಲ್ಲವೆಂಬುದು ಅವನ ಮತ. ಅವನಿಗೆ ಮಕ್ಕಳಲ್ಲಿ ಬಹಳ ಮಮತೆ ಇದ್ದಂತೆ ಕಾಣುತ್ತದೆ. ಅವನ ಕಾವ್ಯಗಳಲ್ಲಿ ವೈದಿಕ ಧರ್ಮದ ನಿರೂಪಣೆಯಿದ್ದರೂ ಅವನು

ಧರ್ಮದಗೊಡ್ಡಲ್ಲ, ಶುಷ್ಕಛಾಂಧಸವನ್ನೂ, ಜಾತಿಮತ, ಆಚಾರ ಮುಂತಾದ ಸಾಮಾಜಿಕ ಕಟ್ಟುಪಾಡುಗಳನ್ನೂ ಅವನು ನಯವಾಗಿ ಟೀಕಿಸಿದ್ದಾನೆ. ಅವನು ಆದರ್ಶಪ್ರಾಯವಾದ ಆಡಳಿತ, ನಿಷ್ಕಳಂಕ ಪ್ರೇಮ, ಸಾಧು ಜೀವನಾದಿಗಳನ್ನು ಮನಮುಟ್ಟುವಂತೆ ಪ್ರತಿಪಾದಿಸಿದ್ದಾನೆ. ಅವನ ಕಾವ್ಯಗಳು ಆನಂದ, ಆದರ್ಶಗಳೆರಡನ್ನೂ ಒದಗಿಸುತ್ತವೆ.

ಕಾಳಿದಾಸನು ರಘುವಂಶ, ಕುಮಾರಸಂಭವಗಳೆಂಬ ಎರಡು ಮಹಾಕಾವ್ಯಗಳನ್ನು ಋತುಸಂಹಾರ, ಮೇಘದೂತಗಳೆಂಬ ಎರಡು ಖಂಡಕಾವ್ಯಗಳನ್ನೂ, ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಅಭಿಜ್ಞಾನಶಾಕುಂತಲಗಳೆಂಬ ಮೂರು ನಾಟಕಗಳನ್ನೂ ಬರೆದಿದ್ದಾನೆ. ಶ್ಯಾಮಲಾದಂಡಕ, ಅಂಬಾಸ್ತುತಿ, ಮುಂತಾದ ಇನ್ನೂ ಹಲವು ಕೃತಿಗಳು ಅವನ ಹೆಸರಿನಲ್ಲಿ ಪ್ರಚಾರದಲ್ಲಿವೆ.

## ರಘುವಂಶ

ಪಂಚಮಹಾಕಾವ್ಯಗಳಲ್ಲಿ ರಘುವಂಶವು ಮೊದಲನೆಯದಾಗಿದೆ. (ಕುಮಾರಸಂಭವ, ಕಿರಾತಾರ್ಜುನೀಯಂ, ಶಿಶುಪಾಲವಧ ಮತ್ತು ನೈಷಧೀಯಚರಿತಗಳು ಉಳಿದ ನಾಲ್ಕು ಮಹಾಕಾವ್ಯಗಳಾಗಿವೆ) ಇದರಲ್ಲಿ 19 ಸರ್ಗಗಳೂ ಮತ್ತು 1564 ಶ್ಲೋಕಗಳೂ ಇವೆ. ವೈವಸ್ವತ ಮನುವಿನ ವಂಶದಲ್ಲಿ ಹುಟ್ಟಿದ ದಿಲೀಪ, ರಘು, ಅಜ, ದಶರಥ, ಶ್ರೀರಾಮ, ಕುಶ, ಅತಿಥಿ ಮುಂತಾದ 29 ರಾಜರ ಚರಿತ್ರವರ್ಣನವು ಈ ಕಾವ್ಯದ ವಸ್ತುವಾಗಿದೆ. ಇದಕ್ಕೆ ವಾಲ್ಮೀಕಿ ರಾಮಾಯಣವೇ ಮೂಲ. ಮಹಾಕಾವ್ಯದ ಲಕ್ಷಣಗಳಿಗೆ ಹೊಂದಿಕೊಂಡಂತೆ ಇದು ರಚಿತವಾಗಿದೆ ಎನ್ನುವುದಕ್ಕಿಂತ ಇದರ ಸ್ವರೂಪವನ್ನು ಗಮನಿಸಿಯೇ ಮಹಾಕಾವ್ಯಲಕ್ಷಣವು ನಿರೂಪಿತವಾಗಿದೆ ಎನ್ನುವುದೇ ಹೆಚ್ಚು ಸಮಂಜಸವೆನಿಸುತ್ತದೆ. ಒಂದೇ ವಂಶಕ್ಕೆ ಸೇರಿದ ಅನೇಕ ರಾಜರ ಕಥೆ ಇದ್ದರೂ ಯಾವೊಂದು ವರ್ಣನೆಯೂ ಪುನರುಕ್ತವಾಗಿಲ್ಲ. 'ಒಂದು ಎಳೆಯಲ್ಲಿ ಪೋಣಿಸಿದ ವಿವಿಧ ಮಣಿಗಳಂತೆ ಎಲ್ಲ ವರ್ಣನೆಗಳೂ ಸೇರಿ ಒಂದು ದಿವ್ಯಹಾರವಾಗಿದೆ'. ಇದರಲ್ಲಿ ಹೆಚ್ಚುಪಾಲು ಸಂದಿರುವುದು ಶ್ರೀರಾಮನ ಚರಿತ್ರೆಗೆ. ಇಡೀ ರಾಮಾಯಣವನ್ನೇ ಅರೇಳು ಸರ್ಗಗಳಲ್ಲಿ ಸಂಗ್ರಹಿಸಿರುವುದು ಕವಿಯ ಪ್ರತಿಭೆಗೆ ಸಾಕ್ಷಿಯಾಗಿದೆ.

ನಾಟಕಗಳಲ್ಲಿ ಶಾಕುಂತಲಕ್ಕಿರುವ ಸ್ಥಾನವೇ ಮಹಾಕಾವ್ಯಗಳಲ್ಲಿ ರಘುವಂಶಕ್ಕೆ ಸಂದಿದೆಯೆನ್ನಬಹುದು. ಇದರ ಶೈಲಿ ಲಲಿತ, ಭಾಷೆ ಸುಲಭ, ವರ್ಣನೆಗಳು ಮನೋಹರ. ಉಪಮಾಲೋಲನಾದ ಕಾಳಿದಾಸನು ಬಳಸಿರುವ ಸುಮಾರು 1250 ಉಪಮೆಗಳಲ್ಲಿ 550 ಉಪಮೆಗಳು ಇರುವುದು ಈ ಕಾವ್ಯದಲ್ಲಿಯೇ. ಇಂದುಮತಿಯ ಸ್ವಯಂವರದ ಸಂದರ್ಭದಲ್ಲಿ ಈತನು ಬಳಸಿರುವ ಉಪಮೆಯೊಂದು ಇವನಿಗೆ 'ದೀಪಶಿಖಾ ಕಾಳಿದಾಸ' ಎಂಬ ಬಿರುದನ್ನು ತಂದುಕೊಟ್ಟಿದೆ.

*"ಸಂಚಾರಿಣೀ ದೀಪಶಿಖೇವ ರಾತ್ರೌ ಯಂ ಯಂ ವ್ಯತೀಯಾಯ ಪತಿಂವರಾ ಸಾ ।*
*ನರೇಂದ್ರ ಮಾರ್ಗಾಟ್ಟ ಇವ ಪ್ರಪೇದೇ ವಿವರ್ಣಭಾವಂ ಸ ಸ ಭೂಮಿಪಾಲಃ ॥"*

ರಘುವಂಶಕ್ಕೆ ಸಂಸ್ಕೃತದಲ್ಲಿ 33 ವ್ಯಾಖ್ಯಾನಗಳಿರುವುದಾಗಿ ತಿಳಿದು ಬಂದಿದೆ. ಇವುಗಳಲ್ಲಿ ಕ್ರಿ.ಶ. 14ನೆಯ ಶತಮಾನದವನೆಂದು ನಂಬಲಾದ ಮಲ್ಲಿನಾಥನ ಸಂಜೀವಿನೀ ವ್ಯಾಖ್ಯಾನವು ತುಂಬಾ ಪ್ರಸಿದ್ಧವಾಗಿದೆ. **"ಕಾಳಿದಾಸಗಿರಾಂ ಸಾರಂ ಕಾಳಿದಾಸಃ ಸರಸ್ವತೀ । ಚತುರ್ಮುಖೋಽಥವಾ ಸಾಕ್ಷಾತ್ ವಿದುರ್ನಾನ್ಯೇ ತು ಮಾದೃಶಾಃ॥"** ಎಂಬ ಇವನ ಮಾತು ಕಾಳಿದಾಸನ ಹಿರಿಮೆಯನ್ನು ಹೇಳುವಂತೆ ಇವನ ವಿನಯವನ್ನೂ ಸೂಚಿಸುತ್ತದೆ. ಕಾಳಿದಾಸನ ಶೈಲಿಯನ್ನು 'ದ್ರಾಕ್ಷಾಪಾಕ' ಎಂದು ಕರೆದವನೂ ಇವನೇ. ದಿಲೀಪನಿಂದ ಹಿಡಿದು ಅಗ್ನಿವರ್ಣನವರೆಗಿನ ಕಥೆಯು ವರ್ಣಿತವಾಗಿದ್ದರೂ ರಘುವಂಶವು ಅಪೂರ್ಣವಾಗಿದೆ. ಇದರಲ್ಲಿ ಇನ್ನೂ ಹೆಚ್ಚು ಸರ್ಗಗಳು ಇದ್ದಿರಬೇಕೆಂಬುದು ಕೆಲವರ ಊಹೆ. ಕಾಳಿದಾಸನು ಉಳಿದ ಭಾಗವನ್ನು ಬರೆದನೋ ಅಥವಾ ಬೇಕೆಂತಲೋ ಕೈಬಿಟ್ಟನೋ ಎಂಬುದು ತಿಳಿಯದ ವಿಷಯ. ಒಟ್ಟಿನಲ್ಲಿ ಇದೊಂದು ಕಾಳಿದಾಸನ ಶ್ರೇಷ್ಠ ಮಹಾಕಾವ್ಯ; ಕಾವ್ಯರತ್ನ. ಮಹಾಕವಿಯೊಬ್ಬನ ಶಾಸ್ತ್ರಜ್ಞಾನ ಲೋಕಾನುಭವಗಳು ಪಕ್ವವಾದಾಗ ಆತನ ಪ್ರತಿಭೆಯು ಉಲ್ಲಸಿತವಾಗಿ ಎಂತಹ ಭವ್ಯ ನಿರ್ಮಾಣ ಮಾಡುವುದೆಂಬುದಕ್ಕೆ ರಘುವಂಶವೇ ಉದಾಹರಣೆ. ಕಾವ್ಯಪ್ರವೇಶ ಮಾಡುವವರಿಗೆ ಇದು ಪಠ್ಯ ಗ್ರಂಥವಾಗಿರುವಂತೆ ವಿಷಯ ಸೌಂದರ್ಯದಿಂದ ಪ್ರೌಢರ ಮನಸ್ಸನ್ನು ಸೂರೆಗೊಳ್ಳತಕ್ಕದ್ದು ಆಗಿದೆ.

***ಕುಮಾರಸಂಭವ :***

ಕಾಳಿದಾಸನ ಎರಡನೆಯ ಮಹಾಕಾವ್ಯವಾದ ಕುಮಾರಸಂಭವವೂ ಪಂಚಮಹಾಕಾವ್ಯಗಳಲ್ಲೊಂದಾಗಿದೆ. ಇದರಲ್ಲಿ 17 ಸರ್ಗಗಳೂ 1096 ಶ್ಲೋಕಗಳೂ ಇವೆ. ಆದರೆ ಇವುಗಳಲ್ಲಿ ಮೊದಲ ಏಳು ಸರ್ಗಗಳನ್ನು ಮಾತ್ರ ಕಾಳಿದಾಸನು ಬರೆದುದಾಗಿ ಕೆಲವರು ವಾದಿಸಿದ್ದಾರೆ. ಮಲ್ಲಿನಾಥನೂ ಸಹ ಮುಂದಿನ ಸರ್ಗಗಳಿಗೆ ವ್ಯಾಖ್ಯಾನ ಮಾಡಿಲ್ಲ. ಇಷ್ಟಾದರೂ ಕಾಳಿದಾಸನೇ ಎಲ್ಲವನ್ನೂ ಬರೆದನೆಂದು ಹೇಳುವವರು ಇಲ್ಲದಿಲ್ಲ. ಪಾರ್ವತೀ–ಪರಮೇಶ್ವರರಿಂದ 'ಕುಮಾರಸಂಭವ'ವಾಗಿ ತಾರಕಾಸುರನ ಸಂಹಾರವಾಗುವುದೇ ಇದರ ಕಥಾವಸ್ತು. ಇದೇ ಕಥೆಯು ರಾಮಾಯಣ, ಮಹಾಭಾರತ, ಶಿವಪುರಾಣ ಮುಂತಾದ ಗ್ರಂಥಗಳಲ್ಲೂ ಉಕ್ತವಾಗಿದ್ದು ಕಾಳಿದಾಸನು ಇವೆಲ್ಲವನ್ನೂ ತಿಳಿದುಕೊಂಡಿದ್ದಾಗಿ ಭಾವಿಸಬಹುದು. ಕಾಳಿದಾಸನು ಬರೆದದ್ದು ಏಳು ಸರ್ಗಗಳನ್ನು ಮಾತ್ರ ಎಂದು ಒಪ್ಪಿದರೂ ಇದನ್ನು ಮಹಾಕಾವ್ಯವೆಂದು ಕರೆಯಲು ಅಡ್ಡಿಯೇನೂ ಇಲ್ಲ.

ಪಾಶ್ಚಾತ್ಯ ವಿದ್ವಾಂಸರ ದೃಷ್ಟಿಯಲ್ಲಂತೂ ಇದು ಕಾವ್ಯಸೌಂದರ್ಯದ ದೃಷ್ಟಿಯಿಂದ ರಘುವಂಶಕ್ಕಿಂತಲೂ ಉತ್ತಮವಾಗಿದೆ. ಅರವಿಂದರ ಮಾತನ್ನು ಉದ್ಧರಿಸುವುದಾದರೆ "ಕುಮಾರಸಂಭವದಲ್ಲಿ ಭವ್ಯತೆಯೊಡನೆ ರಮ್ಯತೆಯೂ, ಭಾಷೋನ್ನತಿಯೊಡನೆ ನಾದದ ಸೊಗಸೂ, ಸ್ಫುಟವಾದ ವರ್ಣವಿನ್ಯಾಸದೊಡನೆ ಇಂದ್ರಿಯಾರ್ಥಗಳ ರಮ್ಯತೆಯೂ ಮಿಲನಗೊಂಡು ಪೂರ್ಣತೆಯು ಪರಾಕಾಷ್ಠೆಯನ್ನು ಮುಟ್ಟಿದೆ, ಅದರ ಮಟ್ಟಕ್ಕೇರುವುದು ಕಾಳಿದಾಸನಿಂದ ಹಿಂದೆಯೇ ಆಗಲಿ ಅನಂತರವೇ ಆಗಲಿ ಮತ್ತಾರಿಗೂ ಸಾಧ್ಯವಾಗಿಲ್ಲ". ಕುಮಾರಸಂಭವಕ್ಕೆ ಇದುವರೆಗೆ ಸಿಕ್ಕಿರುವ ವ್ಯಾಖ್ಯಾನಗಳ ಸಂಖ್ಯೆ ಮೂವತ್ತೇಳು. ಸೀತಾರಾಮನೆಂಬುವನು ಮಲ್ಲಿನಾಥನು ಬರೆಯದೇ ಬಿಟ್ಟಿದ್ದ ಸರ್ಗಗಳಿಗೆ 'ಸಂಜೀವಿನಿ'ಎಂಬ ಹೆಸರನ್ನೇ ಇಟ್ಟುಕೊಂಡು ವ್ಯಾಖ್ಯಾನ ಬರೆದಿದ್ದಾನೆ.

# ರಘುವಂಶದ ಒಂದನೇ ಸರ್ಗದ ಕಥಾವಿವರಣೆ

## ಮಂಗಳಾಚರಣೆ ಮತ್ತು ಕವಿಯ ಸ್ವಾಹಂಕಾರ ಖಂಡನೆ :

ಮಹಾಕವಿ ಕಾಳಿದಾಸನು ತಾನು ರಚಿಸುವ ರಘುವಂಶವು ನಿರ್ವಿಘ್ನವಾಗಿ ಪೂರ್ತಿಗೊಳ್ಳಲು ಮೊದಲು ಶಬ್ದಾರ್ಥಗಳಂತೆ ಒಂದೇ ದೇಹದಲ್ಲಿರುವ ಜಗದೊಡೆಯರಾದ ಪಾರ್ವತೀಪರಮೇಶ್ವರರನ್ನು ಶಬ್ದಾರ್ಥಗಳ ಜ್ಞಾನಕ್ಕಾಗಿ ನಮಸ್ಕರಿಸುತ್ತಾನೆ. ಸೂರ್ಯನಿಂದ ಹುಟ್ಟಿದ ರಘುವಂಶವು ದೊಡ್ಡದು, ನಾನು ಅಲ್ಪಮತಿ. ಈ ನನ್ನ ಪ್ರಯತ್ನವು ಭ್ರಾಂತಿಯಿಂದ ಮಹಾಸಮುದ್ರವನ್ನು ಹರಿಗೋಲಿನಿಂದ ದಾಟುವಂತಾಗಿದೆ. ಕವಿಯ ಕೀರ್ತಿಯನ್ನು ಬಯಸುವ ದಡ್ಡನಾದ ನಾನು ಉದ್ದನೆಯ ಮನುಷ್ಯನು ಪಡೆಯಬಹುದಾದ ಹಣ್ಣನ್ನು ಕೀಳಲು ಕುಳ್ಳನು ಕೈಯನ್ನು ಮೇಲಕ್ಕೆ ಚಾಚುವಂತಾಗಿದೆ. ಆದರೂ ಹಿಂದಿನ ಕವಿಗಳು ತೋರಿಸಿರುವ ದಾರಿಯಲ್ಲಿ ನಾನು ಹೋಗುತ್ತಿರುವುದರಿಂದ ವಜ್ರದಿಂದ ಕೊರೆದು ತೂತು ಮಾಡಿದ ರತ್ನದಲ್ಲಿ ನೂಲು ಸರಾಗವಾಗಿ ತೂರುವಂತೆ ನನ್ನ ಪ್ರಯತ್ನವು ಕಷ್ಟಕರವಾಗಲಾರದು.

## ರಘುವಂಶದ ರಾಜರ ನಡೆನುಡಿಗಳು

ಆ ರಘುವಂಶದ ರಾಜರು ಹುಟ್ಟಿನಿಂದಲೇ ಪವಿತ್ರರು. ಪ್ರಯೋಜನ ಸಿಗುವವರೆಗೆ ಕೆಲಸ ಮಾಡುವವರು. ಸಮುದ್ರಗಳವರೆಗಿನ ಭೂಮಿಗೆ ಒಡೆಯರು. ರಥದಿಂದ ದೇವಲೋಕಕ್ಕೆ ಹೋಗುವವರು. ಶಾಸ್ತ್ರಕ್ರಮದಿಂದ ಹೋಮಿಸಿದವರು. ಬೇಡುವವರು ಕೇಳಿದಷ್ಟು ಕೊಡುವವರು. ತಪ್ಪು ಮಾಡಿದವರ ತಪ್ಪಿಗೆ ತಕ್ಕ ಶಿಕ್ಷೆ ಮಾಡುವವರು. ಸಕಾಲದಲ್ಲಿ ಎಚ್ಚರಗೊಳ್ಳುವವರು. ದಾನ ಮಾಡುವುದಕ್ಕಾಗಿ ಹಣ ಗಳಿಸುವವರು. ಸತ್ಯವನ್ನು ಕಾಪಾಡಿಕೊಳ್ಳಲು ಮಿತವಾಗಿ ಮಾತಾಡುವವರು. ಕೀರ್ತಿಗಾಗಿ ಯುದ್ಧ ಮಾಡುವವರು. ಸಂತತಿಗಾಗಿ ಕುಟುಂಬಿಗಳಾಗುವವರು. ಬಾಲ್ಯದಲ್ಲಿ ವಿದ್ಯಾರ್ಜನೆ ಮಾಡುವವರು. ಯೌವನದಲ್ಲಿ ಸುಖಭೋಗಿಗಳು. ಮುಪ್ಪಿನಲ್ಲಿ ಮುನಿಗಳಂತಿರುವವರು. ಅವಸಾನ ಕಾಲದಲ್ಲಿ ಯೋಗದಿಂದ ದೇಹವನ್ನು ತ್ಯಜಿಸುವವರು. ನಾನು ಅಲ್ಪವಾಕ್ಯಕ್ರಿಯೆಯುಳ್ಳವನಾದರೂ ಇಂತಹ ರಾಜರ ಗುಣಗಳಿಂದ ಪ್ರಚೋದಿತನಾಗಿ ಚಪಲತೆಯಿಂದ ಅವರ ವಂಶವನ್ನು ವರ್ಣಿಸುವೆನು. ನನ್ನೀ ವರ್ಣನೆಯನ್ನು ಕೇಳಿ

ಒಳ್ಳೆಯದು ಕೆಟ್ಟುದ್ದನ್ನು ವಿವೇಚಿಸಲರ್ಹರಾದ ಧೀಮಂತರೇ ಬೆಂಕಿಯು ಚಿನ್ನದ ಸ್ವರೂಪವನ್ನು ತಿಳಿಸುವಂತೆ ಯೋಗ್ಯತೆಯನ್ನು ತಿಳಿಸಬೇಕು.

## ದಿಲೀಪನ ಹುಟ್ಟು ಮತ್ತು ಆಡಳಿತ

ವೇದಗಳಿಗೆ ಓಂಕಾರದಂತೆ ಹಿಂದೆ ವೈವಸ್ವತಮನುವೆಂಬ ಜ್ಞಾನಿ ವರೇಣ್ಯನು ರಾಜರಿಗೆ ಮೊದಲಿಗನಾಗಿದ್ದನು. ಪವಿತ್ರವಾದ ಅವನ ಅನ್ವಯದಲ್ಲಿ ಹಾಲ್ಕಡಲಿನಲ್ಲಿ ಚಂದ್ರನಂತೆ ದಿಲೀಪನೆಂಬ ಪವಿತ್ರ ರಾಜನು ಜನಿಸಿದನು. ಅವನ ಎದೆಯು ಅಗಲವಾಗಿದ್ದಿತು. ಭುಜಗಳು ಎತ್ತಿನ ಹೆಗಲಿನಂತಿದ್ದವು. ಅವನು ಅಜಾನುಬಾಹುವಾಗಿ ಎತ್ತರನಾಗಿದ್ದನು. ಕ್ಷತ್ರಿಯ ಧರ್ಮವೇ ತನ್ನ ಕಾರ್ಯವನ್ನೆಸಗಲು ದೇಹವನ್ನು ತಳೆದಂತಿದ್ದಿತು. ಅವನ ದೇಹವು ಬಲದಲ್ಲಿ, ತೇಜಸ್ಸಿನಲ್ಲಿ, ಎತ್ತರದಲ್ಲಿ ಎಲ್ಲವನ್ನೂ ಮೀರಿಸಿ ಮೇರುಪರ್ವತದಂತಿದ್ದಿತು. ಅವನು ಆಕೃತಿಗೆ ತಕ್ಕ ಬುದ್ಧಿ, ಬುದ್ಧಿಗೆ ತಕ್ಕ ಶಾಸ್ತ್ರಜ್ಞಾನ, ಜ್ಞಾನಕ್ಕೆ ತಕ್ಕ ಕೃತಿ, ಕೃತಿಗೆ ತಕ್ಕ ಫಲಗಳುಳ್ಳವನಾಗಿದ್ದನು. ಭಯಂಕರ ಮತ್ತು ಮನೋಹರವಾದ ಅವನ ಗುಣಗಳಿಂದ ಆಶ್ರಿತರು ಜಲಜಂತು ಮತ್ತು ರತ್ನಗಳಿಂದ ಸಮುದ್ರದಂತೆ ಹತ್ತಿರ ಹೋಗಲು ಹೆದರುತ್ತಿದ್ದರು. ಆಶ್ರಯಿಸುತ್ತಲೂ ಇದ್ದರು. ಅವನ ಆಳ್ವಿಕೆಯಲ್ಲಿ ಪ್ರಜೆಗಳು ಮನುವಿನ ಕಾಲದಿಂದ ಬಳಕೆಯಲ್ಲಿದ್ದ ಶಾಸನವನ್ನು ರಥಚಕ್ರದ ತುದಿಯಂತೆ ಒಂದು ಗೆರೆಯಷ್ಟೂ ಮೀರುತ್ತಿರಲಿಲ್ಲ. ಸೂರ್ಯನು ನೂರ್ಮಡಿಯಾಗಿ ಸುರಿಸಲು ನೀರನ್ನು ಹೀರುವಂತೆ ಆ ದಿಲೀಪನು ಪ್ರಜೆಗಳ ಏಳಿಗೆಗಾಗಿಯೇ ಅವರಿಂದ ಕರವನ್ನು ಸ್ವೀಕರಿಸುತ್ತಿದ್ದನು. ಅವನಿಗೆ ತೀಕ್ಷ್ಣಶಾಸ್ತ್ರಜ್ಞಾನ, ಬಿಲ್ಲಿಗೆ ಕಟ್ಟಿದ ಹೆದೆ ಇವೆರಡೇ ಕಾರ್ಯವನ್ನು ಸಾಧಿಸಿಕೊಡುತ್ತಿದ್ದವು. ಸೇನೆ ಸುಮ್ಮನೆ ಉಪಕರಣವಾಗಿದ್ದಿತು. ಅವನ ಮಂತ್ರಾಲೋಚನೆ ಆಕಾರೇಂಗಿತಗಳು ಗುಟ್ಟಾಗಿದ್ದವು. ಅದರಿಂದ ಫಲವಾದ ಮೇಲೆ ಅವನು ಏನು ಮಾಡಿದನೆಂಬುದು ತಿಳಿಯುತ್ತಿದ್ದಿತು. ಅವನಿಗೆ ಆತ್ಮರಕ್ಷಣೆಯಲ್ಲಿ ಭಯವಿರಲಿಲ್ಲ. ಧರ್ಮಾಚರಣೆಯಲ್ಲಿ ಕಾಯಿಲೆಯ ಆಡಚಣೆಯಿರಲಿಲ್ಲ. ಆಶೆಯಿಲ್ಲದೆ ಹಣವನ್ನು ಗಳಿಸುತ್ತಿದ್ದನು. ಆಸಕ್ತಿಯಿಲ್ಲದೆ ಸುಖವನ್ನನುಭವಿಸುತ್ತಿದ್ದನು. ಅವನು ಧೀಮಂತನಾದರೂ ಮೌನವಾಗಿರುವುದರಿಂದಲೂ, ಶಕ್ತಿಯಿದ್ದರೂ ಸಹನೆಯಿಂದಿರುತ್ತಿದ್ದುದರಿಂದಲೂ, ದಾನ ಮಾಡಿ ಹೊಗಳಿಕೊಳ್ಳದಿರು–ವುದರಿಂದಲೂ ಅವನ ಗುಣಗಳೆಲ್ಲ ಒಂದೇ ತಾಯಿಯ ಮಕ್ಕಳಂತೆ

ಅನ್ಯೋನ್ಯವಾಗಿದ್ದುವು. ವಿಷಯಾಶೆಗೆ ಸಿಲುಕದೆ ವಿದ್ವಾಂಸನಾಗಿ ಧರ್ಮಾಸಕ್ತಿಯುಳ್ಳ ಅವನು ಮುಪ್ಪಿಲ್ಲದ ಜ್ಞಾನವೃದ್ಧನಾದನು. ಪ್ರಜೆಗಳ ಶಿಕ್ಷಣ, ರಕ್ಷಣ, ಪೋಷಣೆಗಳಿಂದ ಅವನು ಆ ಪ್ರಜೆಗಳಿಗೆ ತಂದೆ ತಾಯಿಯಾದನು. ಅವರ ತಂದೆ ತಾಯಿಗಳು ಹುಟ್ಟಿಗೆ ಮಾತ್ರ ಕಾರಣರಾದರು. ಶಿಕ್ಷಾರ್ಹರನ್ನು ಲೋಕಸ್ಥಿತಿಗಾಗಿ ಅವನು ಶಿಕ್ಷಿಸುತ್ತಿದ್ದನು. ಸಂತತಿಗಾಗಿ ವಿವಾಹ ಮಾಡಿಕೊಂಡನು. ಇದರಿಂದ ಆರ್ಥಕಾಮಗಳು ಅವನಿಗೆ ಧರ್ಮವೇ ಆದುವು. ಅವನು ಭೂಮಿಯ ತೆರಿಗೆಯಿಂದ ಯಜ್ಞ ಮಾಡಿದನು. ಅದರಿಂದ ಸಂತುಷ್ಟನಾದ ಸುರೇಂದ್ರನು ಮಳೆಗೆರೆದು ಪೈರುಗಳು ಬೆಳೆಯುವಂತೆ ಮಾಡಿದನು. ಹೀಗೆ ಅವರಿಬ್ಬರು ಅನ್ಯೋನ್ಯರಾಗಿ ಭೂಸ್ವರ್ಗಗಳನ್ನು ರಕ್ಷಿಸಿದರು. ಅವನ ಆಳ್ವಿಕೆಯಲ್ಲಿ ದೇಶದಲ್ಲಿ ಕಳ್ಳಕಾಕರ ಭಯವಿರಲಿಲ್ಲ. ಅವನಂತೆ ಇತರ ಯಾವ ರಾಜರೂ ಕೀರ್ತಿವಂತರಾಗಿರಲಿಲ್ಲ. ಕಾಯಿಲೆಯವನಿಗೆ ಔಷಧದಂತೆ ಸಜ್ಜನನಾದ ಶತ್ರುವೂ ಅವನಿಗೆ ಪ್ರಿಯನಾಗಿದ್ದನು. ಸ್ನೇಹಿತನು ದುಷ್ಟನಾದಲ್ಲಿ ಹಾವು ಕಡಿದ ಬೆರಳಿನಂತೆ ತ್ಯಾಜ್ಯನಾಗುತ್ತಿದ್ದನು. ಪಂಚ ಮಹಾಭೂತಗಳಂತೆ ಅವನಿಗೆ ಇನ್ನೊಬ್ಬರಿಗೆ ಸಹಾಯ ಮಾಡುವುದೇ ಮುಖ್ಯ ಉದ್ದೇಶವಾಗಿದ್ದಿತು. ಅವನು ಚತುಸ್ಸಮುದ್ರದ ಒಳಗಿರುವ ಭೂಮಿಯನ್ನು ಒಂದು ಪಟ್ಟಣದಂತೆ ಅನಾಯಾಸವಾಗಿ ಆಳಿದನು. ಅವನಿಗೆ ಮಗಧ ವಂಶದ ಸುದಕ್ಷಿಣೆಯೆಂಬುವಳು ಪತ್ನಿಯಾದಳು. ಅನೇಕ ಮಂದಿ ಹೆಂಡತಿಯರಿದ್ದರೂ ಅವನು ಸುದಕ್ಷಿಣೆ ಮತ್ತು ಲಕ್ಷ್ಮಿಯನ್ನು ಮುಖ್ಯ ಹೆಂಡತಿಯರೆಂದು ತಿಳಿದನು. ಮದುವೆಯಾಗಿ ಅನೇಕ ವರ್ಷಗಳಾದರೂ ಅವನಿಗೆ ಸಂತತಿಯಾಗಲಿಲ್ಲ.

## ದೀಲೀಪನು ಸಂತತಿಗಾಗಿ ಪ್ರಯತ್ನಿಸುವುದು

ಆ ದಿಲೀಪನು ಸಂತತಿಯನ್ನು ಪಡೆಯುವುದಕ್ಕಾಗಿ ರಾಜ್ಯಭಾರವನ್ನು ಮಂತ್ರಿಗಳಿಗೆ ಒಪ್ಪಿಸಿ, ವಸಿಷ್ಠರ ಆಶ್ರಮಕ್ಕೆ ಹೊರಟನು. ದಾರಿಯಲ್ಲಿ ಆ ದಂಪತಿಗಳು ಒಂದೇ ರಥದಲ್ಲಿ ಕುಳಿತು ಮಳೆಗಾಲದ ಮೋಡದಲ್ಲಿರುವ ಮಿಂಚು ಮತ್ತು ಐರಾವತಗಳಂತೆ ವಿರಾಜಿಸಿದರು. ಅವರಿಬ್ಬರೂ ವಸಿಷ್ಠರ ಆಶ್ರಮಕ್ಕೆ ತೊಂದರೆಯಾಗದಂತೆ ಮಿತಪರಿವಾರವುಳ್ಳವರಾಗಿ ತಮ್ಮ ತೇಜಸ್ಸಿನಿಂದ ಸೇನೆಯಿಂದ ಸುತ್ತುವರಿಯಲ್ಪಟ್ಟವರಂತಿದ್ದರು. ಶೈತ್ಯ, ಸೌರಭ್ಯ, ಮಾಂದ್ಯದಿಂದ ಕೂಡಿದ ಗಾಳಿಯು ಅವರ ಮೇಲೆ ಬೀಸುತ್ತಿದ್ದಿತು. ಅವರ ರಥದ ಧ್ವನಿಯನ್ನು ಕೇಳಿದ ನವಿಲುಗಳು ಕೇಕೆ

ಹಾಕುತ್ತಿದ್ದವು. ಆ ದಂಪತಿಗಳ ಹತ್ತಿರ ಅವರಂತೆ ಕಣ್ಣುಗಳಿರುವ ಜಿಂಕೆಗಳ ದಂಪತಿಗಳು ಹೋಗುತ್ತಿದ್ದವು. ಮೇಲೆ ಆಕಾಶದಲ್ಲಿ ಕೊಕ್ಕರೆಗಳ ಸಾಲುಗಳು ಕೂಗುತ್ತ ಹಾರುತ್ತಿದ್ದವು. ಗಾಳಿಯು ಅನುಕೂಲವಾಗಿ ಬೀಸುತ್ತಿದ್ದುದರಿಂದ ಧೂಳಿನಿಂದ ತೊಂದರೆಯಾಗುತ್ತಿರಲಿಲ್ಲ. ಸರೋವರದಲ್ಲಿ ಅರಳಿದ ಕಮಲಗಳ ಸುವಾಸನೆಯು ಆನಂದಗೊಳಿಸುತ್ತಿದ್ದಿತು. ಗ್ರಾಮಗಳಲ್ಲಿ ಅವರನ್ನು ಆಶ್ರಯಿಸಿಕೊಂಡು ಜೀವಿಸುತ್ತಿರುವ ಪುರೋಹಿತರು ಆಶೀರ್ವಾದ ಮಾಡುತ್ತಿದ್ದರು. ಹಳ್ಳಿಯಿಂದ ತುಪ್ಪವನ್ನು ತರುತ್ತಿರುವ ರೈತರಿಂದ ಅವರಿಬ್ಬರು ದಾರಿಯ ಮರಗಳ ಹೆಸರನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಬಿಳಿ ಉಡಿಗೆಗಳನ್ನು ಉಟ್ಟಿರುವ ಅವರು ಹಿಮವಿಲ್ಲದೆ ಹೊಳೆಯುತ್ತಿರುವ ಚಿತ್ರಾ ನಕ್ಷತ್ರ ಮತ್ತು ಚಂದ್ರರಂತೆ ವಿರಾಜಿಸಿದರು. ದಿಲೀಪನು ದಾರಿಯಲ್ಲಿ ರಾಣಿಗೆ ಆಯಾ ವಸ್ತುಗಳನ್ನು ತೋರಿಸುತ್ತ ಹೋಗುತ್ತಿದ್ದುದರಿಂದ ಅವರಿಗೆ ಕಳೆದ ದಾರಿಯು ತಿಳಿಯಲಿಲ್ಲ. ಸಾಯಂಕಾಲ ಅವರು ವಸಿಷ್ಠರ ಆಶ್ರಮವನ್ನು ಸೇರಿದರು.

### ವಸಿಷ್ಠರ ಆಶ್ರಮ

ಆ ವಸಿಷ್ಠರ ಆಶ್ರಮಕ್ಕೆ ತಪಸ್ವಿಗಳು ಕುಶಸಮಿತ್ತುಗಳನ್ನು ತೆಗೆದುಕೊಂಡು ಬರುತ್ತಿದ್ದರು. ನವಣೆಧಾನ್ಯಗಳಿಗಾಗಿ ಜಿಂಕೆಮರಿಗಳು ಮುನಿಪತ್ನಿಯರ ಕಾಲುಗಳ ಹತ್ತಿರ ಸುಳಿಯುತ್ತಿದ್ದವು. ಮುನಿಕನ್ಯೆಯರು ಗಿಡಗಳ ಪಾತಿಗಳಿಗೆ ನೀರನ್ನು ಸುರಿದು ಹೋಗುತ್ತಿದ್ದರೆ ಹಕ್ಕಿಗಳು ಆ ನೀರನ್ನು ಕುಡಿಯುತ್ತಿದ್ದವು. ನವಣೆಯ ಧಾನ್ಯದ ರಾಶಿಯ ಬಳಿಯಲ್ಲಿ ಜಿಂಕೆಗಳು ಮೆಲುಕು ಹಾಕುತ್ತಿದ್ದವು. ಹೋಮಿಸಿದ ಆಹುತಿಯ ವಾಸನೆಯು ಬರುತ್ತಿದ್ದಿತು. ಅತಿಥಿಗಳು ಆಶ್ರಮಕ್ಕೆ ಬರುತ್ತಿದ್ದರು.

### ದಿಲೀಪನು ವಸಿಷ್ಠರನ್ನು ನೋಡಿ ತನ್ನ ಕೊರತೆಯನ್ನು ನಿವೇದಿಸುವುದು

ಬಳಿಕ ದಿಲೀಪನು ಸಾರಥಿಗೆ ಕುದುರೆಗಳನ್ನು ವಿಶ್ರಾಂತಿಗೊಳಿಸೆಂದು ಹೇಳಿ ಹೆಂಡತಿಯೊಡನೆ ರಥದಿಂದ ಇಳಿದನು. ಅಲ್ಲಿದ್ದ ಮುನಿಗಳು ಪೂಜಾರ್ಹನಾದ ದಿಲೀಪನಿಗೆ ಪೂಜೆಯನ್ನು ಮಾಡಿದರು. ದಿಲೀಪನು ಸಾಯಂಕಾಲದ ಅನುಷ್ಠಾನವು ಮುಗಿದ ತರುವಾಯ ಅರುಂಧತಿಯೊಡನೆ ಇದ್ದ ವಸಿಷ್ಠರನ್ನು ಕಂಡನು. ದಿಲೀಪದಂಪತಿಗಳು ಆ ವಸಿಷ್ಠ ದಂಪತಿಗಳಿಗೆ ವಂದಿಸಲು ಅವರು ಸಂತೋಷದಿಂದ

ಅಭಿನಂದಿಸಿದರು. ಆತಿಥ್ಯವು ಪೂರೈಸಿದ ತರುವಾಯ ವಸಿಷ್ಠರು ರಾಜರ್ಷಿ ದಿಲೀಪನನ್ನು ಕ್ಷೇಮ ಸಮಾಚಾರವನ್ನು ವಿಚಾರಿಸಿದರು. ಅವರಿಗೆ ದಿಲೀಪನು ಇಂತೆಂದನು "ಸಕಲ ಆಪತ್ತುಗಳನ್ನು ನಿವಾರಿಸುವ ತಮ್ಮ ಪ್ರಭಾವದಿಂದ ನನ್ನ ರಾಜ್ಯವು ಕ್ಷೇಮವಾಗಿರುವುದು. ತಮ್ಮ ಮಂತ್ರಗಳು ನನ್ನ ಆಯುಧಗಳನ್ನು ಮೀರಿಸಿರುವುವು. ತಾವು ಹೋಮ ಮಾಡುತ್ತಿರುವುದರಿಂದ ಸಕಾಲದಲ್ಲಿ ಮಳೆ ಬರುತ್ತದೆ. ತಮ್ಮ ಬ್ರಹ್ಮವರ್ಚಸ್ಸಿನಿಂದ ನನ್ನ ಪ್ರಜೆಗಳು ನಿರ್ಭಯರಾಗಿ ದೀರ್ಘಾಯುಷ್ಮಂತರಾಗಿರುವರು. ತಾವು ಈ ರೀತಿ ನನ್ನ ರಾಜ್ಯದ ಯೋಗಕ್ಷೇಮವನ್ನು ನೋಡಿಕೊಳ್ಳುವುದರಿಂದ ನನ್ನ ಸಂಪತ್ತು ಊರ್ಜಿತವಾಗಿರುವುದು. ಆದರೆ ಈ ತಮ್ಮ ಸೊಸೆಯಂತಿರುವ ಸುದಕ್ಷಿಣೆಯಲ್ಲಿ ಸಂತತಿಯಾಗದೆ ಇರುವುದರಿಂದ ನನಗೆ ಸಕಲ ಸೌಭಾಗ್ಯದಿಂದ ತುಂಬಿದ ರಾಜ್ಯವಿದ್ದರೂ ಸಂತೋಷವಿಲ್ಲ. ನನ್ನ ತರುವಾಯ ಪಿತೃಗಳಿಗೆ ಪಿಂಡಪ್ರದಾನಾದಿಗಳನ್ನು ಮಾಡುವವರಿಲ್ಲವೆಂದು ಮರುಗುತ್ತಿದ್ದೇನೆ. ಇಷ್ಟು ಯಜ್ಞಯಾಗಾದಿಗಳನ್ನು ಮಾಡಿ ಶುದ್ಧನಾದರೂ ಮಕ್ಕಳಿಲ್ಲದಿರುವುದರಿಂದ ನಾನು ಒಂದು ಭಾಗದಲ್ಲಿ ಬೆಳಕು ಮತ್ತೊಂದು ಭಾಗದಲ್ಲಿ ಕತ್ತಲಿನಿಂದ ತುಂಬಿದ ಲೋಕಾಲೋಕಪರ್ವತದಂತಿದ್ದೇನೆ. ಪಿತೃ ಋಣವು ನನ್ನನ್ನು ಬಾಧಿಸುತ್ತದೆ. ಇಕ್ಷ್ವಾಕುವಂಶದ ರಾಜರ ಕಾರ್ಯಸಿದ್ಧಿಗಳು ತಮ್ಮ ಅಧೀನವಾಗಿರುವುದರಿಂದ ಆ ಋಣವು ನೀಗುವಂತೆ ಮಾಡಿರಿ".

### ವಸಿಷ್ಠರ ಆದೇಶ

ವಸಿಷ್ಠರ ಸ್ವಲ್ಪಹೊತ್ತು ಚಿಂತಿಸಿ "ದಿಲೀಪ! ನೀನು ಹಿಂದೆ ಸ್ವರ್ಗಲೋಕದಿಂದ ಭೂಲೋಕಕ್ಕೆ ತೆರಳುವಾಗ ದಾರಿಯಲ್ಲಿ ಕಲ್ಪವೃಕ್ಷದ ನೆರಳಿನಲ್ಲಿ ಕಾಮಧೇನು ಮಲಗಿದ್ದಿತು. ನೀನು ಋತುಸ್ನಾತಳಾದ ಈ ರಾಣಿಯ ಚಿಂತೆಯಿಂದ ಅದಕ್ಕೆ ನಮಸ್ಕಾರ ಮಾಡಲಿಲ್ಲ. ಅದರಿಂದ ಕುಪಿತವಾದ ಕಾಮಧೇನುವು ನನ್ನ ಸಂತತಿಯನ್ನು ಪೂಜಿಸದೆ ನಿನಗೆ ಸಂತತಿಯಾಗದಿರಲಿ ಎಂದು ಶಪಿಸಿತು. ಆಗ ಆಕಾಶಗಂಗೆಯು ಭೋರ್ಗರೆಯುತ್ತಿದ್ದುದರಿಂದ ಆ ಶಾಪವನ್ನು ನೀನಾಗಲಿ, ನಿನ್ನ ಸಾರಥಿಯಾಗಲಿ ಕೇಳಲಿಲ್ಲ. ಲೋಕದಲ್ಲಿ ಪೂಜಾರ್ಹರನ್ನು ಪೂಜಿಸದಿದ್ದರೆ ಇಷ್ಟಾರ್ಥವು ಕೈಗೂಡುವುದಿಲ್ಲ. ಆ ಧೇನುವು ಈಗ ವರುಣನ ಬಹು ದಿನಗಳ ಯಾಗದ ಹವಿಸ್ಸಿಗಾಗಿ ಪಾತಾಳದಲ್ಲಿದೆ.

ಆದ್ದರಿಂದ ನೀನು ಸಪತ್ನೀಕನಾಗಿ ನನ್ನಲ್ಲಿರುವ ಅದರ ಮಗಳು ನಂದಿನಿಯನ್ನು ಸೇವಿಸು. ಅದೂ ಇಷ್ಟಾರ್ಥವನ್ನೀಯುವುದು" ಮುನಿಯು ಹೀಗೆ ಹೇಳುತ್ತಿರುವಾಗಲೇ ನಂದಿನಿಯು ಕಾಡಿನಿಂದ ಹಿಂದಿರುಗಿತು. ಹಣೆಯಲ್ಲಿ ಬಿಳಿರೋಮದ ಚಿಹ್ನೆಯಿರುವ ಆ ನಂದಿನಿಯನ್ನು ನೋಡಿ ಶಕುನವನ್ನರಿತ ವಸಿಷ್ಠರು ಹೀಗೆಂದರು– "ರಾಜನೇ! ಹೆಸರನ್ನು ಹೇಳುತ್ತಿರುವಾಗಲೆ ಈ ಹಸುವು ಸಮೀಪಿಸಿರುವುದರಿಂದ ಬೇಗನೆ ನಿನ್ನಿಷ್ಟಾರ್ಥವು ನೆರವೇರುವುದೆಂದು ತಿಳಿ. ನೀನು ಕಾಡಿನ ಗಡ್ಡೆ ಗೆಣಸುಗಳನ್ನು ಆಹಾರವಾಗಿ ಮಾಡಿಕೊ. ಇದನ್ನು ಸೇವಿಸಿ ಸಂತೋಷಗೊಳಿಸು. ಇದು ಹೊರಟರೆ ನೀನು ಹೊರಡು. ನಿಂತರೆ ನಿಲ್ಲು. ಮಲಗಿದರೆ ಕೂತುಕೊ. ನೀರನ್ನು ಕುಡಿದರೆ ನೀನೂ ನೀರನ್ನು ಕುಡಿ. ನಿನ್ನ ಈ ಸತಿಯು ಬೆಳಿಗ್ಗೆ ಕಾಡಿನವರೆಗೆ ಇದನ್ನು ಹಿಂಬಾಲಿಸಲಿ. ಸಾಯಂಕಾಲ ಇದು ಬರುವಾಗ ಎದುರುಗೊಳ್ಳಲಿ. ಹೀಗೆ ಇದ್ದರೆ ಅನುಗ್ರಹವಾಗುವವರೆಗೂ ಸೇವಿಸು. ನಿನ್ನ ಸೇವೆಯು ನಿರ್ವಿಘ್ನವಾಗಿ ನಡೆಯಲಿ. ಪುತ್ರನನ್ನು ಪಡೆ" ಎಂದರು. ದಿಲೀಪನು ಅವರ ಆಜ್ಞೆಯನ್ನು ಒಪ್ಪಿದನು. ಬಳಿಕ ವಸಿಷ್ಠರು ದೊರೆಯನ್ನು ನಿದ್ರಿಸಲು ಕಳುಹಿಸಿದರು. ಅವರು ತಮ್ಮ ತಪಸ್ಸಿದ್ಧಿಯಿಂದ ರಾಜನಿಗೆ ಸಂತತಿಯನ್ನೀಯಲು ಶಕ್ತರಾದರೂ ರಾಜನು ವ್ರತವನ್ನಾಚರಿಸಬೇಕೆಂಬ ಉದ್ದೇಶದಿಂದ ಹೀಗೆ ಮಾಡಿದರು. ದೊರೆಯು ರಾತ್ರಿ ಪರ್ಣಶಾಲೆಯಲ್ಲಿಯೇ ಮಲಗಿ ಬೆಳಿಗ್ಗೆ ಋಷಿಕುಮಾರರ ವೇದಾಧ್ಯಯನ ಶಬ್ದದಿಂದ ಎಚ್ಚರಗೊಂಡನು.

# INTRODUCTION

In Sanskrit, any literary composition is generally called Kavya. This Kavya is of two kinds, DRS'YA and S'RAVYA. The 'seeable' literary writings, such as the drama belong to the former group, while the 'hearable' ones comprising of Gadya (Prose), Padya (poetry and the Campu (prose interspersed with poetry belong to the latter. The Padya or metrical composition again is of two kinds in accordance with its length-Mahakavyas (long poems) and Khandakavyas (short poems) Kalidasa's Meghaduta is a Khandakavya, while his Raghuvamsa is a mahakavya.

**CHARACTERISTICS OF THE MAHAKAVYA.**

A Mahakavya must consist of not less then eight and not more than thirty cantos. The Stanzas in each canto may range between thirty and two hundred. The poem may deal with the life of a single hero or with the account of a whole race of kings. The verses in any canto must be of a uniform metre which may be altered at the end of the canto. The close of every canto must suggest the subject matter of the succeeding one. S'rangara, vira or S'anta should be the predominant sentiment in the poem whose object must be the attainment of the four Purusarthas, namely, Dharma, Artha, Kama and Moksha. The poem ought to be embellished with abundant figures of speech. It ought to contain descriptions of cities, seas, mountains, seasons, the rise of the sun and the moon, gardens, water-sport, drinking, love-sport, festivities, separation of lovers, marriages, birth of a son, counsels, the mission of ambassadors and the victories of war-lords. Such a Kavya, it is stated, will live to eternity.

सर्गबन्धो महाकाव्यं तत्रैको नायकः सुरः ।

सद्वंशः क्षत्रियो वापि धीरोदात्तगुणान्वितः ॥

.....................................................

नामस्य सर्गोपादेयकथया सर्गनाम तु ॥

(Sahitya Darpana 6.315 -325)

## *Kalidasa – LIFE, DATE AND WORKS*

***Life :*** There is a legend according to which Kalidasa was an illiterate, but was somehow married to an obstinate princess who abandoned him finding that he had no education at all. There upon he devoted himself to the worship of Kali who blessed him with literacy and poesy. Thus he became a Kali-dasa and returned to his wife who put him the question Asti, Kascit Vagarthah?, in replay to which it is started that he repeated the same words in the same order. But, in the affirmative, and that he later composed the three Kavya's-1-Kumarasambhava, 2-Meghaduta and 3-Raghuvams'a, with each one of those words at the commencement of the first verses of them respectiviely.

There is also a tradition that the poet's parents, who were childless for a long time, named their son Kali-dasa, as he was born by the grace of Kali whom they worshipped with devotion.

We can gather some information about Kalidasa's life from his own writings. His repeated reference to Ujjain indicates that he must have spent atleast a part of his life in that city. His dwelling upon the charms of that city in his Meghadutam makes it clear that he loved it much. His description of the Tour about the whole of India and even into the regions beyond the borders of India in the

Raghuvamsam, makes any one believe that Kalidasa himself must have made such a grand tour. Mountains seems to have impressed him deeply. As acutely observed by a critic, he is the only Sanskrit poet who has described a certain flower (the saffron) which is exclusively Kashmirian.

There can be no doubt that Kalidasa had extensive education and that he had mastered rhetoric, dramatic theory, and the science of grammar the chief of all sciences. He seems to have had besides the knowledge of Law and Astronomy, proficiency in the profound and subtle systems of philosophy. If his Kumarasambhava is Sivaistic, his Raghuvamsa is Visnuite. If the hymn to Visnu in the latter work is expressing Vedantic monism, the hymn to Brahma in the former expresses the dualism of the Sankhyas. The Buddhistic and Yoga doctrines are all mentioned here and there. Therefore we may observe that in matters of religion and philosophy, Kalidasa was of an unbiased mind.

***DATE :*** It is a pity that nothing can be stated with definiteness about the life or date of Kalidasa. The several accounts of his life that we have are all legends and unreliable stories. Regarding his date we are only in the region of conjecture and no more. Several theories have been advanced by eminent scholars of both West and East, to determine the date of Kalidasa, but none of them has merited undisputed acceptance. These theories assign Kalidasa to different periods between the $8^{th}$ Cent. B.C., and 11the Cent.A.D.

In most of these theories we find that the theorists are particular of associating their views with some Vikramaditya or other as Kalisasa's patron, not being able to set aside the tradition that he

enjoyed the patronage of Vikramaditya. It is not unlikely that Kalidasa has paid his tribute to this patron of his in the title of his play Vikramorvasiyam. But as there have been several Vikramaditya's, this tradition by itself does not help us to fix the date of Kalidasa. One King Vikramaditya started the era known after him, which commences from 57 B.C. A good many scholars are inclined to think that this king was our poet's patron. In support of this view it is pointed out that the law of inheritance as detailed in the Sakuntalam Act VI, that the property of a person who died childless would go to the king, was current in or about the first cent. B.C. moreover, the Bauddha poet As'vaghosa (beginning of the 2$^{nd}$ cent. A.D) has, in all likelihood, borrowed his ideas from Kalidasa, as the latter has been recognized as an original poet borrowing his subjects only from ancient authors like Valmiki. These tend to show that Kalidasa might have lived in the first cent. B.C. So, this may be taken as the upper limit for Kalidasa's date.

To fix the lower limit for the date of Kalidasa, we have some reliable grounds. The Buddhagaya inscription dated 472 A.D. of Mahanaman mentions Kalidasa's name. Vatsabhatti's (Mandassor) inscription dated 473 A.D. betrays the influence of the Meghasandes'a of Kalidasa. Bana (c 600 A.D) refers to Kalidasa in the introductory verse no. 16 of his Harsacarita. The Aihole inscription dated 634 A.D. clearly mentions Kalidasa's name along with Bharavi's. Dandin again refers to Kalidasa in his Avantisundarikatha. From these evidences, we may safely conclude that Kalidasa must have lived before the middle of the 5$^{th}$ century A.D at the latest.

The two limits mentioned above are, at present, generally accepted. The period thus arrived at, viz, 56 B.C. to 450 A.D. (5 centuries) is no doubt too long. But, in the absence of very reliable evidences, assigning Kalidasa to any particular date or century would only by conjectural.

***KALIDASA'S WORKS :*** More than forty works are attributed to Kalidasa, but critics acknowledge only seven of them as his. Those works are-

| | |
|---|---|
| 1-3, Three dramas | 1.Malavikagnimitram |
| | 2. Vikramorvasiyam |
| | 3.Abhijnana S'akuntalam |
| 4-5, Two Mahakavyas | 1. Raghuvamsam |
| | 2. Kumarasambhavam |
| 6-7, Two Khandakavyas- | 1. Meghadutam |
| | 2. Rtusamharam |

### *Raguvamsam*

Raguvamsa consists of 19 cantos in which some selected important incidents in lives of eight kings –Dilipa, Raghu, Aja, Dasaratha, Sri Rama, Kusa, Atithi, and Agnivarna are described in detail and another twenty one kings are just briefly enumerated in one canto. The story of Sri Rama is, of course, narrated in full and it occupies, quite fittingly, the central part of the poem. In such a work dealing with 29 kings of the same dynasty, we cannot expect the development of a single continuous plot, but this defect, if it is

considered so, has been overcome by the development of धर्मवीर as the predominent sentiment, अङ्गीरस. the incidents selected for detailed description, though not directly connected with each other, form the विभावानुभावव्यभिचारिसामग्री of धर्मवीर and that provides a unity of purpose. Moreover, the common family traits of the Raghus which are enumerated in verses beginning with सोऽहमाजन्मशुद्धानाम् and ending with रघूणानामन्वयं वक्ष्ये are beautifully brought out through the incidents described and they provide the connecting link for the different stories. Thus the poet has brought about an effective unity in diversity and therein lies his real genius.

## Summary of Canto I

This Canto prepares the ground for the birth of Raghu after whom the family and the poem are named. After saluting Parvati and Parameshwara, Kalidasa expresses his humility and pays his respects to the earlier writers who have shown him the path for composing epic poetry (Verses 2 to 4). Then follows a list of common virtues (Verse 5 to 9) of the kings of Solar dynasty which the poet proposes to elaborate in the work. The royal line of the Raghus originated from the Sun and Vaivaswata Manu was the first king to rule the earth. In his pure family was born a virtuous king by name Dilipa.

### Dilipa's personality and administrations (verses 13-30)

Dilipa possessed a strong and well-built body capable of discharging his duties as a king. His wisdom, learning and

enterprises were all very great in proportion to his magnificent personality. He was dreaded by the wicked and loved by the good. Under his rule, the people followed the righteous path. The army was a mere ornament to him because he never depended on it to gain his object, but relied only on his own strength and wisdom. Free from greed, he collected taxes only to spend for the welfare of the people. Sense of duty, self-control, fearlessness, tolerance and learning co-existed in him like brothers. He looked after the education, protection and maintenance of his subjects and hence he was regarded as their father. Natural calamities did not visit his kingdom and the people were free from the fear of thieves and robbers. He was quite impartial and his virtues existed only for the benefit of others. Being a pious king, he performed sacrifices to please the Gods who, in turn, made the crops grow well by giving timely rains. He ruled the earth with case as if it were a single city. He was an ideal king who possessed most of the family traits mentioned before.

Dilipa married Sudakshina, the princess of Magadha, whom he loved dearly. By her he had no issue for a long time and hence he handed over the Government to the ministers and went with his wife to the hermitage of his Guru, Vasishtha in order to perform, at his direction, the religious rites that would enable him to beget a son.

**Dilipa's Journey to the hermitage of Vasishtha (verses 36-48)**

Dilipa set out with his wife seated in a single chariot and followed by a few attendants. The fragrant and cool breeze of the countryside, the notes of the peacocks resembling the षड्जस्वर, the

timid deer confidently looking at the chariot with wide-open eyes, the Sarasa birds flying in formation providing, as it were, a decorative garland unsupported by the pillers and the full blown lotuses in the tanks, made the journey delightful. Sacrificers in the villages on the route greeted the royal couple and conferred their blessings. Elderly cowherds came forward to greet the king with presents of butter and the king made kind enquiries to them. Showing the unfamiliar but beautiful objects to the queen, the king did not feel the fatigue of the long journey. In the evening, the couple who had a peculiar splendour in their simple and pure dress, reached the Asrama of Vasishtha.

**Description of Vasishtha's hermitage (verses 49-55)**

The ascetics were returning to the hermitage from the forest with fruits, vegetables, Kusa grass and sacrificial fuel sticks. The entrance to the cottages were crowded by the deer fondly fed by the wives of the sages. Young ascetic girls watering the little plants left the place soon after pouring water into the basin so that the birds might confidently drink the same. Deer were sitting and chewing the cud in the front yards of the huts of hermits where corns spread for drying have been heaped at the close of the day. The smoke from the sacrificial fires carrying the fragrance of the offerings sanctified the whole atmosphere. The king who got down from the chariot with his wife was duly honoured by the sages.

The king and queen met Vasishta and Arundhati at the close of the evening rites and paid their respects. The sage honoured the royal guests and then enquired about the welfare of the kingdom.

**Dilipa's reply to the enquiry of Vasishtha (verses 60-72)**

Dilipa said that there was prosperity in all the seven constituents of his state when he, his guru, was the removes of all the man made and natural calamities. The enemies have been subdued by the spells of Vasishta and the Gods have been pleased by his performance of sacrifices. When the Guru possessed of great Brahminical power looked after the welfare of the king, the kingdom was sure to be prosperous and happy. But Dilipa was unhappy in one respect. He had no issue and the thought that his ancestors were worried fearing the stoppage of the offerings of पिण्ड and निवापोदक pained him very much. Progeny alone was capable of giving happiness in this and the other world. Without that, his condition was indeed pitiable and the Guru should feel sympathy for him as he would on seeing a barron tree of the hermitage watered by himself. Only by begetting a son, one could discharge the debt due to the ancestors. So Dilipa wanted Vasishta to do that by which he would be blessed with a child.

**Vasishta's speech (verses 74-81)**

Vasishta then went into deep meditation and discovered the cause of obstruction to progeny. He informed the king that the impediement to the birth of a child was caused by his failure to perform the pious duty of honouring the Divine cow (कामधेनु) which was remaining on his path when he was once returning from the heaven. Failure to honour those who deserved it is a sin which obstructs prosperity. Since the Divine cow was not readily available for propitiation, Vasishtha advised Dilipa to serve and please

Nandini, the daughter of कामधेनु as a substitute, for, Nandini when pleased was capable of granting his desire.

**Description of Nandini (verses 82-85)**

Just when Vasishtha mentioned her name Nandini returned from the forest. She was reddish brown in colour and had a beautiful white spot on her forehead. Milk was flowing from her large udder at the sight of the calf. By the particles of dust raised by her hoofs she purified the king as if with a bath in sacred waters. Vasishtha told the king that her timely arrival was a good omen indicating the fulfilment of his object.

**The vow to be observed by the king and queen (verses 88-91)**

Then he directed the king to attend on the cow, himself living on the produce of the forest. He should move when the cow moved, stop when she stopped, drink when she had drunk. Thus he should gain her favour like a student acquiring mastery over learning by constant practice. The queen also should offer worship to the cow with devotion in the morning and follow her up to the limits of the penance grove and receive her in the evening. The king accepted the advice with due respect and being dismissed for sleep, spent the night lying on a bed of Kusa grass suitable for his vow.

This canto brings out some of the best traits in the character of Dilipa and the greatness of the sage Vasishtha.

**Character of Dilipa**

Apart from possessing the traits of an ideal king as described in verses 13 to 30, Dilipa was endowed with many other human

virtues which draw out the respect and sympathy of the readers. He had confidence in the greatness of his Guru and his devotion for him was deep and sincere. He addressed Vasishtha as तात and, like a child, pathetically appealed to him to have pity for him. As a true disciple, he obeyed the command of the Guru. The absence of progeny pained him more because he could not discharge the debt to his departed forefathers. Though a ruling monarch, he willingly undertook the rigorous vow of attending on the cow and living the life of ascetics, slept on Kusa grass. He treated with equal respect the learned sacrificers who conferred their blessings on him and the aged cow-herds who greeted him with presents of butter. He loved and appreciated Nature and made the queen also do the same. This made their long journey and the life in the forest delightful. Rarely we come across a king who is so great and powerful and at the same time so simple, modest and pious. Though the prosperity of his kingdom was as much due to his valour and ability as to the power of Vasishtha, he modestly attributed it to the Brahminical power of the Guru. Such is an ideal king of Kalidasa.

**Greatness of Vasishtha**

Vasishtha was the mind born son of the creator and was the discoverer of Vedic spells. He was a Kulapathi with many disciples and sages living in and around his Ashrama. Being well versed in Atharva Veda, he possessed the power to subdue the enemies of the Ikshvakus who took him as their Guru. He could see the past, present and future by his inner vision acquired by penance. Being a regular performer of sacrifices and Homas on behalf of his disciples, the Ikshvakus, he pleased the Gods and brought

prosperity to their kingdom. Dilipa attributed the long and happy life of his subjects to the Brahminical power of Vasishtha. Finding out the cause of obstruction to the birth of a son to Dilipa by meditation, he prescribed the right remedy and the king readily accepted it. The fact that Nandini, the daughter of Kamadhenu, was permanently staying with Vasishtha is itself a good evidence of his greatness. Referring to him Kalidasa uses the words तपोनिधिः, मन्त्रकृत्, ब्रह्मयोनिः, संयमी, कुलपतिः, महर्षि, मुनिः, होता, विधाता, भगवान् etc., which reveal the various aspects of his greatness. The comparison of such a sage accompanied by his chaste wife अरुन्धती to the sacrificial fire associated with स्वाहा is really beautiful and fully justified.

# रघुवंशम्

## प्रथमः सर्गः

वागार्थविव सम्पृक्तौ वागर्थप्रतिपत्तये ।
जगतः पितरौ वन्दे पार्वतीपरमेश्वरौ ॥ १ ॥

क्व सूर्यप्रभवो वंशः क्व चाल्पविषया मतिः ।
तितीर्षुर्दुस्तरं मोहादुडुपेनास्मि सागरम् ॥ २ ॥

मन्दः कवियशःप्रार्थी गमिष्याम्युपहास्यताम् ।
प्रांशुलभ्ये फले लोभादुद्बाहुरिव वामनः ॥ ३ ॥

अथवा कृतवाग्द्वारे वंशेऽस्मिन् पूर्वसूरिभिः ।
मणौ वज्रसमुत्कीर्णे सूत्रस्येवास्ति मे गतिः ॥ ४ ॥

सोऽहमाजन्मशुद्धानामाफलोदयकर्मणाम् ।
आसमुद्रक्षितीशानामानाकरथवर्त्मनाम् ॥ ५ ॥

यथाविधिहुताग्नीनां यथाकामार्चितार्थिनाम् ।
यथापराधदण्डानां यथाकालप्रबोधिनाम् ॥ ६ ॥

त्यागाय संभृतार्थानां सत्याय मितभाषिणाम् ।
यशसे विजिगीषूणां प्रजायै गृहमेधिनाम् ॥ ७ ॥

शैशवेऽभ्यस्तविद्यानां यौवने विषयैषिणाम् ।

वार्धके मुनिवृत्तीनां योगेनान्ते तनुत्यजाम् ॥ ८ ॥

रघुणामन्वयं वक्ष्ये तनुवाग्विभवोऽपि सन् ।

तद्गुणैः कर्णमागत्य चापलाय प्रचोदितः ॥ ९ ॥

तं सन्तः श्रोतुमर्हन्ति सदसद्व्यक्तिहेतवः ।

हेम्नः संलक्ष्यते ह्यग्नौ विशुद्धिः श्यामिकापि वा ॥ १० ॥

वैवस्वतो मनुर्नाम माननीयो मनीषिणाम् ।

आसीन्महीक्षितामाद्यः प्रणवश्छन्दसामिव ॥ ११ ॥

तदन्वये शुद्धिमति प्रसूतः शुद्धिमत्तरः ।

दिलीप इति राजेन्दुरिन्दुः क्षीरनिधाविव ॥ १२ ॥

व्यूढोरस्को वृषस्कन्धः सालप्रांशुर्महाभुजः ।

आत्मकर्मक्षमं देहं क्षात्रो धर्म इवाश्रितः ॥ १३ ॥

सर्वातिरिक्तसारेण सर्वतेजोऽभिभाविना ।

स्थितः सर्वोन्नतेनोर्वीं क्रान्त्वा मेरुरिवात्मना ॥ १४ ॥

आकारसदृशप्रज्ञः प्रज्ञया सदृशागमः ।

आगमैः सदृशारम्भ आरम्भसदृशोदयः ॥ १५ ॥

भीमाकान्तैर्नृपगुणैः स बभूवोपजीविनाम् ।

अधृष्यश्चाभिगम्यश्च यादोरत्नैरिवार्णवः ॥ १६ ॥

रेखामात्रमपि क्षुण्णादा मनोर्वर्त्मनः परम् ।

न व्यतीयुः प्रजास्तस्य नियन्तुर्नेमिवृत्तयः ॥ १७ ॥

प्रजानामेव भूत्यर्थं स ताभ्यो बलिमग्रहीत् ।

सहस्रगुणमुत्स्रष्टुमादत्ते हि रसं रविः ॥ १८ ॥

सेना परिच्छदस्तस्य द्वयमेवार्थसाधनम् ।

शास्त्रेष्वकुण्ठिता बुद्धिर्मौर्वी धनुषि चातता ॥ १९ ॥

तस्य संवृतमन्त्रस्य गूढाकारेङ्गितस्य च ।

फलानुमेयाः प्रारम्भाः संस्काराः प्राक्तना इव ॥ २० ॥

जुगोपात्मानमत्रस्तो भेजे धर्ममनातुरः ।

अगृध्नुराददे सोऽर्थमसक्तः सुखमन्वभूत् ॥ २१ ॥

ज्ञाने मौनं क्षमा शक्तौ त्यागे श्लाघाविपर्ययः ।

गुणा गुणानुबन्धित्वात्तस्य सप्रसवा इव ॥ २२ ॥

अनाकृष्टस्य विषयैर्विद्यानां पारदृश्वनः ।

तस्य धर्मरतेरासीद्वृद्धत्वं जरसा विना ॥ २३ ॥

प्रजानां विनयाधानाद्रक्षणाद्भरणादपि ।

स पिता पितरस्तासां केवलं जन्महेतवः ॥  २४ ॥

स्थित्यै दण्डयतो दंड्यान्परिणेतुः प्रसूतये ।

अप्यर्थकामौ तस्यास्तां धर्म एव मनीषिणः ॥ २५ ॥

दुदोह गां स यज्ञाय सस्याय मघवा दिवम् ।

सम्पद्विनिमयेनोभौ दधतुर्भुवनद्वयम् ॥ २६ ॥

न किलानुययुस्तस्य राजानो रक्षितुर्यशः ।

व्यावृत्ता यत्परस्वेभ्यः श्रुतौ तस्करता स्थिता ॥ २७ ॥

द्वेष्योऽपि सम्मतः शिष्टस्तस्यार्तस्य यथौषधम् ।

त्याज्यो दुष्टः प्रियोऽप्यासीदङ्गुलीवोरगक्षता ॥ २८ ॥

तं वेधा विदधे नूनं महाभूतसमाधिना ।

तथा हि सर्वे तस्यासन्परार्थैकफला गुणाः ॥ २९ ।

स वेलावप्रवलयां परिखीकृतसागराम् ।

अनन्यशासनामुर्वीं शशासैकपुरीमिव ॥ ३० ॥

तस्य दाक्षिण्यरूढेन नाम्ना मगधवंशजा ।

पत्नी सुदक्षिणेत्यासीदध्वरस्येव दक्षिणा ॥ ३१  ॥

कलत्रवन्तमात्मानमवरोधे महत्यपि ।

तया मेने मनस्विन्या लक्ष्म्या च वसुधाधिपः ॥ ३२ ॥

तस्यामात्मानुरूपायामात्मजन्मसमुत्सुकः ।

विलम्बितफलैः कालं स निनाय मनोरथैः ॥ ३३ ॥

सन्तानार्थाय विधये स्वभुजादवतारिता ।

तेन धूर्जगतो गुर्वी सचिवेषु निचिक्षिपे ॥ ३४ ॥

अथाभ्यर्च्य विधातारं प्रयतौ पुत्रकाम्यया ।

तौ दम्पती वसिष्ठस्य गुरोर्जग्मगुराश्रमम् ॥ ३५ ॥

स्निग्धगम्भीरनिर्घोषमेकं स्यन्दनमास्थितौ ।

प्रावृषेण्यं पयोवाहं विद्युदैरावताविव ॥ ३६ ॥

मा भूदाश्रमपीडेति परिमेयपुरस्सरौ ।

अनुभावविशेषात्तु सेनापरिवृताविव ॥ ३७ ॥

सेव्यमानौ सुखस्पर्शैः शालनिर्यासगन्धिभिः ।

पुष्परेणूत्किरैर्वातैराधूतवनराजिभिः ॥ ३८ ॥

मनोभिरामाः शृण्वन्तौ रथनेमिस्वनोन्मुखैः ।

षड्जसंवादिनीः केका द्विधा भिन्नाः शिखण्डिभिः ॥ ३९ ॥

परस्पराक्षिसादृश्यमदूरोज्झितवर्त्मसु ।

मृगद्वन्द्वेषु पश्यन्तौ स्यन्दनाबद्धदृष्टिषु ॥ ४० ॥

श्रेणीबन्धाद्वितन्वद्भिरस्तम्भां तोरणस्रजम् ।

सारसैः कलनिर्ह्रादैः क्वचिदुन्नमिताननौ ॥ ४१ ॥

पवनस्यानुकूलत्वात्प्रार्थनासिद्धिशंसिनः ।

रजोभिस्तुरगोत्कीर्णैरस्पृष्टालकवेष्टनौ ॥ ४२ ॥

सरसीष्वरविन्दानां वीचिविक्षोभशीतलम् ।

आमोदमुपजिघ्रन्तौ स्वनिःश्वासानुकारिणम् ॥ ४३ ॥

ग्रामेष्वात्मविसृष्टेषु यूपचिन्हेषु यज्वनाम् ।

अमोघाः प्रतिगृण्हन्तावर्ध्यानुपदमाशिषः ॥ ४४ ॥

हैयंगवीनमादाय घोषवृद्धानुपस्थितान् ।

नामधेयानि पृच्छन्तौ वन्यानां मार्गशाखिनाम् ॥ ४५ ॥

काप्यभिख्या तयोरासीद्व्रजतोः शुद्धवेषयोः ।

हिमनिर्मुक्तयोर्योगे चित्राचन्द्रमसोरिव ॥ ४६ ॥

तत्तद्भूमिपतिः पत्न्यै दर्शयन्प्रियदर्शनः ।

अपि लङ्घितमध्वानं बुबुधे न बुधोपमः ॥ ४७ ॥

स दुष्प्रापयशाः प्रापदाश्रमं श्रान्तवाहनः ।

सायं संयमिनस्तस्य महर्षेर्महिषीसखः ॥ ४८ ॥

वनान्तरदुपावृत्तैः समित्कुशफलाहरैः ।

पूर्यमाणमदृश्याग्निप्रत्युद्यातैस्तपस्विभिः ॥ ४९ ॥

आकीर्णमृषिपत्नीनामुटजद्वाररोधिभिः ।

अपत्यैरिव नीवारभागधेयोचितैर्मृगैः ॥ ५० ॥

सेकान्ते मुनिकन्याभिस्तत्क्षणोज्झितवृक्षकम् ।

विश्वासाय विहङ्गानामालवालाम्बुपायिनाम् ॥ ५१ ॥

आतपात्ययसंक्षिप्तनीवारासु निषादिभिः ।

मृगैर्वर्तितरोमन्थमुटजाङ्गणभूमिषु ॥ ५२ ॥

अभ्युत्थिताग्निपिशुनैरतिथीनाश्रमोन्मुखान् ।

पुनानं पवनोध्दूतैर्धूमैराहुतिगन्धिभिः ॥ ५३ ॥

अथ यन्तारमादिश्य धुर्यान्विश्रामयेति सः ।

तामवारोहयत्पत्नीं रथादवततार च ॥ ५४ ॥

तस्मै सभ्याः सभार्याय गोप्त्रे गुप्ततमेन्द्रियाः ।

अर्हणामर्हते चक्रुर्मुनयो नयचक्षुषे ॥ ५५ ॥

विधेः सायन्तनस्यान्ते स ददर्श तपोनिधिम् ।

अन्वासितमरुन्धत्या स्वाहयेव हविर्भुजम् ॥ ५६ ॥

तयोर्जगृहतुः पादान् राजा राज्ञी च मागधी ।

तौ गुरुर्गुरुपत्नी च प्रीत्या प्रतिननन्दतुः ॥ ५७ ॥

तमातिथ्यक्रियाशान्तरथक्षोभपरिश्रमम् ।

पप्रच्छ कुशलं राज्ये राज्याश्रममुनिं मुनिः ॥ ५८ ॥

अथाथर्वनिधेस्तस्य विजितारिपुरः पुरः ।

अर्थ्यामर्थपतिर्वाचमाददे वदतां वरः ॥ ५९ ॥

उपपन्नं ननु शिवं सप्तस्वङ्गेषु यस्य मे ।

दैवीनां मानुषीणां च प्रतिहर्ता त्वमापदाम् ॥ ६० ॥

तव मन्त्रकृतो मन्त्रैर्दूरात्प्रशमितारिभिः ।

प्रत्यादिश्यन्त इव मे दृष्टलक्ष्यभिदः शराः ॥ ६१ ॥

हविरावर्जितं होतस्त्वया विधिवदग्निषु ।

वृष्टिर्भवति सस्यानामवग्रहविशोषिणाम् ॥ ६२ ॥

पुरुषायुषजीविन्यो निरातङ्का निरीतयः ।

यन्मदीयाः प्रजास्तस्य हेतुस्त्वद्ब्रह्मवर्चसम् ॥ ६३ ॥

त्वयैवं चिन्त्यमानस्य गुरुणा ब्रह्मयोनिना ।

सानुबन्धाः कथं न स्युः सम्पदो मे निरापदः ॥ ६४ ॥

किन्तु वध्वां तवैतस्यामदृष्टसदृशप्रजम् ।

न मामवति सद्वीपा रत्नसूरपि मेदिनी ॥ ६५ ॥

नूनं मत्तः परं वंश्याः पिण्डविच्छेददर्शिनः ।

न प्रकामभुजः श्राद्धे स्वधासंग्रहतत्पराः ॥ ६६ ॥

मत्परं दुर्लभं मत्वा नूनमावर्जितं मया ।

पयः पूर्वैः स्वनिःश्वासैः कवोष्णमुपभुज्यते ॥ ६७ ॥

सोऽहमिज्याविशुद्धात्मा प्रजालोपनिमीलितः ।

प्रकाशश्चाप्रकाशश्च लोकालोक इवाचलः ॥ ६८ ॥

लोकान्तरसुखं पुण्यं तपोदानसमुद्भवम् ।

सन्ततिः शुद्धवंश्या हि परत्रेह च शर्मणे ॥ ६९ ॥

तया हीनं विधातर्मां कथं पश्यन्न दूयसे ।

सिक्तं स्वयमिव स्नेहाद्वन्ध्यमाश्रमवृक्षकम् ॥ ७० ॥

असह्यपीडं भगवन्नृणमन्त्यमवेहि मे ।

अरुन्तुदमिवालानमनिर्वाणस्य दन्तिनः ॥ ७१ ॥

तस्मान्मुच्ये यथा तात संविधातुं तथार्हसि ।
इक्ष्वाकूणां दूरापेऽर्थे त्वदधीना हि सिद्धयः ॥ ७२ ॥

इति विज्ञापितो राज्ञा ध्यानस्तिमितलोचनः ।
क्षणमात्रमृषिस्तस्थौ सुप्तमीन इव हृदः ॥ ७३ ॥

सोऽपश्यत्प्रणिधानेन सन्ततेः स्तम्भकारणम् ।
भावितात्मा भुवो भर्तुरथैनं प्रत्यबोधयत् ॥ ७४ ॥

पुरा शक्रमुपस्थाय तवोर्वीं प्रति यास्यतः ।
आसीत्कल्पतरुच्छायामाश्रिता सुरभिः पथि ॥ ७५ ॥

धर्मलोपभयाद्राज्ञीमृतुस्नातामिमां स्मरन् ।
प्रदक्षिणक्रियार्हायां तस्यां त्वं साधु नाचरः ॥ ७६ ॥

अवजानासि मां यस्मादतस्ते न भविष्यति ।
मत्प्रसूतिमनाराध्य प्रजेति त्वां शशाप सा ॥ ७७ ॥

स शापो न त्वया राजन्न च सारथिना श्रुतः ।
नदत्याकाशगङ्गायाः स्त्रोतस्युद्दामदिग्गजे ॥ ७८ ॥

ईप्सितं तदवज्ञानाद्विद्धिसार्गलमात्मनः ।
प्रतिबध्नाति हि श्रेयः पूज्यपूजाव्यतिक्रमः ॥ ७९ ॥

हविषे दीर्धसत्रस्य सा चेदानीं प्रचेतसः ।

भुजङ्गपिहितद्वारं पातालमधितिष्ठति ॥ ८० ॥

सुतां तदीयां सुरभेः कृत्वा प्रतिनिधिं शुचिः ।

आराधय सपत्नीकः प्रीता कामदुघा हि सा ॥ ८१ ॥

इति वादिन एवास्य होतुराहुतिसाधनम् ।

अनिन्द्या नन्दिनी नाम धेनुराववृते वनात् ॥ ८२ ॥

ललाटोदयमाभुग्नं पल्लवस्निग्धपाटला ।

बिभ्रती श्वेतरोमाङ्कं सन्ध्येव शशिनं नवम् ॥ ८३ ॥

भुवं कोष्णेन कुण्डोध्नी मेध्येनावभृथादपि ।

प्रस्नवेनाभिवर्षन्ती वत्सालोकप्रवर्तिना ॥ ८४ ॥

रजःकणैः खुरोद्धूतैः स्पृशद्भिर्गात्रमन्तिकात् ।

तीर्थाभिषेकजां शुद्धिमादधाना महीक्षितः ॥ ८५ ॥

तां पुण्यदर्शनां दृष्ट्वा निमित्तज्ञस्तपोनिधिः ।

याज्यमाशंशितावन्ध्यप्रार्थनं पुनरब्रवीत् ॥ ८६ ॥

अदूरवर्तिनीं सिद्धिं राजन्विगणयात्मनः ।

उपस्थितेयं कल्याणी नाम्नि कीर्तित एव यत् ॥ ८७ ॥

वन्यवृत्तिरिमां शश्वदात्मानुगमनेन गाम् ।
विद्यामभ्यसनेनेव प्रसादयितुमर्हसि ॥ ८८ ॥
प्रस्थितायां प्रतिष्ठेथाः स्थितायां स्थितिमाचरेः ।
निषण्णायां निषीदास्यां पीताम्भसि पिबेरपः ॥ ८९ ॥
वधूर्भक्तिमती चैनामर्चितामातपोवनात् ।
प्रयता प्रातरन्वेतु सायं प्रत्युद्व्रजेदपि ॥ ९० ॥
इत्या प्रसादादस्यास्त्वं परिचर्यापरो भव ।
अविघ्नमस्तु ते स्थेयाः पितेव धुरि पुत्रिणाम् ॥ ९१ ॥
तथेति प्रतिजग्राह प्रीतिमान्सपरिग्रहः ।
आदेशं देशकालज्ञः शिष्यः शासितुरानतः ॥ ९२ ॥
अथ प्रदोषे दोषज्ञः संवेशाय विशांपतिम् ।
सूनुः सूनृतवाक् स्रष्टुर्विससर्जोर्जितश्रियम् ॥ ९३ ॥
सत्यामपि तपस्सिद्धौ नियमापेक्षया मुनिः ।
कल्पवित्कल्पयामास वन्यामेवास्य संविधाम् ॥ ९४ ॥

निर्दिष्टां कुलपतिना स पर्णशाला

मध्यास्य प्रयतपरिग्रहद्वितीयः ।

तच्छिष्याध्ययननिवेदितावसानां

संविष्टः कुशशयने निशां निनाय ॥९५॥

*॥ इति महाकविश्रीकालिदासकृतौ रघुवंशे महाकाव्ये*

*वसिष्ठाश्रमाभिगमनो नाम प्रथमः सर्गः ॥*

# ರಘುವಂಶಮ್-ಪ್ರಥಮ ಸರ್ಗಃ

# (ಅನ್ವಯಃ ತಾತ್ಪರ್ಯಂ ಚ)

1 **ಅರ್ಥ** : (ನಾನು) ವಾಗರ್ಥಾವಿವ=ಶಬ್ದಾರ್ಥಗಳಂತೆ, ಸಂಪೃಕ್ತೌ=ಒಟ್ಟಿಗೆ ಸೇರಿರುವ, ಜಗತಃ=ಲೋಕದ, ಪಿತರೌ=ತಂದೆತಾಯಿಗಳಾದ, ಪಾರ್ವತೀಪರಮೇಶ್ವರೌ=ಪಾರ್ವತೀ ಮತ್ತು ಶಂಕರನನ್ನು, ವಾಗರ್ಥ=ಶಬ್ದ ಮತ್ತು ಅರ್ಥಗಳ, ಪ್ರತಿಪತ್ತಯೇ=ಸರಿಯಾದ ತಿಳಿವಳಿಕೆಗೋಸ್ಕರ, ವಂದೇ=ನಮಸ್ಕಾರ ಮಾಡುತ್ತೇನೆ.

**ತಾತ್ಪರ್ಯ** : ಶಿವ ಮತ್ತು ಪಾರ್ವತಿಯರು ಗಂಡ-ಹೆಂಡತಿಯರು. ಅವರು ಶಬ್ದ ಮತ್ತು ಅರ್ಥಗಳು ಒಟ್ಟಿಗೆ ಇರುವಂತೆ ಒಂದೇ ದೇಹದಲ್ಲಿ ಸೇರಿಕೊಂಡಿರುವರು. ಮತ್ತು ಪ್ರಪಂಚದ ಸೃಷ್ಟಿಗೆ ತಂದೆ-ತಾಯಿಗಳಂತೆ ಕಾರಣರು. ಇವರನ್ನು ನಾನು ಒಟ್ಟಿಗೆ ಕೂಡಿಕೊಂಡಿರುವ ಶಬ್ದ ಅರ್ಥಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕಾಗಿ ನಮಸ್ಕಾರ ಮಾಡುತ್ತೇನೆ.

**2. ಅ**. ಸೂರ್ಯಪ್ರಭವಃ=ಸೂರ್ಯನೇ ಉತ್ಪತ್ತಿಕಾರಣವಾಗುಳ್ಳ, ವಂಶಃ=(ಸೂರ್ಯ) ವಂಶವು, ಕ್ವ=ಎಲ್ಲಿ? ಅಲ್ಪವಿಷಯಾ=ಸ್ವಲ್ಪವಿಷಯವನ್ನು ತಿಳಿದುಕೊಳ್ಳುವ, ಮತಿಃ=(ನನ್ನ) ಬುದ್ಧಿಯು, ಕ್ವ=ಎಲ್ಲಿ?, ದುಸ್ತರಂ=ದಾಟಲಾಗದ, ಸಾಗರಂ=ಸಮುದ್ರವನ್ನು, ಮೋಹಾತ್= ಅಜ್ಞಾನದಿಂದ, ಉಡುಪೇನ=ತೆಪ್ಪದಿಂದ, ತಿತೀರ್ಷುಃ=ದಾಟಲಿಚ್ಛೆಯುಳ್ಳವನು, ಅಸ್ಮಿ=ಆಗಿದ್ದೇನೆ.

**ತಾ**. ರಘುರಾಜನ ವಂಶವು ಸೂರ್ಯನಿಂದ ಹುಟ್ಟಿರುವುದು. ಆದ್ದರಿಂದ ಅತ್ಯಂತ ದೊಡ್ಡದಾದುದು. ನನ್ನ ಬುದ್ಧಿಯು ಸ್ವಲ್ಪ ವಿಷಯವನ್ನು ಮಾತ್ರ ಗ್ರಹಿಸತಕ್ಕುದು. ಈಗ ಇಂತಹ ದೊಡ್ಡ ವಂಶವನ್ನು ವರ್ಣಿಸಲು ಪ್ರಯತ್ನಿಸುತ್ತಿರುವ ನಾನು ದಾಟಲಶಕ್ಯವಾದ ದೊಡ್ಡ ಸಮುದ್ರವನ್ನು ದಡ್ಡತನದಿಂದ ಹರಿಗೋಲಿನ ಸಹಾಯದಿಂದ ದಾಟಲು ಪ್ರಯತ್ನಿಸುತ್ತಿರುವ ದಡ್ಡನಂತಾಗಿರುವೆನು.

**3. ಅ** ಮಂದಃ=ದಡ್ಡನಾದ, ಕವಿ=ಕವಿಗಳ, ಯಶಃ=ಕೀರ್ತಿಯನ್ನು, ಪ್ರಾರ್ಥೀ=ಬೇಡುವ ನಾನು, ಪ್ರಾಂಶು=ಉದ್ದವಾದ ಮನುಷ್ಯನಿಂದ, ಲಭ್ಯೇ=ಪಡೆಯಲು ಯೋಗ್ಯವಾದ, ಫಲೇ=ಹಣ್ಣಿನಲ್ಲಿ, ಲೋಭಾತ್=ಅತ್ಯಾಶೆಯಿಂದ, ಉದ್ಬಾಹುಃ=ಮೇಲಕ್ಕೆತ್ತಿದ ತೋಳುಗಳುಳ್ಳ,

ವಾಮನಃ=ಇವ ಕುಳ್ಳನಂತೆ, ಉಪಹಾಸ್ಯತಾಂ=ಹಾಸ್ಯಮಾಡಲು, ಯೋಗ್ಯನಾಗುವಿಕೆಯನ್ನು, ಗಮಿಷ್ಯಾಮಿ= ಹೊಂದುವೆನು.

**ತಾ**. ನಾನು ದಡ್ಡನು. ಆದರೆ ಕವಿಯೆಂದು ಹೇಳಿಸಿಕೊಂಡು ಕೀರ್ತಿಯನ್ನು ಗಳಿಸಬೇಕೆಂದು ಅಪೇಕ್ಷಿಸುತ್ತಿದ್ದೇನೆ. ಆದ್ದರಿಂದ ಕುಳ್ಳನು, ಎತ್ತರವಾದ ಮನುಷ್ಯನು ಕೀಳಬಹುದಾದ ಹಣ್ಣನ್ನು ಕೀಳಲು ಕೈಯನ್ನು ಮೇಲಕ್ಕೆ ಚಾಚಿ ಹಾಸ್ಯಾಸ್ಪದ ನಾಗುವಂತೆ ನಾನು ಜನರ ಹಾಸ್ಯಕ್ಕೆ ವಿಷಯ ನಾಗುವೆನು.

**4. ಅ** ಅಥ ವಾ=ಹಾಗಲ್ಲದ ಪಕ್ಷಕ್ಕೆ, ಪೂರ್ವಸೂರಿಭಿಃ=ಹಿಂದಿನ ಕವಿಗಳಾದ ವಾಲ್ಮೀಕಿ ಮೊದಲಾದವರಿಂದ, ಕೃತ=ಮಾಡಲ್ಪಟ್ಟ, ವಾಕ್=ಮಾತೆಂಬ, ದ್ವಾರೆ ಬಾಗಿಲುಳ್ಳ, ಅಸ್ಮಿನ್=ಈ ವಂಶೇ=ಸೂರ್ಯವಂಶದಲ್ಲಿ, ವಜ್ರ=ಮಣಿಯನ್ನು ಕೊರೆಯುವ ಸೂಜಿಯಿಂದ, ಸಮುತ್ಕೀರ್ಣೇ=ಕೊರೆಯಲ್ಪಟ್ಟ, ಮಣೌ=ರತ್ನದಲ್ಲಿ, ಸೂತ್ರಸ್ಯ ಇವ=ನೂಲಿನಂತೆ, ಮೇ=ನನ್ನ, ಗತಿಃ=ಗಮನವು, ಅಸ್ತಿ=ಇದೆ.

**ತಾ**. ಅಥವಾ ಈ ಸೂರ್ಯ ವಂಶದ ರಾಜರನ್ನು ಹಿಂದಿನ ವಾಲ್ಮೀಕಿ ಮೊದಲಾದ ಮಹಾಕವಿಗಳು ವರ್ಣಿಸುತ್ತಾರೆ. ಆದ್ದರಿಂದ ವಜ್ರ ವೆಂಬ ಸೂಜಿಯಿಂದ ಕೊರೆದು ತೂತು ಮಾಡಲ್ಪಟ್ಟ ರತ್ನದಲ್ಲಿ ನೂಲು ಸುಲಭವಾಗಿ ತೂರುವಂತೆ ನನಗೆ ಈ ವಂಶವನ್ನು ವರ್ಣಿಸಲು ಸುಲಭವಾಗಿ ಸಾಧ್ಯವಾಗುತ್ತದೆ.

**5 ಅ**. ಇಲ್ಲಿಂದ ಮುಂದೆ 5 ಪದ್ಯಗಳಿಗೆ ಒಟ್ಟಿಗೆ ಅನ್ವಯ ಮಾಡಿ ಅರ್ಥ ಹೇಳಬೇಕು. ಐದಕ್ಕಿಂತ ಹೆಚ್ಚು ಪದ್ಯಗಳಿಗೆ ಏಕಕ್ರಿಯಾನ್ವಯವಿದ್ದರೆ ಕುಲಕವೆಂದು ಹೆಸರು. ಸಃ ಅಹಂ=ಅಂತಹ ನಾನು, ಆಜನ್ಮಶುದ್ಧಾನಾಂ=ಹುಟ್ಟಿದ ಮೊದಲ್ಗೊಂಡು ಶುದ್ಧರಾದ, ಆಫಲೋದಯ=ಫಲವಾಗುವವರೆಗೆ,ಕರ್ಮಣಾಂ=ಕೆಲಸವುಳ್ಳ, ಆಸಮುದ್ರ=ಸಮುದ್ರಗಳತನಕ, ಕ್ಷಿತಿ=ಭೂಮಿಗಳಿಗೆ, ಈಶಾನಾಂ=ಒಡೆಯರಾದ, ಆನಾಕರಥವರ್ತ್ಮನಾಂ=ಸ್ವರ್ಗಲೋಕದವರೆಗೆ ರಥದ ದಾರಿಯುಳ್ಳ, ರಘೂಣಾಂ=ರಘುವಂಶದ ರಾಜರ=ಅನ್ವಯಂ ವಂಶವನ್ನು, ವಕ್ಷ್ಯೇ ಹೇಳುವೆನು.

**ತಾ**. ಹಿಂದೆ ಹೇಳಿದಂತೆ ಇರುವ ನಾನು ರಘುವಂಶದ ರಾಜರ ವಂಶವನ್ನು ಹೇಳುವೆನು. ಆ ರಘುವಂಶದ ರಾಜರು ಹುಟ್ಟಿದ ಮೊದಲ್ಗೊಂಡು ನಿಷೇಕಾದಿ ಸಂಸ್ಕಾರಗಳಿಂದ ಶುದ್ಧ ರಾದವರು. ಪ್ರಯೋಜನವೂ ಸಿಕ್ಕುವವರೆಗೆ ಕೆಲಸವನ್ನು ಮಾಡತಕ್ಕವರು. ಎಲ್ಲ ಸಮುದ್ರಗಳ ಎಲ್ಲೆಯ ಒಳಗಿರುವ ಭೂಮಿಗಳಿಗೆ ಒಡೆಯರಾಗಿ ಸಾರ್ವಭೌಮರಾಗಿರುವವರು. ದೇವತೆಗಳಿಗೆ ಸಹಾಯ ಮಾಡಲು ದೇವಲೋಕದ ವರೆಗೆ ರಥದಿಂದ ಹೋಗತಕ್ಕವರು.

**6. ಅ**. ಯಥಾವಿಧಿ=ಶಾಸ್ತ್ರರೀತಿಯಿಂದ, ಹುತ=ಹೋಮಮಾಡಲ್ಪಟ್ಟ, ಅಗ್ನೀನಾಂ=ಅಗ್ನಿಗಳುಳ್ಳ, ಯಥಾಕಾಮ=ಇಷ್ಟಾರ್ಥವನ್ನನುಸರಿಸಿ,ಅರ್ಚಿತ=ಪೂಜಿಸಲ್ಪಟ್ಟ, ಅರ್ಥಿನಾಂ=ಬೇಡುವವರುಳ್ಳ, ಯಥಾಪರಾಧ=ತಪ್ಪಿಗೆ ತಕ್ಕಂತೆ, ದಂಡಾನಾಂ= ಶಿಕ್ಷೆಯುಳ್ಳ, ಯಥಾಕಾಲ=ಕಾಲವನ್ನನುಸರಿಸಿ, ಪ್ರಬೋಧಿನಾಂ=ಎಚ್ಚರಗೊಳ್ಳುವ.

**ತಾ**. ಅವರು ಶಾಸ್ತ್ರವಿಧಿಯನ್ನನುಸರಿಸಿ ಹೋಮ ಮಾಡತಕ್ಕವರು. ಬೇಡುವವರು ಅಪೇಕ್ಷಿಸಿದಷ್ಟು ಕೊಟ್ಟು  ಅವರನ್ನು ಪೂಜಿಸತಕ್ಕವರು ತಪ್ಪು ಮಾಡಿದವರಿಗೆ ಪಕ್ಷಪಾತವಿಲ್ಲದೆ ತಪ್ಪಿಗೆ ತಕ್ಕಂತೆ ಶಿಕ್ಷೆಯನ್ನು ಮಾಡುವವರು. ಸಕಾಲದಲ್ಲಿ ಎಚ್ಚರಗೊಳ್ಳುವವರು. ಎಂದರೆ ದೇವಪೂಜೆ, ಅರ್ಥಿ ಸನ್ಮಾನ, ಶಿಕ್ಷೆ, ಪ್ರಜೆಗಳ ರಕ್ಷಣೆ ಇವುಗಳಲ್ಲಿ ಜಾಗರೂಕರಾಗಿರುವವರು.

**7 ಅ**. ತ್ಯಾಗಾಯ=ದಾನಮಾಡುವುದಕ್ಕಾಗಿ, ಸಂಭೃತ=ಸಂಗ್ರಹಿಸಲ್ಪಟ್ಟ, ಅರ್ಥಾನಾಂ= ದ್ರವ್ಯವುಳ್ಳ, ಸತ್ಯಾಯ=ಸತ್ಯಕ್ಕಾಗಿ, ಮಿತಭಾಷಿಣಾಂ=ಮಿತವಾಗಿ ಮಾತನಾಡುವ, ಯಶಸೇ=ಕೀರ್ತಿಗಾಗಿ, ವಿಜಿಗೀಷೂಣಾಂ=ಜಯಿಸಲಪೇಕ್ಷಿಸುವ, ಪ್ರಜಾಯೈ=ಸಂತತಿಗಾಗಿ, ಗೃಹಮೇಧಿನಾಂ=ಪತ್ನಿಯ ಸಹವಾಸಮಾಡುವ.

**ತಾ** ಅವರು ದುರ್ವ್ಯಾಪಾರ ಮಾಡಲು ಅಪೇಕ್ಷಿಸದೆ ಸತ್ಪಾತ್ರದಲ್ಲಿ ದಾನ ಮಾಡುವುದಕ್ಕಾಗಿಯೇ ಹಣವನ್ನು ಕೂಡಿಡುತ್ತಿದ್ದರು. ಸತ್ಯವನ್ನು ಕಾಪಾಡುವುದಕ್ಕಾಗಿಯೇ ಮಿತವಾಗಿ ಮಾತನಾಡುತ್ತಿದ್ದರು. ಕೀರ್ತಿಗಾಗಿ ದಿಗ್ವಿಜಯ ಮಾಡುತ್ತಿದ್ದರು. ಹಣವನ್ನು ಸಂಪಾದಿಸುವುದಕ್ಕಾಗಿ ಅಲ್ಲ. ಸಂತತಿ ವಿಚ್ಛೇದವಾಗದಿರುವುದಕ್ಕಾಗಿಯೇ ಪತ್ನಿಯರೊಡನೆ ಸೇರುತ್ತಿದ್ದರು. ಎಂದರೆ ಅವರು ಪರೋಪಕಾರಿಗಳು ಸತ್ಯಸಂಧರೂ, ಕೀರ್ತಿ ಕಾಮಿಗಳೂ, ಶುದ್ಧರೂ ಆಗಿದ್ದರು.

**8**. **ಅ**. ಶೈಶವೇ=ಬಾಲ್ಯದಲ್ಲಿ, ಅಭ್ಯಸ್ತ=ಕಲಿಯಲ್ಪಟ್ಟ, ವಿದ್ಯಾನಾಂ=ವಿದ್ಯೆಯುಳ್ಳ, ಯೌವನೇ= ತಾರುಣ್ಯದಲ್ಲಿ, ವಿಷಯೈಷಿಣಾಂ=ವಿಷಯ ಭೋಗಗಳನ್ನು ಅಪೇಕ್ಷಿಸುವ, ವಾರ್ಧಕೇ= ಮುಪ್ಪಿನಲ್ಲಿ, ಮುನಿವೃತ್ತೀನಾಂ=ಋಷಿಗಳ ಜೀವನವುಳ್ಳ (ನಡತೆಯುಳ್ಳ), ಅಂತೇ=ಅವಸಾನಕಾಲದಲ್ಲಿ, ಯೋಗೇನ=ಪರಮಾತ್ಮನಧ್ಯಾನದಿಂದ, ತನುತ್ಯಜಾಂ=ದೇಹವನ್ನು ಬಿಡುವ.

**ತಾ**. ಅವರು ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಬ್ರಹ್ಮಚಾರಿಗಳಾಗಿದ್ದರು. ಯೌವನದಲ್ಲಿ ಮದುವೆ ಮಾಡಿಕೊಂಡು ವಿಷಯಭೋಗಗಳನ್ನು ಅಪೇಕ್ಷಿಸುತ್ತಿದ್ದರು ಎಂದರೆ ಗೃಹಸ್ಥರಾಗಿದ್ದರು. ಮುಪ್ಪಿನಲ್ಲಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಮುನಿಗಳಂತೆ ಕಾಡಿನಲ್ಲಿ ಗಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದರು. ಅವಸಾನಕಾಲದಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಭಗವಂತನನ್ನು ಧ್ಯಾನಿಸುತ್ತಾ ದೇಹವನ್ನು ಬಿಡುತ್ತಿದ್ದರು.

**9**. **ಅ**. ಆ ನಾನು ತನು=ಸ್ವಲ್ಪ, ವಾಗ್ವಿಭವಃ ಸನ್ ಅಪಿ=ಮಾತಿನ ಸಾಮರ್ಥ್ಯವುಳ್ಳವನಾದರೂ, ತದ್ಗುಣೈಃ=ಆ ರಘುವಂಶದ ರಾಜರ ಗುಣಗಳಿಂದ, ಕರ್ಣಂ=ಕಿವಿಯನ್ನು, ಆಗತ್ಯ=ಬಂದು, ಚಾಪಲಾಯ=ಚಪಲಕಾರ್ಯವನ್ನೆಸಗುವುದಕ್ಕಾಗಿ, ಪ್ರಚೋದಿತಃ=ಪ್ರೇರೇಪಿಸಲ್ಪಟ್ಟವನಾಗಿ, ರಘೂಣಾಂ=ರಘುವಂಶದ ರಾಜರ, ಅನ್ವಯಂ=ವಂಶವನ್ನು, ವಕ್ಷ್ಯೇ=ಹೇಳುವೆನು.

**ತಾ**. ನನಗೆ ಹೆಚ್ಚಾಗಿ ಹೇಳಲು ಶಕ್ತಿ ಇಲ್ಲ ಆದರೂ ಆ ರಘುವಂಶದ ರಾಜರ ಗುಣಗಳನ್ನು ಕೇಳಿರುವುದರಿಂದ ಹೇಳಲು ಚಪಲತೆಯುಂಟಾಗಿದೆ ಅದರಿಂದ ರಘುವಂಶ ರಾಜರ ವಂಶವನ್ನು ವರ್ಣಿಸುವವೆನು.

**10**. **ಅ**, ತಂ=ಆ ರಘುವಂಶವೆಂಬ ಕಾವ್ಯವನ್ನು, ಸದಸತ್=ಒಳ್ಳೆಯದು ಮತ್ತು ಕೆಟ್ಟುದರ, ವ್ಯಕ್ತಿ ವಿವೇಚನೆಗೆ, ಹೇತವಃ=ಕಾರಣರಾದ, ಸಂತಃ=ಸಜ್ಜನರು, ಶ್ರೋತುಂ=ಕೇಳುವುದಕ್ಕೆ, ಅರ್ಹಂತಿ=ಯೋಗ್ಯರಾಗುತ್ತಾರೆ, ಹಿ=ಯಾವ ಕಾರಣದಿಂದ, ಹೇಮ್ನಃ=ಚಿನ್ನದ, ವಿಶುದ್ಧಿಃ=ಶುದ್ಧಿಯು, ವಾ=ಅಥವಾ, ಶ್ಯಾಮಿಕಾ ಅಪಿ=ದೋಷವೂ, ಅಗ್ನೌ=ಬೆಂಕಿಯಲ್ಲಿ, ಸಂಲಕ್ಷ್ಯತೇ=ಕಾಣಲ್ಪಡುತ್ತದೋ.

**ತಾ**. ಚಿನ್ನವು ಒಳ್ಳೆದು ಕೆಟ್ಟದೋ ಎಂಬುದು ಬೆಂಕಿಯಲ್ಲಿ ಅದನ್ನು ಕಾಯಿಸಿದಾಗ ತಿಳಿಯುವುದು ಎಂದರೆ ಬೆಂಕಿಯು ಚಿನ್ನದ ಸತ್ವವನ್ನು ತಿಳಿಸುವುದು ಹಾಗೆಯೇ ಕಾವ್ಯವು ಸತ್ಕಾವ್ಯವೋ ಅಸತ್ಕಾವ್ಯವೋ ಎಂದು ವಿವೇಚನೆ ಮಾಡಲು ಸಜ್ಜನರೇ ಶಕ್ತರು. ಆದ್ದರಿಂದ ಆ ರಘುವಂಶ ಕಾವ್ಯವನ್ನು ಅವರೇ ಕೇಳಲು ಅರ್ಹರಾಗುತ್ತಾರೆ.

**11**. **ಅ**. ಮನೀಷಿಣಾಂ=ವಿದ್ವಾಂಸರಿಗೆ, ಮಾನನೀಯಃ=ಪೂಜ್ಯನಾದ, ಛಂದಸಾಂ=ವೇದಗಳಿಗೆ, ಪ್ರಣವಃ ಇವ=ಓಂಕಾರದಂತೆ, ಮಹೀಕ್ಷಿತಾಂ=ರಾಜರಿಗೆ, ಆದ್ಯಃ=ಮೊದಲನೆಯವನಾದ, ವೈವಸ್ವತಃ ನಾಮ=ಸೂರ್ಯನ ಮಗನಾದ್ದರಿಂದ ವೈವಸ್ವತನೆಂದು ಪ್ರಸಿದ್ಧನಾದ, ಮನುಃ=ಮನುವು, ಆಸೀತ್=ಇದ್ದನು.

**ತಾ**. ವೇದಗಳನ್ನು ಉಚ್ಚರಿಸುವುದಕ್ಕಿಂತ ಮುಂಚೆ ‘ಓಂ’ ಎಂದು ಓಂಕಾರವನ್ನು ಹೇಳಬೇಕು. ಆದ್ದರಿಂದ ಆ ಓಂಕಾರವು ವೇದಗಳಿಗೆ ಮೊದಲನೆಯದಾದಂತೆ ರಾಜರಲ್ಲಿ ಮೊದಲನೆಯವನಾದ ಸೂರ್ಯನ ಮಗ ವೈವಸ್ವತನೆಂಬ ಮನುವು ಇದ್ದನು ಅವನು ವಿದ್ವಾಂಸರಿಗೆ ಪೂಜ್ಯನಾಗಿದ್ದನು.

**12**. **ಅ**. ಶುದ್ಧಿಮತಿ=ಪವಿತ್ರವಾದ, ತದನ್ವಯೇ=ಆ ಮನುವಿನ ವಂಶದಲ್ಲಿ, ಶುದ್ಧಿಮತ್ತರಃ=ಅತ್ಯಂತ ಶುದ್ಧನಾದ, ದಿಲೀಪಃ ಇತಿ=ದಿಲೀಪನೆಂಬ, ರಾಜೇಂದುಃ=ರಾಜಶ್ರೇಷ್ಠನು, ಕ್ಷೀರನಿಧೌ=ಕ್ಷೀರಸಮುದ್ರದಲ್ಲಿ, ಇಂದುಃ ಇವ=ಚಂದ್ರನಂತೆ, ಪ್ರಸೂತಃ=ಹುಟ್ಟಿದನು.

**ತಾ** ಆ ವೈವಸ್ವತ ಮನುವಿನ ವಂಶವು ಶುದ್ಧವಾದುದು. ಅದರಲ್ಲಿ ಅತ್ಯಂತ ಶುದ್ಧನಾದ ದಿಲೀಪನೆಂಬ ಶ್ರೇಷ್ಠ ದೊರೆಯು ಜನಿಸಿದನು. ಅದು ಕ್ಷೀರಸಮುದ್ರದಲ್ಲಿ ಚಂದ್ರನು ಹುಟ್ಟಿದಂತಾಯಿತು.

**13**. **ಅ**. ವ್ಯೂಢ=ಅಗಲವಾದ, ಉರಸ್ಕ:=ಎದೆಯುಳ್ಳ, ವೃಷಸ್ಕಂಧಃ=ಎತ್ತಿನ ಹೆಗಲಿನಂತೆ ಹೆಗಲುಳ್ಳ, ಶಾಲ=ಶಾಲ (ತೇಗ)ವೆಂಬ ಮರದಂತೆ, ಪ್ರಾಂಶುಃ=ಎತ್ತರವಾಗಿರುವ, ಮಹಾಭುಜಃ=ಉದ್ದವಾದ ತೋಳುಳ್ಳ, ಆತ್ಮನಃ=ತನ್ನ, ಕರ್ಮ=ಕೆಲಸಕ್ಕೆ,

ಕ್ಷಮಂ=ಅನುಕೂಲವಾದ, ದೇಹಂ=ಶರೀರವನ್ನು, ಆಶ್ರಿತಃ=ಆಶ್ರಯಿಸಿದ, ಕ್ಷಾತ್ರಃ=ಧರ್ಮ ಇವ= ಕ್ಷತ್ರಿಯಧರ್ಮದಂತಿರುವ.

**ತಾ**. ಆ ದಿಲೀಪನ ಎದೆಯು ಅಗಲವಾಗಿದ್ದಿತು. ಹೆಗಲು ಎತ್ತಿನ ಹೆಗಲಿನಂತಿದ್ದಿತು. ಅವನು ಶಾಲವೆಂಬ ಮರದಂತೆ ಎತ್ತರವಾಗಿದ್ದನು. ತೋಳು ಉದ್ದವಾಗಿದ್ದಿತು. ಹೀಗಿರುವ ಅವನು ಕ್ಷತ್ರಿಯ ಧರ್ಮವು ತನ್ನ ಕೆಲಸವನ್ನು ಸಾಧಿಸಲು ಅನುಕೂಲವಾದ ಶರೀರವನ್ನು ತಳೆದುಬಂದಿದೆಯೋ ಎಂಬಂತಿದ್ದನು.

**14**. **ಅ** ಸರ್ವ=ಎಲ್ಲಕ್ಕಿಂತ, ಅತಿರಿಕ್ತ=ಹೆಚ್ಚಾದ, ಸಾರೇಣ=ಬಲವುಳ್ಳ, ಸರ್ವ=ಎಲ್ಲವನ್ನೂ, ತೇಜಃ=ತೇಜಸ್ಸಿನಿಂದ, ಅಭಿಭಾವಿನಾ=ತಿರಸ್ಕರಿಸುವ, ಸರ್ವ=ಎಲ್ಲಕ್ಕಿಂತ, ಉನ್ನತೇನ= ಎತ್ತರವಾದ, ಆತ್ಮನಾ=ದೇಹದಿಂದ, ಮೇರುಃ ಇವ=ಮೇರು ಪರ್ವತದಂತೆ, ಉರ್ವೀಂ= ಭೂಮಿಯನ್ನು, ಕ್ರಾಂತ್ವಾ=ಆಕ್ರಮಿಸಿ, ಸ್ಥಿತಃ=ಇರುವ.

**ತಾ**. ಅವನ ಶರೀರವು ಎಲ್ಲಕ್ಕಿಂತ ಹೆಚ್ಚಾದ ಬಲವುಳ್ಳದ್ದಾಗಿದ್ದಿತು. ತೇಜಸ್ಸಿನಿಂದ ಎಲ್ಲವನ್ನೂ ತಿರಸ್ಕರಿಸುತ್ತಿದ್ದಿತು. ಎಲ್ಲಕ್ಕಿಂತ ಎತ್ತರವಾಗಿದ್ದಿತು. ಇಂತಹ ದೇಹದಿಂದ ಅವನು ಮೇರು ಪರ್ವತದಂತೆ ಭೂಮಿಯನ್ನು ವ್ಯಾಪಿಸಿದ್ದನು.

**15**. **ಅ** ಆಕಾರ=(ದೇಹದ) ಆಕೃತಿಗೆ, ಸದೃಶ=ಸಮಾನವಾದ, ಪ್ರಜ್ಞಃ=ಬುದ್ಧಿಯುಳ್ಳ, ಪ್ರಜ್ಞಯಾ=ಬುದ್ಧಿಯಿಂದ, ಸದೃಶ=ಸಮಾನವಾದ, ಆಗಮಃ=ಶಾಸ್ತ್ರವುಳ್ಳ, ಆಗಮೈಃ=ಶಾಸ್ತ್ರಗಳಿಂದ, ಸದೃಶ=ಸಮಾನವಾದ, ಆರಂಭಃ=ಕೆಲಸವುಳ್ಳ, ಆರಂಭ=ಕೆಲಸಗಳಿಗೆ, ಸದೃಶ=ಸಮಾನವಾದ, ಉದಯಃ=ಫಲದ ಸಿದ್ಧಿಯುಳ್ಳ.

**ತಾ**. ದಿಲೀಪನು ತನ್ನ ದೇಹಕ್ಕೆ ಸರಿಯಾದ ಬುದ್ಧಿಯುಳ್ಳವನು ಆಗಿದ್ದನು. ಬುದ್ಧಿಗೆ ತಕ್ಕ ಶಾಸ್ತ್ರಗಳನ್ನು ಓದಿದ್ದನು. ಶಾಸ್ತ್ರಜ್ಞಾನಕ್ಕೆ ಸರಿಯಾದ ಕೆಲಸವನ್ನು ಮಾಡುತ್ತಿದ್ದನು. ಕೆಲಸಕ್ಕೆ ಸರಿಯಾದ ಫಲವನ್ನೂ ಪಡೆಯುತ್ತಿದ್ದನು.

**16** **ಅ**. ಸಃ=ಆ ದಿಲೀಪನು, ಭೀಮಕಾಂತೈಃ=ಭಯಂಕರವೂ,ಮನೋಹರವೂ ಆದ, ನೃಪಗುಣೈಃ=ರಾಜನ ಗುಣಗಳಿಂದ, ಯಾದಃ=ನೀರಿನ ಪ್ರಾಣಿಗಳು, ರತ್ನೈಃ=ರತ್ನಗಳು ಇವುಗಳಿಂದ, ಅರ್ಣವಃ ಇವ=ಸಮುದ್ರದಂತೆ, ಉಪಜೀವಿನಾಂ=ಆಶ್ರಯಿಸಿದವರಿಗೆ,

ಅಧೃಷ್ಯಶ್ಚ=ತಿರಸ್ಕರಿಸಲಶಕ್ಯನೂ, ಅಭಿಗಮ್ಯಃ ಚ=ಆಶ್ರಯಿಸಲು ಯೋಗ್ಯನೂ, ಬಭೂವ=ಆದನು,

**ತಾ** : ಸಮುದ್ರವು ಮೊಸಳೆ ಮೊದಲಾದ ನೀರಿನ ಪ್ರಾಣಿಗಳಿರುವುದರಿಂದ ಇಳಿಯಲಶಕ್ಯವಾಗಿರುವುದು, ರತ್ನಗಳಿರುವುದರಿಂದ ಪ್ರವೇಶಿಸಲು ಯೋಗ್ಯವಾಗಿರುವುದು. ಹಾಗೆಯೇ ಆ ದಿಲೀಪನು ತೇಜಸ್ಸು ಪ್ರತಾಪ ಮೊದಲಾದ ಗುಣವುಳ್ಳವನಾಗಿರುವುದರಿಂದ ಆಶ್ರಯಿಸಿದವರಿಗೆ ತಿರಸ್ಕಾರಮಾಡಲಶಕ್ಯನೂ, ದಾಕ್ಷಿಣ್ಯಾದಿ ಗುಣವುಳ್ಳವನಾಗಿರುವುದರಿಂದ ಆಶ್ರಯಿಸಲು ಯೋಗ್ಯನೂ ಆಗಿದ್ದನು.

**17 ಅ**. ನಿಯಂತುಃ=ಶಾಸಕನಾದ, ಮತ್ತು ಸಾರಥಿಯಾದ, ತಸ್ಯ=ಆ ದಿಲೀಪನ, ನೇಮಿವೃತ್ತಯಃ=ಚಕ್ರದ ತುದಿಯ ನಡೆಯಂತೆ ನಡೆಯುಳ್ಳ, ಪ್ರಜಾಃ=ಪ್ರಜೆಗಳು, ಆಮನೋಃ=ಮನುವನ್ನು ಮೊದಲ್ಗೊಂಡು, ಕ್ಷುಣ್ಣಾತ್=ಅಭ್ಯಾಸಮಾಡಲ್ಪಟ್ಟ ಮತ್ತು ತಿಳಿಯಲ್ಪಟ್ಟ, ವರ್ತ್ಮನಃ=ಆಚಾರಮಾರ್ಗಕ್ಕಿಂತ ಮತ್ತು ದಾರಿಗಿಂತ ಪರಂ=ಹೆಚ್ಚಾಗಿ, ರೇಖಾಮಾತ್ರಂ ಅಪಿ=ಒಂದುಗೆರೆಯಷ್ಟೂ, ನ ವ್ಯತೀಯಃ=ಮೀರಲಿಲ್ಲ.

**ತಾ**. ಸಮರ್ಥನಾದ ಸಾರಥಿಯು ಗಾಡಿಯನ್ನು ನಡೆಯಿಸುವಾಗ ಗಾಡಿಯ ಚಕ್ರಗಳ ತುದಿಗಳು ಮೊದಲು ಸಾಗಿದ ದಾರಿಗಿಂತ ಸ್ವಲ್ಪವೂ ಮೀರಿ ಹೋಗುವುದಿಲ್ಲ. ಅದರಂತೆ ದೊರೆಯಾದ ಆ ದಿಲೀಪನ ರಾಜ್ಯದ ಪ್ರಜೆಗಳು ತಾವು ಮನುವನ್ನು ಮೊದಲ್ಗೊಂಡು ಅಭ್ಯಾಸಮಾಡಿದ ಸಂಪ್ರದಾಯವನ್ನು ಸ್ವಲ್ಪವೂ ಮೀರಿ ನಡೆಯಲಿಲ್ಲ.

**18**. **ಅ**. ಸಃ=ಆ ದಿಲೀಪನು, ಪ್ರಜಾನಾಂ=ಪ್ರಜೆಗಳ, ಭೂತ್ಯರ್ಥಂ ಏವ=ಏಳಿಗೆಗಾಗಿಯೇ, ತಾಭ್ಯ:=ಆ ಪ್ರಜೆಗಳಿಂದ, ಬಲಿಂ=ಕಂದಾಯವನ್ನು, ಅಗ್ರಹೀತ್=ತೆಗೆದುಕೊಂಡನು. ಹಿ=ಯಾವ ಕಾರಣದಿಂದ, ರವಿಃ=ಸೂರ್ಯನು, ಸಹಸ್ರಗುಣಂ=ಸಾವಿರಮಡಿಯಾಗಿ, ಉತ್ಸ್ರಷ್ಟುಂ= ಕೊಡುವುದಕ್ಕಾಗಿ, ರಸಂ=ನೀರನ್ನು, ಆದತ್ತೇ= ತೆಗೆದುಕೊಳ್ಳುವನೊ,

**ತಾ**. ತಾ . ಸೂರ್ಯನು ಜನರ ಏಳಿಗೆಗಾಗಿ ಸಾವಿರ ಮಡಿಯಾಗಿ ಮಳೆಯನ್ನು ಸುರಿಸಲೋಸುಗ ಸಮುದ್ರ ಕೆರೆ ಮೊದಲಾದವುಗಳ ನೀರನ್ನು ಆವಿಯ ಮೂಲಕ

ತೆಗೆದುಕೊಳ್ಳುವನು. ಹಾಗೆಯೇ ಆ ದಿಲೀಪನು ಪ್ರಜೆಗಳ ಏಳಿಗೆಗಾಗಿಯೇ ಅವರಿಂದ ಕಂದಾಯವನ್ನು ತೆಗೆದುಕೊಂಡನು.

**19**. **ಅ** ತಸ್ಯ=ಆ ದಿಲೀಪನಿಗೆ, ಸೇನಾ=ಸೇನೆಯು, ಪರಿಚ್ಛದಃ=ಉಪಕರಣವಾಯಿತು. ಶಾಸ್ತ್ರೇಷು=ಶಾಸ್ತ್ರಗಳಲ್ಲಿ, ಅಕುಂಠಿತಾ=ತಡೆಯಿಲ್ಲದ, ಬುದ್ಧಿಃ=ಬುದ್ಧಿಯು, ಚ=ಮತ್ತು, ಧನುಷಿ= ಬಿಲ್ಲಿನಲ್ಲಿ, ಆತತಾ=ಏರಿಸಲ್ಪಟ್ಟ, ಮೌರ್ವೀ=ನಾಣು, ದ್ವಯಂ ಏವ= ಇವೆರಡೇ,

**ತಾ**. ದಿಲೀಪನಿಗೆ ಚತುರಂಗ ಬಲವು ಛತ್ರ–ಚಾಮರಾದಿಗಳಂತೆ ಕೇವಲ ರಾಜಮರ್ಯಾದೆ ಆಗಿದ್ದಿತು. ಶಾಸ್ತ್ರದಲ್ಲಿ ನಿರರ್ಗಳವಾದ ಜ್ಞಾನವೂ, ಬಿಲ್ಲಿಗೆ ಏರಿಸಿದ ನಾಣೂ ಅವನ ಪ್ರಯೋಜನಗಳನ್ನು ಸಾಧಿಸತಕ್ಕವಾಗಿದ್ದವು. ಎಂದರೆ ಅವನು ರಾಜನೀತಿಯಂತೆ ಯುದ್ಧವನ್ನು ಮಾಡಿ ಪ್ರಯೋಜನಗಳನ್ನು ಪಡೆಯುತ್ತಿದ್ದನು.

**20**. **ಅ**. ಸಂವೃತಮಂತ್ರಸ್ಯ= ಗುಟ್ಟಾಗಿಡಲ್ಪಟ್ಟ ವಿಚಾರವುಳ್ಳ, ಚ=ಮತ್ತು, ಗೂಢ=ಗುಟ್ಟಾದ, ಆಕಾರ=ಆಕೃತಿ, ಇಂಗಿತಸ್ಯ=ಮನಸ್ಸಿನ ಅಭಿಪ್ರಾಯ ಇವುಗಳುಳ್ಳ, ತಸ್ಯ=ಆ ದಿಲೀಪನ, ಪ್ರಾರಂಭಾಃ=ಸಾಮ, ದಾನ ಮೊದಲಾದ ಉಪಾಯ ಪ್ರಯೋಗಗಳು, ಪ್ರಾಕ್ತನಾಃ=ಪೂರ್ವ ಜನ್ಮದ, ಸಂಸ್ಕಾರಾಃ ಇವ=ಸಂಸ್ಕಾರಗಳಂತೆ, ಫಲಾನುಮೇಯಾಃ=ಪ್ರಯೋಜನಗಳಿಂದ ಊಹಿಸಲು ಯೋಗ್ಯಗಳಾದುವು,

**ತಾ:** ಮನುಷ್ಯನಿಗೆ ಉಂಟಾದ ಫಲಾಫಲಗಳಿಂದ ಅವನ ಹಿಂದಿನ ಜನ್ಮದ ಸಂಸ್ಕಾರಗಳು ಊಹಿಸಲ್ಪಡುವುವು. ಅದರಂತೆ ಗುಟ್ಟಾದ ವಿಚಾರವುಳ್ಳ ಮತ್ತು ಗುಟ್ಟಾದ ದೇಹದ ಆಕೃತಿ, ಮನಸ್ಸಿನ ಅಭಿಪ್ರಾಯ ಇವುಗಳುಳ್ಳ ಆ ದಿಲೀಪನು ಮಾಡಿದ ಕಾರ್ಯಗಳು ಉಂಟಾದ ಫಲಗಳಿಂದ ತಿಳಿಯಬಹುದಾಗಿದ್ದವು.

**21**. **ಅ**. ಸಃ=ಆ ದಿಲೀಪನು, ಅತ್ರಸ್ತ:=ಭಯಗೊಳ್ಳದವನಾಗಿ, ಆತ್ಮಾನಂ=ಶರೀರವನ್ನು, ಜುಗೋಪ=ಕಾಪಾಡಿಕೊಂಡನು, ಅನಾತುರ:=ಕಾಯಿಲೆಯಿಲ್ಲದವನಾಗಿ, ಧರ್ಮಂ=ಧರ್ಮವನ್ನು, ಭಜೇ=ಸೇವಿಸಿದನು. ಅಗೃಧ್ನುಃ=ಅತ್ಯಾಶೆಯಿಲ್ಲದವನಾಗಿ, ಅರ್ಥಂ=ಹಣವನ್ನು, ಅದದೇ=ತೆಗೆದುಕೊಂಡನು. ಅಸಕ್ತಃ=ಆಸಕ್ತಿಯಿಲ್ಲದವನಾಗಿ, ಸುಖಂ=ಸೌಖ್ಯವನ್ನು, ಅನ್ವಭೂತ್=ಅನುಭವಿಸಿದನು.

**ತಾ**. ಆ ದಿಲೀಪ ಯಾವ ಭಯವೂ ಇಲ್ಲದವನಾಗಿ ಧರ್ಮಾರ್ಥ ಕಾಮಗಳಿಗೆ ಸಾಧನವಾದ ಶರೀರವನ್ನು ಕಾಪಾಡಿಕೊಂಡನು. ಕಾಯಿಲೆ ಇಲ್ಲದವನಾಗಿ ಧರ್ಮವನ್ನು ಆಚರಿಸಿದನು. ಅತ್ಯಾಶೆ ಪಡದೆ ಹಣವನ್ನು ತೆಗೆದುಕೊಂಡನು. ಆಸಕ್ತಿ ಇಲ್ಲದವನಾಗಿ ಸುಖವನ್ನು ಅನುಭವಿಸಿದನು.

**22**. **ಅ**. ಜ್ಞಾನೇ=ಜ್ಞಾನವಿದ್ದರೂ, ಮೌನಂ=ಮಾತನಾಡದಿರುವಿಕೆಯು, ಶಕ್ತೌ=ಶಕ್ತಿಯಲ್ಲಿಯೂ, ಶ್ಲಾಘಾವಿಪರ್ಯಯಃ=ಹೊಗಳಿಕೊಳ್ಳದಿರುವಿಕೆಯು, ತಸ್ಯ=ಆ ದಿಲೀಪನ, ಗುಣಾಃ=ಜ್ಞಾನ–ಮೊದಲಾದ ಗುಣಗಳು, ಗುಣಾನುಬಂಧಿತ್ವಾತ್=ವಿರುದ್ಧವಾದ ಮೌನ ಮೊದಲಾದ ಗುಣಗಳ ಸಂಬಂಧವುಳ್ಳವುಗಳಾದ್ದರಿಂದ, ಸಪ್ರಸವಾಃ ಇವ=ಸಹೋದರರಂತೆ ಇದ್ದವು.

**ತಾ** : ಆ ದಿಲೀಪನು ಇನ್ನೊಬ್ಬರ ಸಮಾಚಾರವನ್ನು ತಿಳಿದವನಾದರೂ ಮಾತಾಡದೆ ಮೌನವಾಗಿದ್ದನು, ಪ್ರತೀಕಾರಮಾಡುವ ಸಾಮರ್ಥ್ಯವುಳ್ಳವನಾಗಿದ್ದರೂ ಸಹನೆಯಿಂದ ಇರುತ್ತಿದ್ದನು. ದಾನಮಾಡಿ ಹೊಗಳಿಕೊಳ್ಳುತ್ತಿರಲಿಲ್ಲ. ಇದರಿಂದ ಅವನ ಗುಣಗಳು ಒಂದಕ್ಕೊಂದು ವಿರುದ್ಧವಾಗಿದ್ದರೂ ವಿರೋಧವಿಲ್ಲದೆ ಸಹೋದರರಂತೆ ಅವನಲ್ಲಿ ನೆಲೆಸಿದ್ದವು.

**23**. **ಅ**. ವಿಷಯೈಃ=ಶಬ್ದ ರೂಪ ಮೊದಲಾದ ವಿಷಯಗಳಿಂದ, ಅನಾಕೃಷ್ಟಸ್ಯ=ಸೆಳೆಯಲ್ಪಡದ, ವಿದ್ಯಾನಾಂ=ವೇದಾದಿ ವಿದ್ಯೆಗಳ, ಪಾರದೃಶ್ವನಃ=ಕೊನೆಯನ್ನು ನೋಡಿದ, ಧರ್ಮರತೇಃ=ಧರ್ಮದಲ್ಲಿ ಪ್ರೀತಿಯುಳ್ಳ, ತಸ್ಯ=ಆ ದಿಲೀಪನಿಗೆ, 'ಜರಸಾ ವಿನಾ=ಮುದಿತನವಿಲ್ಲದೆ, ವೃದ್ಧತ್ವಂ= ಮುದಿತನವು. ಆಸೀತ್=ಆಯಿತು.

**ತಾ:** ಆ ದಿಲೀಪನು ಶಬ್ದಾದಿವಿಷಯಗಳಲ್ಲಿ ಅತ್ಯಾಸಕ್ತನಾಗಲಿಲ್ಲ, ವೇದವೇದಾಂಗ ಮೊದಲಾದ ವಿದ್ಯೆಗಳನ್ನು ಪೂರ್ತಿಯಾಗಿ ಅಧ್ಯಯನಮಾಡಿ ತಿಳಿದುಕೊಂಡಿದ್ದನು. ಧರ್ಮಮಾಡುವುದರಲ್ಲಿ ಆಸಕ್ತನಾಗಿದ್ದನು, ಆದ್ದರಿಂದ ಅವನು ವಯಸ್ಸಾಗಿ ಮುದುಕನಾಗದಿದ್ದರೂ ಜ್ಞಾನದಿಂದ ಮುದುಕನಾಗಿದ್ದನು, ಎಂದರೆ ಅತ್ಯಂತ ಜ್ಞಾನಿಯಾಗಿದ್ದನು.

**24**. **ಅ**.ಪ್ರಜಾನಾಂ=ಪ್ರಜೆಗಳಿಗೆ, ವಿನಯ=ಶಿಕ್ಷಣವನ್ನು ಆಧಾನಾತ್=ಉಂಟು ಮಾಡುವುದರಿಂದ, ರಕ್ಷಣಾತ್=ಆಪತ್ತಿನಿಂದ ಕಾಪಾಡುವುದರಿಂದ, ಆಥ=ಮತ್ತು, ಭರಣಾತ್= ಪೋಷಣೆ ಮಾಡುವುದರಿಂದ, ಸಃ=ಆ ದಿಲೀಪನು, ಪಿತಾ=ತಂದೆಯು, ಅಭೂತ್=ಆದನು, ತಾಸಾಂ=ಆ ಪ್ರಜೆಗಳ, ಪಿತರಂ=ತಂದೆಯರು. ಕೇವಲಂ=ಮುಖ್ಯವಾಗಿ, ಜನ್ಮಹೇತವಃ=ಹುಟ್ಟಿಗೆ ಕಾರಣರು.

**ತಾ**. ಆ ದಿಲೀಪನು ಪ್ರಜೆಗಳಿಗೆ ವಿದ್ಯೆಯನ್ನು ಅಭ್ಯಾಸ ಮಾಡಿ, ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಿದ್ದನು. ಅವರ ಕಷ್ಟಗಳನ್ನು ಪರಿಹರಿಸುತ್ತಿದ್ದನು. ಅನ್ನ ವಸ್ತ್ರಾದಿಗಳನ್ನಿತ್ತು ಪೋಷಣೆಮಾಡುತ್ತಿದ್ದನು. ಹೀಗೆ ಅವನು ತಂದೆಯ ಕೆಲಸವನ್ನು ಮಾಡುತ್ತಿದ್ದರಿಂದ, ಆ ಪ್ರಜೆಗಳಿಗೆ ತಂದೆಯಾದನು. ಅವರ ತಂದೆಯರು ಮುಖ್ಯವಾಗಿ ಹುಟ್ಟಿಗೆ ಕಾರಣರಾಗಿದ್ದರು.

**25** **ಅ**. ದಂಡ್ಯಾನ್=ಶಿಕ್ಷಿಸಲು ಯೋಗ್ಯರಾದವರನ್ನು, ಸ್ಥಿತ್ಯೈ=ಪ್ರಜೆಗಳು ಸರಿಯಾಗಿರುವುದಕ್ಕಾಗಿ, ದಂಡಯತಃ=ಶಿಕ್ಷಿಸುವ, ಪ್ರಸೂತಯೇ=ಸಂತತಿಗಾಗಿ, ಪರಿಣೇತುಃ=ಮದುವೆಮಾಡಿಕೊಳ್ಳುವ, ಮನೀಷಿಣಃ=ಜ್ಞಾನಿಯಾದ, ತಸ್ಯ=ಅವನಿಗೆ, ಅರ್ಥಕಾಮೌ ಅಪಿ=ಹಣ ಮತ್ತು ಕಾಮಗಳು, ಧರ್ಮಃ ಏವ=ಧರ್ಮವೇ, ಆಸ್ತಾಂ=ಆದುವು.

**ತಾ**. ಆ ದಿಲೀಪನು ಜನರು ಸರಿಯಾದ ದಾರಿಯಲ್ಲಿ ನಡೆಯುವುದಕ್ಕಾಗಿ ಶಿಕ್ಷಿಸಲರ್ಹರಾದವರನ್ನು ಶಿಕ್ಷಿಸುತ್ತಿದ್ದನು. ಸಂತತಿಯು ಮುಂದುವರಿಯುವುದಕ್ಕಾಗಿ ಮದುವೆಮಾಡಿಕೊಳ್ಳುತ್ತಿದ್ದನು. ಇದರಿಂದ ಜ್ಞಾನಿಯಾದ ಅವನು ಅರ್ಥಕಾಮಗಳು ಲೋಕಸ್ಥಿತಿ ಪ್ರಜೋತ್ಪತ್ತಿರೂಪ ಧರ್ಮಕ್ಕಾಗಿಯೇ ಆದುವು. ಎಂದರೆ ಕೇವಲ ಧರ್ಮವನ್ನು ಮಾತ್ರ ಅನುಷ್ಠಾನ ಮಾಡಿದವನಂತಾದನು.

**26**.**ಅ**. ಸಃ=ಆ ದಿಲೀಪನು, ಗಾಂ=ಭೂಮಿಯನ್ನು ಯಜ್ಞಾಯ=ಯಜ್ಞಕ್ಕಾಗಿ, ದುದೋಹ=ಕರೆದನು, ಮಘವಾ=ದೇವೇಂದ್ರನು, ದಿವಂ=ದೇವಲೋಕವನ್ನು, ಸಸ್ಯಾಯ=ಸಸ್ಯಕ್ಕಾಗಿ, ದುದೋಹ=ಕರೆದನು, ಉಭೌ=ದಿಲೀಪ ದೇವೇಂದ್ರರು, ಸಂಪತ್=ಐಶ್ವರ್ಯದ, ವಿನಿಮಯೇನ=ಬದಲಾವಣೆಯಿಂದ, ಭುವನದ್ವಯಂ=ಭೂಮಿ ಮತ್ತು ಸ್ವರ್ಗಲೋಕಗಳನ್ನು, ದಧತುಃ=ಪೋಷಣೆ ಮಾಡಿದರು.

**ತಾ**. ಆ ದಿಲೀಪನು ತನ್ನ ರಾಜ್ಯದಲ್ಲಿರುವ ಜನರಿಂದ ಕಂದಾಯವನ್ನು ತೆಗೆದುಕೊಂಡು ಯಜ್ಞವನ್ನು ಮಾಡಿದನು. ಅದರಿಂದ ಸಂತೋಷಗೊಂಡ ಇಂದ್ರನು ದೇವಲೋಕದಿಂದ ಮಳೆಯನ್ನು ಸುರಿಸಿ ಪೈರುಗಳು ಬೆಳೆಯುವಂತೆ ಮಾಡಿದನು. ಹೀಗೆ ಅವರಿಬ್ಬರು ಸೌಹಾರ್ದದಿಂದ ತಮ್ಮ ಸಂಪತ್ತುಗಳನ್ನು ಬದಲಾಯಿಸಿಕೊಂಡು ಭೂಮಿ ಮತ್ತು ಸ್ವರ್ಗಗಳನ್ನು ಕಾಪಾಡಿದರು.

**27**. **ಅ**. ಯತ್=ಯಾವಕಾರಣದಿಂದ, ತಸ್ಕರತಾ=ಕಳ್ಳತನವು, ಪರಸ್ವೇಭ್ಯಃ=ಇನ್ನೊಬ್ಬರ ಹಣದಿಂದ, ವ್ಯಾವೃತ್ತಾ=ಹಿಂದಿರುಗಿದ್ದಾಗಿ, ಶ್ರುತೌ=ಶಬ್ದದಲ್ಲಿ ಸ್ಥಿತಾ=ಇದ್ದಿತೋ, (ಅದರಿಂದ) ರಾಜಾನಃ=ಇತರ ರಾಜರು, ರಕ್ಷಿತುಃ=ಕಾಪಾಡುವ, ತಸ್ಯ=ಆ ದಿಲೀಪನ, ಯಶಃ=ಕೀರ್ತಿಯನ್ನು, ನ ಅನುಯಯುಃ ಕಿಲ=ಅನುಸರಿಸಲಿಲ್ಲವಷ್ಟೆ.

**ತಾ**. ಆ ದಿಲೀಪನು ರಾಜ್ಯವಾಳುತ್ತಿರುವಾಗ ಪ್ರಜೆಗಳಲ್ಲಿ ಯಾರೂ ಕಳ್ಳತನ ಮಾಡುತ್ತಿರಲಿಲ್ಲ. ಆದುದರಿಂದ ಕಳ್ಳತನ ಎಂಬ ಶಬ್ದ ಮಾತ್ರವಿದ್ದಿತು. ಅದರ ಅರ್ಥವಾದ ಕಳ್ಳತನವು ಇರಲಿಲ್ಲ. ಇಷ್ಟು ಚೆನ್ನಾಗಿ ಅವನು ರಾಜ್ಯವನ್ನಾಳುತ್ತಿದ್ದು ಕೀರ್ತಿವಂತನಾದ್ದರಿಂದ ಇತರ ರಾಜರು ಅವನಂತೆ ರಾಜ್ಯವಾಳಿ ಕೀರ್ತಿಯನ್ನು ಪಡೆಯಲಾಗಲಿಲ್ಲ. ಎಂದರೆ ಕಳ್ಳತನ ಎಂಬುದೇ ಇಲ್ಲದಿದ್ದರಿಂದ ಇತರ ರಾಜರು ಅವನ ಕೀರ್ತಿಯನ್ನು ಕದಿಯಲಾಗಲಿಲ್ಲ.

**28**. **ಅ**. ಶಿಷ್ಟಃ=ಯೋಗ್ಯನು, ದ್ವೇಷ್ಯಃ ಅಪಿ=ಶತ್ರುವಾದಾಗ್ಯೂ, ಆರ್ತಸ್ಯ=ಕಾಯಿಲೆಯವನಿಗೆ, ಔಷಧಂ ಯಥಾ=ಔಷಧದಂತೆ, ತಸ್ಯ=ಆ ದಿಲೀಪನಿಗೆ, ಸಮ್ಮತಃ=ಇಷ್ಟನು, ಆಸೀತ್= ಆಗಿದ್ದನು, ದುಷ್ಟಃ=ದುಷ್ಟನು, ಪ್ರಿಯಃ ಅಪಿ=ಸ್ನೇಹಿತನಾಗಿದ್ದರೂ, ಉರಗಕ್ಷತಾ=ಹಾವಿನಿಂದ ಕಡಿಯಲ್ಪಟ್ಟ, ಅಂಗುಲೀ ಇವ=ಬೆರಳಿನಂತೆ, ತ್ಯಾಜ್ಯಃ=ಬಿಡಲು ಯೋಗ್ಯನು, ಆಸೀತ್=ಆಗಿದ್ದನು.

**ತಾ**. ಕಾಯಿಲೆಯವನು ಔಷಧ ಕಹಿಯಾಗಿ ತನಗೆ ಅಪ್ರಿಯವಾಗಿದ್ದರೂ ಕಾಯಿಲೆಯು ವಾಸಿಯಾಗುವುದೆಂಬ ಭಾವನೆಯಿಂದ ಇಷ್ಟಪಟ್ಟು ಅದನ್ನು ಕುಡಿಯುವನು. ಹಾಗೆಯೇ ದಿಲೀಪನಿಗೆ ಸಜ್ಜನನು ದ್ವೇಷಿಯಾಗಿದ್ದರೂ ಸಜ್ಜನತ್ವವಿರುವ ಕಾರಣ ಪ್ರಿಯನಾಗುತ್ತಿದ್ದನು. ಮನುಷ್ಯನು ನಾಗರ ಹಾವು ಅತನ ಬೆರಳನ್ನು ಕಚ್ಚಿದ ಕೂಡಲೇ ಸಾಯುವನೆಂಬ

ಭಯದಿಂದ ಆ ಬೆರಳು ತನಗೆ ಪ್ರಿಯವಾಗಿದ್ದರೂ ಅದನ್ನು ಕತ್ತರಿಸಿ ಬಿಸಾಡುವನು. ಹಾಗೆಯೇ ಆ ದಿಲೀಪನಿಗೆ ದುಷ್ಟನು ಸ್ನೇಹಿತನಾಗಿದ್ದರೂ ದುಷ್ಟತನವಿರುವ ಕಾರಣ ತ್ಯಜಿಸಲು ಯೋಗ್ಯನಾಗುತ್ತಿದ್ದನು.

**29**. **ಅ**. ವೇಧಾಃ=ಬ್ರಹ್ಮನು, ತಂ=ಆದಿಲೀಪನನ್ನು, ಮಹಾಭೂತಸಮಾಧಿನಾ= ಪಂಚಮಹಾಭೂತಗಳ ಕಾರಣಸಾಮಗ್ರಿಗಳಿಂದ ವಿದಧೇ= ಸೃಷ್ಟಿ ಮಾಡಿದನು, ನೂನಂ= ನಿಶ್ಚಯ, ಹಿ=ಯಾವಕಾರಣದಿಂದ, ತಥಾ=ಹಾಗೆಯೇ, ತಸ್ಯ=ಅವನ, ಸರ್ವೇ=ಎಲ್ಲಾ, ಗುಣಾಃ=ಗುಣಗಳು, ಪರಾರ್ಥ=ಇನ್ನೊಬ್ಬರ ಪ್ರಯೋಜನವೇ, ಏಕಫಲಾಃ= ಮುಖ್ಯಪ್ರಯೋಜನವಾಗಿವುಳ್ಳವುಗಳು, ಆಸನ್=ಆದವೋ.

**ತಾ**. ಆ ದಿಲೀಪನು ಪಂಚಮಹಾಭುತಗಳಂತೆ ಮತ್ತೊಬ್ಬರ ಪ್ರಯೋಜನಕ್ಕಾಗಿಯೇ ಕೆಲಸ ಮಾಡುತ್ತಿದ್ದನು. ಅದರಿಂದ ಬ್ರಹ್ಮನು ಅವನನ್ನು ಪರರ ಪ್ರಯೋಜನಕ್ಕಾಗಿಯೇ ಇರುವ ಪೃಥಿವೀ, ನೀರು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಮಹಾಭೂತಗಳನ್ನು ಸೃಷ್ಟಿಸಲು ಉಪಯೋಗಿಸಿದ ಸಾಮಗ್ರಿಗಳಿಂದಲೇ ಸೃಷ್ಟಿಸಿರಬೇಕು.

**30**. **ಅ:** ಸಃ=ಆ ದಿಲೀಪನು, ವೇಲಾ=ಸಮುದ್ರದ ದಡವೇ, ವಪ್ರವಲಯಾಂ=ಕೋಟೆಯ ಸುತ್ತಾಗುಳ್ಳ, ಪರಿಖೀಕೃತ=ಕಂದಕವಾಗಿ ಮಾಡಲ್ಪಟ್ಟ, ಸಾಗರಾಂ=ಸಮುದ್ರಗಳುಳ್ಳ, ಅನನ್ಯಶಾಸನಾಂ=ಇತರರ ಅಳುವಿಕೆಯಿಲ್ಲದ, ಉರ್ವೀಂ=ಭೂಮಿಯನ್ನು, ಏಕಪುರೀಂ ಇವ=ಒಂದೇ ಪಟ್ಟಣದಂತೆ, ಶಶಾಸ=ಆಳಿದನು,

**ತಾ :** ಆ ದಿಲೀಪನು ಸಂಪೂರ್ಣ ಭೂಮಿಯನ್ನು ಒಂದು ಪಟ್ಟಣದಂತೆ ಅನಾಯಾಸದಿಂದ ಆಳಿದನು. ಅವನು ಅಳುತ್ತಿದ್ದ ಭೂಮಿಗೆ ಸಮುದ್ರದ ದಡವೇ ಕೋಟೆಯ ಸುತ್ತಾಗಿದ್ದಿತು. ನಾಲ್ಕು ಸಮುದ್ರಗಳೇ ಕಂದಕವಾಗಿದ್ದುವು. ಬೇರೆ ಯಾರೂ ಅದನ್ನು ಆಳುತ್ತಿರಲಿಲ್ಲ.

**31**. **ಅ :** ತಸ್ಯ ಆ ರಾಜನಿಗೆ, ಮಗಧವಂಶಜಾ=ಮಗಧವಂಶದಲ್ಲಿ ಹುಟ್ಟಿದ ದಾಕ್ಷಿಣ್ಯ=ಇನ್ನೊಬ್ಬರ ಅಭಿಪ್ರಾಯವನ್ನನುಸರಿಸಿ ನಡೆಯುವ ಗುಣದಿಂದ, ರೂಢೇನ=ಪ್ರಸಿದ್ಧವಾದ, ನಾಮ್ನಾ=ಹೆಸರಿನಿಂದ, ಅಧ್ವರಸ್ಯ=ಯಜ್ಞ ಪುರುಷನ ದಕ್ಷಿಣಾ

ಇವ=ದಕ್ಷಿಣೆಯೆಂಬ ಹೆಂಡತಿಯಂತೆ, ಸುದಕ್ಷಿಣಾ ಇತಿ=ಸುದಕ್ಷಿಣೆಯೆಂಬ, ಪತ್ನೀ=ಹೆಂಡತಿಯು, ಆಸೀತ್=ಇದ್ದಳು.

**ತಾ:** ಆ ದಿಲೀಪನಿಗೆ ಮಗಧ ವಂಶದಲ್ಲಿ ಜನಿಸಿದ ಸುದಕ್ಷಿಣೆಯೆಂಬವಳು ಹೆಂಡತಿಯಾಗಿದ್ದಳು. ಅವಳಿಗೆ ದಾಕ್ಷಿಣ್ಯವಿರುವುದರಿಂದ ಸುದಕ್ಷಿಣೆಯೆಂದು ಹೆಸರಾಗಿದ್ದಿತು. ಅವಳು ಯಜ್ಞಪುರುಷನ ಹೆಂಡತಿಯಾದ ದಕ್ಷಿಣೆಯಂಬವಳಂತಿದ್ದಳು.

**32. ಅ.** ವಸುಧಾಧಿಪಃ=ಭೂಮಿಗೆ ಒಡೆಯನಾದ ದಿಲೀಪನು, ಅವರೋಧೇ=ಅಂತಃಪುರದ ಹೆಂಗಸರು, ಮಹತಿ ಅಪಿ=ಹೆಚ್ಚಾಗಿದ್ದರೂ, ಮನಸ್ವಿನ್ಯಾ=ದೃಢವಾದ ಮನಸ್ಸುಳ್ಳ, ತಯಾ=ಆ ಸುದಕ್ಷಿಣೆಯಿಂದ, ಚ=ಮತ್ತು ಲಕ್ಷ್ಮ್ಯಾ=ಲಕ್ಷ್ಮಿಯಿಂದ, ಆತ್ಮಾನಂ=ತನ್ನನ್ನು, ಕಲತ್ರವಂತಂ= ಹೆಂಡತಿಯುಳ್ಳವನನ್ನಾಗಿ, ಮೇನೇ=ತಿಳಿಸಿದನು.

**ತಾ :** ಆ ದಿಲೀಪನಿಗೆ ಅಂತಃಪುರದಲ್ಲಿ ಅನೇಕ ಮಂದಿ ಹೆಂಡತಿಯರು ಇದ್ದರು. ಆದರೂ ಅವನಿಗೆ ದೃಢ ಮನಸ್ಸಿನ ಸುದಕ್ಷಿಣೆ. ರಾಜ್ಯಲಕ್ಷ್ಮಿ (ಭೂಮಿ) ಇವರು ಉತ್ತಮ ಪತ್ನಿಯಾಗಿದ್ದರು.

**33. ಅ.** ಸಃ=ಆ ದಿಲೀಪನು ಆತ್ಮಾನುರೂಪಾಯಾಂ=ತನಗೆ ಸರಿಯಾಗಿರುವ, ತಸ್ಯಾಂ= ಆ ಸುದಕ್ಷಿಣೆಯಲ್ಲಿ, ಆತ್ಮಜನ್ಮ=ಮಗನಲ್ಲಿ, ಸಮುತ್ಸುಕಃ=ತವಕವುಳ್ಳವನಾಗಿ, ವಿಲಂಬಿತಫಲೈಃ= ಸಾವಕಾಶವಾದ ಪ್ರಯೋಜನವುಳ್ಳ, ಮನೋರಥೈಃ=ಅಭಿಲಾಷೆಗಳಿಂದ, ಕಾಲಂ=ಸಮಯವನ್ನು, ನಿನಾಯ=ಕಳೆದನು.

**ತಾ:** ಆ ದಿಲೀಪನು ತನ್ನ ಪ್ರಿಯ ಪತ್ನಿಯಲ್ಲಿ ಮಗನು ಹುಟ್ಟಬೇಕೆಂದು ಉತ್ಸುಕನಾಗಿದ್ದನು. ಆದರೆ ಅವನ ಅಭಿಲಾಷೆಯು ಕೂಡಲೆ ನೆರವೇರಲಿಲ್ಲ. ನನಗೆ ಯಾವಾಗ ಮಗನಾದಾನೆಂದು ಆಶೆಯಿಂದ ಅವನು ಕಾಲವನ್ನು ಕಳೆಯುತ್ತಿದ್ದನು.

**34. ಅ.** ತೇನ=ಆ ದಿಲೀಪನಿಂದ, ಸಂತಾನಾರ್ಥಾಯ=ಸಂತತಿಯೇ ಪ್ರಯೋಜನವಾಗುಳ್ಳ, ವಿಧಯೇ=ಅನುಷ್ಠಾನಕ್ಕಾಗಿ, ಸ್ವಭುಜಾತ್=ತನ್ನ ಹೆಗಲಿನಿಂದ, ಅವತಾರಿತಾ=ಇಳಿಸಲ್ಪಟ್ಟ, ಜಗತಃ=ಲೋಕದ, ಗುರ್ವೀ=ಹೆಚ್ಚಾದ, ಧೂಃ=ಭಾರವು, ಸಚಿವೇಷು=ಮಂತ್ರಿಗಳಲ್ಲಿ, ನಿಚಿಕ್ಷಿಪೇ=ಇಡಲ್ಪಟ್ಟಿತು.

**ತಾ.** ಆ ದಿಲೀಪನು ಸಂತಾನವನ್ನು ಪಡೆಯಲು ಕೆಲವು ಅನುಷ್ಠಾನವನ್ನು ಮಾಡಬೇಕಾಗಿದ್ದಿತು. ಆದ್ದರಿಂದ ಅವನು ತಾನು ನಿರ್ವಹಿಸುತ್ತಿದ್ದ ಮಹತ್ತಾದ ರಾಜ್ಯಭಾರವನ್ನು ಮಂತ್ರಿಗೆ ವಹಿಸಿದನು.

ಇಲ್ಲಿಂದ ಮುಂದೆ 45ನೇ ಪದ್ಯದವರೆಗೆ ಪ್ರಯಾಣದ ವರ್ಣನೆಯಾದ್ದರಿಂದ ಒಟ್ಟಿಗೆ ಅನ್ವಯ ಮಾಡಬೇಕಾಗಿದೆ.

**35. ಅ.** ಅಥ= ಬಳಿಕ, ಪುತ್ರಕಾಮ್ಯಯಾ=ಮಗನನ್ನು ಪಡೆಯುವ ಇಚ್ಛೆಯಿಂದ, ತೌ ದಂಪತೀ=ಆ ದಿಲೀಪ ಮತ್ತು ಸುದಕ್ಷಿಣೆಯರು, ಪ್ರಯತೌ=ಶುದ್ಧರಾಗಿ, ವಿಧಾತಾರಂ=ಬ್ರಹ್ಮನನ್ನು, ಅಭ್ಯರ್ಚ್ಯ=ಪೂಜಿಸಿ, ಗುರೋಃ=ವಂಶದ ಗುರುಗಳಾದ, ವಸಿಷ್ಠಸ್ಯ= ವಸಿಷ್ಠ ಮುನಿಗಳ, ಆಶ್ರಮ=ಆಶ್ರಮಕ್ಕೆ, ಜಗ್ಮತುಃ=ಹೋದರು.

**ತಾ.** ತರುವಾಯ ಆ ದಿಲೀಪ ದಂಪತಿಗಳು ಶುದ್ಧರಾಗಿ ಮಗನನ್ನು ಪಡೆಯುವ ಅಪೇಕ್ಷೆಯಿಂದ ಬ್ರಹ್ಮದೇವನನ್ನು ಅರ್ಚಿಸಿದರು. ಹಾಗೆಯೇ ಮಗನನ್ನು ಪಡೆಯುವುದಕ್ಕೆ ಉಪಾಯವನ್ನು ತಿಳಿಯಲು ಕುಲಗುರುವಾದ ವಸಿಷ್ಠರ ಆಶ್ರಮಕ್ಕೆ ತೆರಳಿದರು.

**36. ಅ.** ಸ್ನಿಗ್ಧ=ಮನೋಹರವಾದ, ಗಂಭೀರ=ಗಾಂಭೀರ್ಯದಿಂದ ಕೂಡಿದ, ನಿರ್ಘೋಷಂ= ಧ್ವನಿಯುಳ್ಳ, ಏಕಂ=ಒಂದೇ, ಸ್ಯಂದನಂ=ರಥವನ್ನು, ಪ್ರಾವೃಷೇಣ್ಯಂ=ಮಳೆಗಾಲದ, ಪಯೋವಾಹಂ=ಮೋಡವನ್ನು, ವಿದ್ಯುತ್=ಮಿಂಚು, ಐರಾವತೌ ಇವ=ಐರಾವತವೆಂಬ ಮೋಡ ಇವುಗಳಂತೆ, ಆಸ್ಥಿತೌ=ಹತ್ತಿರುವ, (ಆ ದಂಪತಿಗಳು ಹೋದರು).

**ತಾ.** ಆ ದಿಲೀಪ ದಂಪತಿಗಳು ಮನೋಹರವೂ, ಗಂಭೀರವೂ ಆದ ಶಬ್ದ ಮಾಡುತ್ತಿರುವ ಒಂದೇ ರಥವನ್ನು ಹತ್ತಿಕೂತುಕೊಂಡು ಪ್ರಯಾಣ ಮಾಡುತ್ತಿದ್ದರು. ಆಗ ಅವರು ಮಳೆಗಾಲದ ಮೋಡವನ್ನೇರಿ ಮುಂದೆ ಸಾಗುತ್ತಿರುವ ಮಿಂಚು ಮತ್ತು ಐರಾವತವೆಂಬ ಮತ್ತೊಂದು ಮೋಡದಂತೆ ಕಾಣುತ್ತಿದ್ದರು. ಎಂದರೆ ರಥವು ಮಳೆಗಾಲದ ಮೋಡದಂತೆಯು ಸುದಕ್ಷಿಣೆಯು ಮಿಂಚಿನಂತೆಯೂ, ದಿಲೀಪನು ಐರಾವತವೆಂಬ ಮೋಡದಂತೆಯೂ ಇದ್ದರು. (ಐರಾವತ ಮೋಡದ ಮೇಲೆಹತ್ತಿದ ಮೋಡ)

**37. ಅ :** ಆಶ್ರಮಪೀಡಾ=ಆಶ್ರಮಕ್ಕೆ ಬಾಧೆಯು, ಮಾ ಭೂತ್ ಇತಿ=ಆಗ ಕೂಡದೆಂದು, ಪರಿಮೇಯ= ಮಿತವಾದ, ಪುರಸ್ಸರೌ=ಮುಂದಾಳುಗಳುಳ್ಳ, ಅನುಭಾವವಿಶೇಷಾತ್ತು=ಅತಿಶಯ ತೇಜಸ್ಸಿನಿಂದಲಾದರೋ, ಸೇನಾಪರಿವೃತೌ ಇವ=ಸೇನೆಯಿಂದ ಸುತ್ತುವರಿಯಲ್ಪಟ್ಟವರಂತೆ ಇರುವ (ಆ ದಂಪತಿಗಳು ಪ್ರಯಾಣ ಮಾಡಿದರು).

**ತಾ:** ಆ ದಿಲೀಪ ದಂಪತಿಗಳು ಆಶ್ರಮಕ್ಕೆ ತೊಂದರೆಯಾಗಕೂಡದೆಂದು ಮಿತವಾದ ಪರಿವಾರವುಳ್ಳವರಾಗಿದ್ದರು. ಆದರೂ ಅವರು ತೇಜಸ್ಸಿನಿಂದ ಸೇನೆಯಿಂದ ಸುತ್ತುವರೆಯಲ್ಪಟ್ಟವರಂತಿದ್ದರು. (ಇಂತಹ ದಂಪತಿಗಳು ಪ್ರಯಾಣ ಮಾಡಿದರು).

**38. ಅ.** ಸುಖಸ್ಪರ್ಶೈಃ=ತಣ್ಣಗಿರುವುದರಿಂದ ಸುಖಕರವಾದ ಸ್ಪರ್ಶವುಳ್ಳ, ಶಾಲ=ಶಾಲವೆಂಬ ಮರದ, ನಿರ್ಯಾಸ=ಹಾಲಿನ, ಗಂಧಿಭಿಃ=ಸುವಾಸನೆಯುಳ್ಳ, ಪುಷ್ಪ ಹೂವುಗಳ, ರೇಣು=ಪರಾಗಗಳನ್ನು, ಉತ್ಕಿರೈಃ=ಎರಚುತ್ತಿರುವ, ಆಧೂತ=ಅಲ್ಲಾಡಿಸಲ್ಪಟ್ಟ, ವನ ವನಗಳ, ರಾಜಿಭಿಃ=ಸಾಲುಗಳುಳ್ಳ, ವಾತೈಃ=ಗಾಳಿಗಳಿಂದ, ಸೇವ್ಯಮಾನೌ=ಸೇವಿಸಲ್ಪಡುತ್ತಿರುವ, (ದಂಪತಿಗಳು ಪ್ರಯಾಣ ಮಾಡಿದರು).

**ತಾ:** ಆ ದಂಪತಿಗಳು ಪ್ರಯಾಣ ಮಾಡುತ್ತಿರುವಾಗ ತಣ್ಣಗೆ ಸುಖಕರವಾಗಿ ಬೀಸುತ್ತಿದ್ದ ಗಾಳಿಗಳಿಂದ ಸೇವಿಸಲ್ಪಡುತ್ತಿದ್ದರು, ಗಾಳಿಗಳು ಶಾಲವೃಕ್ಷದಿಂದ ಸುರಿದ ಹಾಲಿನಂತಹ ರಸದ ಮೇಲೆ ಬೀಸುತ್ತಿದ್ದರಿಂದಲೂ, ಹೂವುಗಳು ಪರಾಗಗಳನ್ನು ಎರಚುತ್ತಿದ್ದುದರಿಂದಲೂ, ಸುವಾಸನೆಯಾಗಿಯೂ ಮರಗಳ ಮೇಲೆ ಬೀಸುತ್ತಿದ್ದುದರಿಂದ ಮಂದವಾಗಿಯು ಇದ್ದುವು. ಹೀಗೆ ಅವರು ಮುಂದಕ್ಕೆ ಸಾಗಿದರು.

**39. ಅ.** ರಥ=ರಥದ ನೇಮಿ=ಚಕ್ರದ ತುದಿಯ, ಸ್ವನ=ಧ್ವನಿಯಲ್ಲಿ ಉನ್ಮುಖೈಃ=ಮೇಲಕ್ಕೆತ್ತಿದ ಮುಖವುಳ್ಳ, ಶಿಖಂಡಿಭಿಃ=ನವಿಲುಗಳಿಂದ, ದ್ವಿಧಾ=ಶುದ್ಧ, ವಿಕೃತಭೇದದಿಂದ ಎರಡು ವಿಧವಾಗಿ, ಭಿನ್ನಾಃ=ಭೇದಿಸಲ್ಪಟ್ಟ, ಷಡ್ಜಸಂವಾದಿನೀಃ=ಷಡ್ಜಸ್ವರಕ್ಕೆ ಸಮಾನವಾದ, ಮನೋಭಿರಾಮೌ=ಮನಸ್ಸಿಗೆ ಪ್ರಿಯವಾದ, ಕೇಕಾಃ=ಕೇಕೆಗಳನ್ನು, ಶೃಣ್ವಂತೌ= ಕೇಳುತ್ತಿದ್ದರಿಂದ. (ಆ ದಂಪತಿಗಳು ಪ್ರಯಾಣ ಮಾಡಿದರು.)

**ತಾ.** ಆ ದಿಲೀಪ ದಂಪತಿಗಳು ಪ್ರಯಾಣಮಾಡುತ್ತಿರುವಾಗ ರಥದ ಚಕ್ರದ ಧ್ವನಿಯನ್ನು ಕೇಳಿ ಇದು ಮೋಡದ ಧ್ವನಿಯೆಂಬ ಭ್ರಾಂತಿಯಿಂದ ನವಿಲುಗಳು ತಲೆಯನ್ನೆತ್ತಿ ನೋಡುತ್ತಾ ಕೇಕೆ ಹಾಕುತ್ತಿದ್ದವು. ಆ ಕೇಕೆಗಳು ಮನೋಹರವಾಗಿ ಶುದ್ಧ ವಿಕೃತ ಭೇದದಿಂದ ಕೂಡಿ ಷಡ್ಜ ಧ್ವನಿಯಂತಿದ್ದವು. ಅವನ್ನು ಕೇಳುತ್ತ ಆ ದಂಪತಿಗಳು ಪ್ರಯಾಣ ಮಾಡಿದರು.

**40. ಅ.** ಅದೂರೋಜ್ಝಿತವರ್ತ್ಮಸು=ಸಮೀಪದಲ್ಲಿ ಬಿಡಲ್ಪಟ್ಟ ದಾರಿಯುಳ್ಳ, ಸ್ಯಂದನ=ರಥದಲ್ಲಿ, ಆಬದ್ಧ=ಇಡಲ್ಪಟ್ಟ, ದೃಷ್ಟಿಷು=ಕಣ್ಣುಗಳುಳ್ಳ, ಮೃಗದ್ವಂದ್ವೇಷು=ಹೆಣ್ಣು ಗಂಡು ಜಿಂಕೆಗಳಲ್ಲಿ, ಪರಸ್ಪರ=ಒಬ್ಬರೊಬ್ಬರ, ಅಕ್ಷಿ=ಕಣ್ಣುಗಳ, ಸಾದೃಶ್ಯಂ=ಹೋಲಿಕೆಯನ್ನು, ಪಶ್ಯಂತೌ=ನೋಡುತ್ತಿರುವ (ಆ ದಂಪತಿಗಳು ಪ್ರಯಾಣ ಮಾಡಿದರು.)

**ತಾ.** ಆ ದಿಲೀಪ ದಂಪತಿಗಳು ಪ್ರಯಾಣ ಮಾಡುತ್ತಿರಲು ಹೆಣ್ಣು ಗಂಡು ಜಿಂಕೆಗಳು ನಂಬಿಕೆಯಿಂದ ಅವರ ದಾರಿಯ ಹತ್ತಿರವೇ ಹೋಗುತ್ತ ರಥವನ್ನು ನೋಡುತ್ತಿದ್ದವು. ಅವುಗಳನ್ನು ನೋಡುತ್ತಿರುವ ದಿಲೀಪ ದಂಪತಿಗಳಲ್ಲಿ ದಿಲೀಪನು ಸುದಕ್ಷಿಣೆಯ ಕಣ್ಣುಗಳಲ್ಲಿ ಹೆಣ್ಣು ಜಿಂಕೆಯ ಕಣ್ಣುಗಳ ಹೋಲಿಕೆಯನ್ನು ಕಾಣುತ್ತಿದ್ದನು. ಸುದಕ್ಷಿಣೆಯು ದಿಲೀಪನ ಕಣ್ಣುಗಳಲ್ಲಿ ಗಂಡು ಜಿಂಕೆಯ ಕಣ್ಣುಗಳ ಹೋಲಿಕೆಯನ್ನು ನೋಡುತ್ತಿದ್ದಳು. (ಈ ರೀತಿ ಅವರು ಮುಂದೆ ಸಾಗಿದರು.)

**41. ಅ.** ಶ್ರೇಣೀಬಂಧಾತ್=ಸಾಲುಕಟ್ಟುವುದರಿಂದ, ಅಸ್ತಂಭಾಂ=ಕಂಬವಿಲ್ಲದ, ತೋರಣಸ್ರಜಂ=ಹೊರಗಡೆ ಬಾಗಿಲಿಗೆ ಕಟ್ಟುವ ಮಾಲೆಯನ್ನು, ವಿತನ್ವದ್ಭಿಃ=ಉಂಟುಮಾಡುವ, ಕಲನಿರ್ಹ್ರಾದೈಃ=ಇಂಪಾದ ಧ್ವನಿಯುಳ್ಳ, ಸಾರಸೈಃ=ಸಾರಸ ಪಕ್ಷಿಗಳಿಂದ, ಕ್ವಚಿತ್=ಒಂದೆಡೆ, ಉನ್ನಮಿತಾನನೌ=ಮೇಲಕ್ಕೆತ್ತಿದ ಮುಖವುಳ್ಳ (ಆ ದಂಪತಿಗಳು ಪ್ರಯಾಣ ಮಾಡಿದರು).

**ತಾ.** ಅವರು ಪ್ರಯಾಣ ಮಾಡುತ್ತಿರುವಾಗ ಆಕಾಶದಲ್ಲಿ ಸಾರಸ ಪಕ್ಷಿಗಳು, ಇಂಪಾಗಿ ಕೂಗುತ್ತ ಸಾಲುಸಾಲಾಗಿ ಹಾರುತ್ತಿದ್ದುವು, ಆಗ ಅವು ಮುಂಬಾಗಿಲಿನ ಹೊರಗೆ ಕಟ್ಟುವ ತೋರಣದ ಮಾಲೆಯೋ ಎಂಬಂತೆ ಕಾಣುತ್ತಿದ್ದುವು. ಅದನ್ನು ಮೇಲ್ಮುಖರಾಗಿ ನೋಡುತ್ತ ಆ ದಂಪತಿಗಳು ಪ್ರಯಾಣ ಮಾಡಿದರು.

**42 ಅ**. ಪ್ರಾರ್ಥನಾಸಿದ್ಧಿ=ಇಷ್ಟಾರ್ಥಸಿದ್ಧಿಯನ್ನು, ಶಂಸಿನಃ=ಸೂಚಿಸುವ, ಪವನಸ್ಯ=ಗಾಳಿಯ, ಅನುಕೂಲತ್ವಾತ್=ಹೋಗುವ ದಿಕ್ಕಿಗೆ ಎದುರಾಗಿ ಬೀಸುತ್ತಿರುವುದರಿಂದ, ತುರಗ=ಕುದುರೆ–ಗಳಿಂದ, ಉತ್ಕೀರ್ಣೈಃ=ಎಬ್ಬಿಸಲ್ಪಟ್ಟ, ರಜೋಭಿಃ=ಧೂಳುಗಳಿಂದ, ಅಸ್ಪೃಷ್ಟ=ಮುಟ್ಟಲ್ಪಡದ, ಅಲಕ=ಮುಂಗೂದಲು ವೇಷ್ಟನೌ= ರುಮಾಲು ಇವುಗಳುಳ್ಳ (ಆ ದಂಪತಿಗಳು ಪ್ರಯಾಣ ಮಾಡಿದರು).

**ತಾ**. ಅವರು ಪ್ರಯಾಣ ಮಾಡುತ್ತಿರುವಾಗ ಗಾಳಿಯು ಹೋಗುವ ದಿಕ್ಕಿಗೆ ಎದುರಾಗಿ ಬೀಸುತ್ತ ಅವರ ಇಷ್ಟಾರ್ಥವು ಕೈಗೂಡುವುದೆಂಬುದನ್ನು ಸೂಚಿಸುತ್ತಿದ್ದಿತು. ಇದರಿಂದ ರಥದ ಕುದುರೆಗಳ ಗೊರಸುಗಳಿಂದ ಮೇಲಕ್ಕೆದ್ದ ಸುದಕ್ಷಿಣೆಯ ಮುಂಗೂದಲನ್ನು ದಿಲೀಪನ ರುಮಾಲನ್ನು ಮುಟ್ಟುತ್ತಿರಲಿಲ್ಲ.

**43**. **ಅ :** ಸರಸೀಷು=ಸರೋವರಗಳಲ್ಲಿ, ವೀಚಿ=ಅಲೆಗಳ, ವಿಕ್ಷೋಭ=ಹೊಡೆತದಿಂದ, ಶೀತಲಂ=ತಣ್ಣಗಾದ, ಸ್ವ= ತಮ್ಮ, ನಿಃಶ್ವಾಸ=ಉಸಿರನ್ನು, ಅನುಕಾರಿಣಂ= ಹೋಲುವ, ಅರವಿಂದಾನಾಂ=ಕಮಲಗಳ, ಆಮೋದಂ=ಸುವಾಸನೆಯನ್ನು, ಉಪಜಿಘ್ರಂತೌ=ಮೂಸಿ–ನೋಡುತ್ತಿರುವ, (ಆ ದಂಪತಿಗಳು ಪ್ರಯಾಣ ಮಾಡಿದರು).

**ತಾ :** ಆ ದಂಪತಿಗಳು ಸರೋವರದಲ್ಲಿರುವ ತಾವರೆ ಹೂವುಗಳ ಸುವಾಸನೆಯನ್ನು ಮೂಸಿನೋಡುತ್ತ ಪ್ರಯಾಣ ಮಾಡಿದರು. ಆ ಸುವಾಸನೆಯು ಅಲೆಗಳ ಹೊಡೆತದಿಂದ ತಣ್ಣಗೂ, ಸುವಾಸನೆಯಾದ ಅವರ ಉಸಿರಿನಂತೆಯೂ ಇದ್ದಿತು,

**44**. **ಅ ;** ಆತ್ಮ=ತಮ್ಮಿಂದ, ವಿಸೃಷ್ಟೇಷು=ದಾನ ಮಾಡಲ್ಪಟ್ಟ, ಯೂಪಚಿಹ್ನೇಷು= ಪಶುವನ್ನು ಕಟ್ಟುವ ಕಂಬವೇ ಚಿಹ್ನೆಯಾಗುಳ್ಳ, ಗ್ರಾಮೇಷು=ಹಳ್ಳಿಗಳಲ್ಲಿ, ಯಜ್ವನಾಂ=ಶಾಸ್ತ್ರ ಕ್ರಮದಿಂದ ಯಾಗಮಾಡಿದ ಶ್ರೋತ್ರಿಯರ, ಅರ್ಘ್ಯ=ಪೂಜೆಯ ವಸ್ತುಗಳನ್ನು ಸ್ವೀಕಾರ ಮಾಡಿದ, ಅನುಪದಂ=ಅನಂತರ, ಅಮೋಘಾಃ=ಸಫಲವಾದ, ಆಶಿಷಃ=ಆಶೀರ್ವಾದಗಳನ್ನು ಪ್ರತಿಗೃಹ್ಣಂತೌ=ಸ್ವೀಕರಿಸುತ್ತ. (ಆ ದಂಪತಿಗಳು ಪ್ರಯಾಣ ಮಾಡಿದರು),

**ತಾ:** ಆ ದಿಲೀಪನು ಅನೇಕ ಶ್ರೋತ್ರಿಯರಿಗೆ ಗ್ರಾಮಗಳನ್ನು ದಾನ ಮಾಡಿದ್ದನು. ಆ ಗ್ರಾಮಗಳಲ್ಲಿ ಅವರು ಯಾಗ ಮಾಡುವಾಗ ಪಶುಗಳನ್ನು ಕಟ್ಟಿದ ಕಂಬಗಳಿದ್ದುವು. ಆ

ದಿಲೀಪ ದಂಪತಿಗಳು ಆ ಹಳ್ಳಿಗಳ ಮೂಲಕ ಪ್ರಯಾಣ ಮಾಡುತ್ತಿರುವಾಗ ಆ ಶ್ರೋತ್ರಿಯರು ಅವರಿಗೆ ಪೂಜೆಮಾಡಿ ಸಾರ್ಥಕವಾದ ಆಶೀರ್ವಾದಗಳನ್ನು ಮಾಡಿದರು. ಅದನ್ನು ಸ್ವೀಕರಿಸುತ್ತಾ ಆ ದಂಪತಿಗಳು ಮುಂದಕ್ಕೆ ಸಾಗಿದರು.

**45.** **ಅ.** ಹೈಯಂಗವೀನಂ=ಆಗಲೇ ಬೆಣ್ಣೆ ಕಾಯಿಸಿದ ತುಪ್ಪವನ್ನು, ಆದಾಯ=ತೆಗೆದುಕೊಂಡು, ಉಪಸ್ಥಿತಾನ್=ಸಮೀಪಕ್ಕೆ ಬಂದ, ಘೋಷವೃದ್ಧಾನ್= ಗೊಲ್ಲರಹಳ್ಳಿಯ ಮುದುಕರನ್ನು, ವನ್ಯಾನಾಂ=ಕಾಡಿನಲ್ಲಿ ಬೆಳೆದ ಮಾರ್ಗಶಾಖಿನಾಂ= ದಾರಿಯ ಮರಗಳ, ನಾಮಧೇಯಾನಿ=ಹೆಸರುಗಳನ್ನು, ಪೃಚ್ಛಂತೌ=ಕೇಳುತ್ತಾ. (ಆ ದಂಪತಿಗಳು ಪ್ರಯಾಣ ಮಾಡಿದರು).

**ತಾ.** ಆ ದಿಲೀಪ ದಂಪತಿಗಳು ಪ್ರಯಾಣ ಮಾಡುತ್ತಿರುವಾಗ ಗೊಲ್ಲರಹಳ್ಳಿಯ ಮುದುಕರು ಆಗಲೇ ಬೆಣ್ಣೆ ಕಾಯಿಸಿದ ಹೊಸ ತುಪ್ಪವನ್ನು ಜನರಿಗೆ ಮಾರಲು ತೆಗೆದುಕೊಂಡು ದಾರಿಯಲ್ಲಿ ಬರುತ್ತಿದ್ದರು. ಆಗ ಆ ದಿಲೀಪ ದಂಪತಿಗಳು ಅವರನ್ನು ಕಾಡಿನ ದಾರಿಯಲ್ಲಿ ಬೆಳೆದ ಮರಗಳ ಹೆಸರುಗಳನ್ನು ಕೇಳುತ್ತಾ ಪ್ರಯಾಣ ಮಾಡಿದರು.

**46. ಅ:** ವ್ರಜತೋಃ=ಹೋಗುತ್ತಿರುವ, ಶುದ್ಧವೇಷಯೋಃ=ಪ್ರಕಾಶ ಮಾನವಾದ (ಬೆಳ್ಳಗಿರುವ) ಉಡುಪುಳ್ಳ, ತಯೋಃ=ಆ ಸುದಕ್ಷಿಣಾ ದಿಲೀಪರಿಗೆ ಹಿಮನಿರ್ಮುಕ್ತಯೋಃ=ಹಿಮದಿಂದ ಬಿಡಲ್ಪಟ್ಟ, ಚಿತ್ರಾಚಂದ್ರಮಸೋಃ ಇವ=ಚಿತ್ರಾನಕ್ಷತ್ರ ಮತ್ತು ಚಂದ್ರರಂತೆ, ಯೋಗೇ=ಸಂಬಂಧದಲ್ಲಿ, ಕಾ ಅಪಿ=ಹೇಳಲಾಗದ, ಅಭಿಖ್ಯಾ=ಕಾಂತಿಯು, ಆಸೀತ್= ಆಯಿತು.

**ತಾ:** ಚೈತ್ರ ಶುದ್ಧ ಹುಣ್ಣಿಮೆ ದಿನ ಚಿತ್ರಾ ನಕ್ಷತ್ರ ಮತ್ತು ಚಂದ್ರರು ಒಟ್ಟಿಗೆ ಸೇರುವರು. ಆಗ ಅವರ ಕಾಂತಿಯು ಅತ್ಯಂತ ಪ್ರಕಾಶಮಾನವಾಗಿ ಇರುವುದು. ಅದರಂತೆ ಬೆಳ್ಳಗೆ ಹೊಳಪಿನ ಉಡುಗೆಯನ್ನುಟ್ಟು ಒಟ್ಟಿಗೆ ಹೋಗುತ್ತಿರುವ ಆ ದಿಲೀಪ ದಂಪತಿಗಳ ಕಾಂತಿಯೂ ಹೆಚ್ಚಾಗಿದ್ದಿತು.

**47.** ಅ ಪ್ರಿಯದರ್ಶನಃ=ಇಷ್ಟವಾದ ನೋಟವುಳ್ಳ, ಬುಧೋಪಮಃ=ಬುಧ ಗ್ರಹಕ್ಕೆ ಸಮನಾದ, ಭೂಮಿಪತಿಃ=ದೂರೆಯಾದ ದಿಲೀಪನು, ಪತ್ನ್ಯೈ=ಹೆಂಡತಿಯಾದ ಸುದಕ್ಷಿಣೆಗೆ, ತತ್

ತತ್=ಆಯಾ ಆಶ್ಚರ್ಯಕರವಾದ ವಸ್ತುವನ್ನು, ದರ್ಶಯನ್=ತೋರಿಸುತ್ತಾ, ಲಂಘಿತಂ ಅಪಿ=ಕಳೆಯಲ್ಪಟ್ಟಾಗ್ಯೂ, ಅಧ್ವಾನಂ=ದಾರಿಯನ್ನು, ನ ಬುಬುಧೇ=ತಿಳಿಯಲಿಲ್ಲ.

**ತಾ**. ದಿಲೀಪನು ಸುಂದರನೂ, ಬುಧನಂತೆ ಎಲ್ಲಾ ವಸ್ತುಗಳನ್ನರಿತವನೂ ಆಗಿದ್ದನು. ಅವನು ದಾರಿಯಲ್ಲಿ ಹೋಗುತ್ತಿರುವಾಗ ಹೆಂಡತಿಗೆ ಅಲ್ಲಲ್ಲಿರುವ ಆಶ್ಚರ್ಯಕರವಾದ ವಸ್ತುಗಳನ್ನು ತೋರಿಸುತ್ತಾ ನಡೆದನು. ಇದರಿಂದವನು ವಸಿಷ್ಠಾಶ್ರಮದ ದಾರಿಯನ್ನು ಪೂರ್ತಿಯಾಗಿ ದಾಟಿದ್ದರೂ ಅದನ್ನರಿಯಲಿಲ್ಲ.

**48**. **ಅ**. ದುಷ್ಪ್ರಾಪ=ಅನ್ಯರಿಂದ ಹೊಂದಲಶಕ್ಯವಾದ, ಯಶಾಃ=ಕೀರ್ತಿಯುಳ್ಳ, ಶ್ರಾಂತವಾಹನಃ=ಬಳಲಿದ ಕುದುರೆಗಳುಳ್ಳ, ಮಹಿಷೀಸಖ:=ಹೆಂಡತಿಗೆ ಮಿತ್ರ (ಹೆಂಡತಿಯಿಂದ ಸಹಿತ) ನಾದ, ಸಃ=ಆ ದಿಲೀಪನು, ಸಾಯಂ=ಸಾಯಂಕಾಲ ಸಂಯಮಿನಃ=ನಿಯಮವುಳ್ಳ, ತಸ್ಯ=ಆ, ಮಹರ್ಷೇಃ=ವಸಿಷ್ಠ ಮುನಿಯ ಆಶ್ರಮಂ=ಆಶ್ರಮವನ್ನು, ಪ್ರಾಪತ್=ಹೊಂದಿದನು,

**ತಾ:** ಅನನ್ಯಲಭ್ಯವಾದ ಕೀರ್ತಿಯಿಂದ ಬೆಳಗುತ್ತಿರುವ ಆ ದಿಲೀಪನು ಹೆಂಡತಿಯಿಂದ ಸಹಿತನಾಗಿ ರಥದಲ್ಲಿ ಹೋಗುತ್ತಿರುವಾಗ ರಥವನ್ನು ಎಳೆಯುತ್ತಿರುವ ಕುದುರೆಗಳು ಬಳಲಿದುವು. ಹಾಗೆಯೇ ಅವನು ಸಾಯಂಕಾಲ ತಪೋನಿರತರಾದ ವಸಿಷ್ಠರ ಆಶ್ರಮವನ್ನು ಸೇರಿದನು.

**49 ಅ:** ಕವಿಯು ಇಲ್ಲಿಂದ ಮುಂದೆ ಐದು ಶ್ಲೋಕಗಳಿಂದ (ಕುಲಕದಿಂದ) ವಸಿಷ್ಠಾಶ್ರಮವನ್ನು ವರ್ಣಿಸುತ್ತಾನೆ. ವನಾಂತರಾತ್=ಬೇರೆ ಕಾಡಿನಿಂದ, ಉಪಾವೃತ್ತೈಃ= ಹಿಂದಿರುಗಿದ, ಸಮಿತ್=ಕಟ್ಟಿಗೆ, ಕುಶ=ದರ್ಭೆ, ಫಲ=ಹಣ್ಣು ಇವುಗಳನ್ನು, ಆಹರೈಃ=ತೆಗೆದುಕೊಂಡು ಬರುತ್ತಿರುವ, ಅದೃಶ್ಯ=ಕಾಣದಿರುವ, ಅಗ್ನಿ=ಯಾಗಾಗ್ನಿ ದೇವತೆಗಳಿಂದ ಪ್ರತ್ಯುದ್ಯಾತೈಃ=ಎದುರುಗೊಳ್ಳಲ್ಪಡುತ್ತಿರುವ, ತಪಸ್ವಿಭಿಃ=ಮುನಿಗಳಿಂದ, ಪೂರ್ಯಮಾಣಂ= ತುಂಬಲ್ಪಡುತ್ತಿರುವ, (ಆಶ್ರಮವನ್ನು ಸೇರಿದನು).

**ತಾ:** ಆ ದಿಲೀಪನು ಆಶ್ರಮಕ್ಕೆ ಹೋಗುತ್ತಿರುವಾಗ ಮುನಿಗಳು ಆಶ್ರಮಕ್ಕೆ ಬರುತ್ತಿದ್ದರು. ಅವರು ಬೇರೆ ಕಾಡುಗಳಿಂದ ಕಟ್ಟಿಗೆ, ದರ್ಭೆ, ಹಣ್ಣುಗಳನ್ನು ತೆಗೆದುಕೊಂಡು ಹಿಂದಿರುಗುತ್ತ

ಕಣ್ಣಿಗೆ ಕಾಣದಿರುವ ಅಗ್ನಿ ದೇವತೆಗಳಿಂದ ಎದುರುಗೊಳ್ಳಲ್ಪಡುತ್ತಿದ್ದರು. ಇಂತಹ ಆಶ್ರಮವನ್ನು ದಿಲೀಪನು ಪ್ರವೇಶಿಸಿದನು.

**50**. **ಅ**. ನೀವಾರ=ನವಣೆ ಧಾನ್ಯದ, ಭಾಗಧೇಯ=ಅಂಶಕ್ಕೆ, ಉಚಿತೈಃ=ಯೋಗ್ಯಗಳಾದ, ಉಟಜದ್ವಾರ=ಪರ್ಣಶಾಲೆಯ ಬಾಗಿಲನ್ನು, ರೋಧಿಭಿಃ=ತಡೆಯುತ್ತಿರುವ, ಋಷಿಪತ್ನೀನಾಂ=ಮುನಿಗಳ ಹೆಂಡತಿಯರ, ಅಪತ್ಯೈಃ ಇವ=ಮಕ್ಕಳಂತಿರುವ, ಮೃಗೈಃ=ಜಿಂಕೆಗಳಿಂದ ಆಕೀರ್ಣಂ=ವ್ಯಾಪ್ತವಾಗಿರುವ (ಆಶ್ರಮವನ್ನು ಸೇರಿದನು).

**ತಾ;** ಆ ವಸಿಷ್ಠರ ಆಶ್ರಮವು ತಮಗೆ ಸಲ್ಲಬೇಕಾದ ನವಣೆ ಧಾನ್ಯಗಳನ್ನು ಪಡೆಯಲೋಸುಗ ಬಾಗಿಲಿಗೆ ಅಡ್ಡ ಬಂದು ನಿಂತಿರುವ ಜಿಂಕಗಳಿಂದ ತುಂಬಿದ್ದಿತು. ಆ ಜಿಂಕೆಗಳು ಮುನಿಪತ್ನಿಯರಿಗೆ ತಮ್ಮ ಮಕ್ಕಳಂತೆ ಪ್ರೀತಿ ಪಾತ್ರಗಳಾಗಿದ್ದುವು. ಇಂತಹ ಆಶ್ರಮವನ್ನು ದಿಲೀಪನು ಸೇರಿದನು.

**51 ಅ :** ಸೇಕಾಂತೇ=ಪಾತಿಯಲ್ಲಿ ನೀರು ಸುರಿದಮೇಲೆ, ಮುನಿಕನ್ಯಾಭಿಃ=ಋಷಿಗಳ ಹೆಣ್ಣು ಮಕ್ಕಳಿಂದ, ಆಲವಾಲ=ಪಾತಿಯಲ್ಲಿರುವ, ಅಂಬು=ನೀರನ್ನು, ಪಾಯಿನಾಂ=ಕುಡಿಯುವ, ವಿಹಂಗಾನಾಂ=ಪಕ್ಷಿಗಳ ವಿಶ್ವಾಸಾಯ=ನಂಬಿಕೆಗಾಗಿ, ತತ್ಕ್ಷಣ=ಆ ಕ್ಷಣದಲ್ಲಿಯೇ (ಕೂಡಲೆ), ಉಜ್ಝಿತ=ಬಿಡಲ್ಪಟ್ಟ, ವೃಕ್ಷಕಂ=ಸಸಿಗಳುಳ್ಳ, (ಆಶ್ರಮವನ್ನು ಸೇರಿದನು)

**ತಾ:** ಆ ಮುನಿಗಳ ಹೆಣ್ಣು ಮಕ್ಕಳು ಆಶ್ರಮದಲ್ಲಿರುವ ಗಿಡಗಳ ಪಾತಿಗಳಿಗೆ ನೀರೆರೆಯುತ್ತಿದ್ದರು. ಅಲ್ಲಿ ಪಕ್ಷಿಗಳು ನೀರನ್ನು ಕುಡಿಯಲು ಕಾದುಕೊಂಡಿದ್ದುವು. ಆಗ ಮುನಿಕುವರಿಯರು ತಾವು ಅಲ್ಲಿದ್ದರೆ ಹಕ್ಕಿಗಳು ಹೆದರಿ ನೀರನ್ನು ಕುಡಿಯಲಾರವು ಎಂದು ತಿಳಿದು ತಾವು ನೀರನ್ನು ಹಾಕಿದ ಕೂಡಲೇ ಆ ಹಕ್ಕಿಗಳ ನಂಬಿಕೆಗಾಗಿ ದೂರ ಸರಿಯುತ್ತಿದ್ದರು. ಇಂತಹ ಆಶ್ರಮವನ್ನು ಆ ದಿಲೀಪನು ಸೇರಿದನು.

**52**. **ಅ :** ಆತಪ=ಬಿಸಿಲಿನ ಅತ್ಯಯ=ಹೋಗುವಿಕೆಯಲ್ಲಿ ಸಂಕ್ಷಿಪ್ತ=ಒಟ್ಟು ಕೂಡಿಸಲ್ಪಟ್ಟ, ನೀವಾರಾಸು=ನವಣೆಧಾನ್ಯವುಳ್ಳ, ಉಟಜಾಂಗಣ ಭೂಮಿಷು=ಪರ್ಣಶಾಲೆಗಳ ಅಂಗಳಗಳ ಸ್ಥಳಗಳಲ್ಲಿ, ನಿಷಾದಿಭಿಃ=ಕೂತಿರುವ (ಮಲಗಿರುವ), ಮೃಗೈಃ=ಜಿಂಕೆಗಳಿಂದ, ವರ್ತಿತರೋಮಂಥಂ=ಮೆಲುಕು ಹಾಕುವಿಕೆಯುಳ್ಳ, (ಆಶ್ರಮವನ್ನು ಸೇರಿದನು).

**ತಾ:** ಆ ಆಶ್ರಮದ ಅಂಗಳದಲ್ಲಿ ಮಧ್ಯಾಹ್ನ ಒಣಗಲು ನವಣೆಧಾನ್ಯಗಳನ್ನು ಹರವಿದ್ದರು. ಸಾಯಂಕಾಲ ಬಿಸಿಲು ಅಲ್ಲಿಂದ ಹೋದ ಕೂಡಲೆ ಆ ಧಾನ್ಯಗಳನ್ನು ಗುಡ್ಡೆ ಹಾಕಿದರು. ಆಗ ಅಲ್ಲಿರುವ ಜಿಂಕೆಗಳು ಆ ಧಾನ್ಯದ ಗುಡ್ಡೆಗಳ ಹತ್ತಿರ ಮಲಗಿ ಮೆಲಕುಹಾಕುತ್ತಿದ್ದವು. (ಇಂತಹ ಆಶ್ರಮವನ್ನು ಆ ದಿಲೀಪನು ಸೇರಿದನು.)

**53**. **ಅ**. ಅಭ್ಯುತ್ಥಿತ=ಜ್ವಲಿಸಿದ, ಅಗ್ನಿ=ಬೆಂಕಿಯನ್ನು, ಪಿಶುನೈಃ=ಸೂಚಿಸುವ, ಪವನ= ಗಾಳಿಯಿಂದ, ಉದ್ಧೂತೈಃ=ಮೇಲಕ್ಕೆದ್ದ, ಆಹುತಿ=ಬೆಂಕಿಗೆ ಹಾಕಿದ ತುಪ್ಪ ಮೊದಲಾದ ಆಹುತಿಗಳ, ಗಂಧಿಭಿಃ=ಸುವಾಸನೆಯುಳ್ಳ, ಧೂಮೈಃ=ಹೊಗೆಗಳಿಂದ, ಆಶ್ರಮ=ಆಶ್ರಮಕ್ಕೆ, ಉನ್ಮುಖಾನ್=ಅಭಿಮುಖವಾಗಿ ಬರುತ್ತಿರುವ, ಅತಿಥೀನ್=ಅತಿಥಿಗಳನ್ನು, ಪುನಾನಾಂ= ಪವಿತ್ರಗೊಳಿಸುವ, (ಆಶ್ರಮವನ್ನು ಸೇರಿದನು),

**ತಾ**. ಆ ಆಶ್ರಮಕ್ಕೆ ಅತಿಥಿಗಳು ಬರುತ್ತಿದ್ದರು, ಅವರನ್ನು ಆಹುತಿಗಳ ಸುವಾಸನೆಯುಳ್ಳ ಗಾಳಿಯಿಂದ ಮೇಲಕ್ಕೆದ್ದ ಹೊಗೆಯು ಮೈಮೇಲೆ ವ್ಯಾಪಿಸಿ ಪವಿತ್ರವಾಗಿಸುತ್ತಿದ್ದಿತು. ಆ ಹೊಗೆಯನ್ನು ನೋಡಿದರೆ ಹೋಮದ ಅಗ್ನಿಯು ಪ್ರಜ್ವಲಿಸುತ್ತಿದೆಯೆಂಬುದು ತಿಳಿಯುತ್ತಿದ್ದಿತು. ಇಂತಹ ಆಶ್ರಮವನ್ನು ಆ ದಿಲೀಪನು ಸೇರಿದನು.

**54**. **ಅ**. ಅಥ=ಆಶ್ರಮವನ್ನು ಸೇರಿದ ತರುವಾಯ, ಸಃ=ಆ ದಿಲೀಪನು, ಯಂತಾರಂ=ಸಾರಥಿಯನ್ನು, ಧುರ್ಯಾನ್=ರಥದ ಕುದುರೆಗಳನ್ನು, ವಿಶ್ರಾಮಯ= ವಿಶ್ರಾಂತಿಗೊಳಿಸು, ಇತಿ ಹೀಗೆಂದು, ಆದಿಶ್ಯ=ಅಪ್ಪಣೆಮಾಡಿ, ಪತ್ನೀಂ=ಹೆಂಡತಿಯಾದ, ತಾಂ=ಆ ಸುದಕ್ಷಿಣೆಯನ್ನು, ರಥಾತ್=ರಥದಿಂದ, ಅವಾರೋಹಯತ್=ಇಳಿಸಿದನು, ಅವತತಾರ ಚ=ತಾನೂ ಇಳಿದನು,

**ತಾ** : ಆ ದಿಲೀಪನು ವಸಿಷ್ಠರ ಆಶ್ರಮವನ್ನು ಸೇರಿದ ತರುವಾಯ ಸಾರಥಿಯನ್ನು ಕುರಿತು ರಥಕ್ಕೆ ಕಟ್ಟಿದ ಕುದುರೆಗಳ ದಣಿವಾರಿಸೆಂದನು. ಹೆಂಡತಿಯಾದ ಆ ಸುದಕ್ಷಿಣೆಯನ್ನು ರಥದಿಂದ ಇಳಿಸಿ ತಾನೂ ಇಳಿದನು,

**55**. **ಅ**. ಸಭ್ಯಾಃ=ಸಭೆಯಲ್ಲಿ ಕೂತಿರುವ, ಗುಪ್ತತಮ=ಚೆನ್ನಾಗಿ ಕಾಪಾಡಲ್ಪಟ್ಟ, ಇಂದ್ರಿಯಾಃ=ಇಂದ್ರಿಯಗಳುಳ್ಳ, ಮುನಯಃ=ಋಷಿಗಳು, ಸಭಾರ್ಯಾಯ=ಹೆಂಡತಿಯಿಂದ

ಸಹಿತನಾದ, ಗೋಪ್ತ್ರೇ=ರಕ್ಷಕನಾದ, ನಯಚಕ್ಷುಷೇ=ನೀತಿಯೇ ಕಣ್ಣುಗಳುಳ್ಳ, ಅರ್ಹತೇ=ಶ್ರೇಷ್ಠನಾದ, ತಸ್ಮೈ=ಆ ದಿಲೀಪನಿಗೆ, ಅರ್ಹಣಾಂ=ಪೂಜೆಯನ್ನು, ಚಕ್ರುಃ= ಮಾಡಿದರು.

**ತಾ.** ಆ ಆಶ್ರಮದ ಸಭೆಯಲ್ಲಿ ಮುನಿಗಳು ಕೂತಿದ್ದರು ಅವರೆಲ್ಲ ಜಿತೇಂದ್ರಿಯರಾದುದರಿಂದ ತೇಜಸ್ವಿಗಳಾಗಿದ್ದರು. ಅವರು ಆಗ ಆ ಆಶ್ರಮಕ್ಕೆ ಹೆಂಡತಿಯೊಡನೆ ಬಂದ, ನೀತಿಶಾಸ್ತ್ರದಂತೆ ನಡೆಯುತ್ತಾ ರಾಜ್ಯವಾಳುತ್ತಿರುವ ಪೂಜ್ಯನಾದ ದಿಲೀಪ ರಾಜನಿಗೆ ಶಾಸ್ತ್ರೋಕ್ತ ರೀತಿಯಲ್ಲಿ ಪೂಜೆಗೈದರು.

**56**. **ಅ** ಸಃ=ಆ ದಿಲೀಪನು, ಸಾಯಂತನಸ್ಯ=ಸಾಯಂಕಾಲದ, ವಿಧೇಃ ಅಂತೇ=ಜಪಾದಿ ವಿಧಿಗಳ ಅನಂತರ, ಸ್ವಾಹಯಾ=ಸ್ವಾಹಾದೇವಿಯಿಂದ, ಅನ್ವಾಸಿತಂ=ಹತ್ತಿರದಲ್ಲಿ ಕುಳಿತು ಸೇವಿಸಲ್ಪಟ್ಟ, ಹವಿರ್ಭುಜಂ ಇವ=ಅಗ್ನಿಯಂತಿರುವ, ಅರುಂಧತ್ಯಾ=ಅರುಂಧತೀ ದೇವಿಯಿಂದ, ಅನ್ವಾಸಿತಂ=ಹತ್ತಿರದಲ್ಲಿ ಕುಳಿತು ಸೇವಿಸಲ್ಪಟ್ಟ, ತಪೋನಿಧಿಂ=ವಸಿಷ್ಠರನ್ನು, ದದರ್ಶ=ಕಂಡನು.

**ತಾ.** ಕಟ್ಟಿಗೆ, ಹೂವು, ಬೆಂಕಿ, ನೀರು, ಅನ್ನ, ಅಕ್ಷತೆಗಳನ್ನು ಹಿಡಿದಿರುವವನೂ, ಜಪ ಹೋಮಗಳನ್ನು ಮಾಡುವವನೂ ಆದ ಬ್ರಾಹ್ಮಣನನ್ನು ನಮಸ್ಕರಿಸಬಾರದೆಂದು ಶಾಸ್ತ್ರವಿರುವುದು. ಆದ್ದರಿಂದ ಆ ದಿಲೀಪನು ಸಾಯಂಕಾಲದ ಅನುಷ್ಠಾನವು ಮುಗಿದ ನಂತರ ಆ ವಸಿಷ್ಠರನ್ನು ಕಂಡನು. ಅವರು ಆಗ ಅರುಂಧತಿ ದೇವಿಯಿಂದ ಸೇವಿಸಲ್ಪಡುತ್ತಿದ್ದರು. ಅದರಿಂದ ಅವರು ಸ್ವಾಹಾದೇವಿಯಿಂದ ಹತ್ತಿರದಲ್ಲಿ ಕುಳಿತು ಸೇವಿಸಲ್ಪಡುವ ಅಗ್ನಿಯಂತೆ ಇದ್ದರು. ಎಂದರೆ ಅರುಂಧತಿಯು ಸ್ವಾಹಾದೇವಿಯಂತೆಯೂ ವಸಿಷ್ಠರು ಅಗ್ನಿಯಂತೆಯೂ ಪ್ರಕಾಶಿಸುತ್ತಿದ್ದರು.

**57. ಆ:** ರಾಜಾ=ದಿಲೀಪನು, ಚ=ಮತ್ತು, ಮಾಗಧೀ=ಮಗಧರಾಜನ ಮಗಳಾದ, ರಾಜ್ಞೀ=ರಾಣಿ ಸುದಕ್ಷಿಣೆಯು, ತಯೋಃ=ವಸಿಷ್ಠ=ದಂಪತಿಗಳ ಪಾದಾನ್=ಕಾಲುಗಳನ್ನು, ಜಗೃಹತುಃ=ಹಿಡಿದರು (ನಮಸ್ಕರಿಸಿದರು) ಗುರುಃ=ವಸಿಷ್ಠರು, ಚ=ಮತ್ತು, ಗುರುಪತ್ನೀ=ಗುರುಗಳಾದ ಆ ವಸಿಷ್ಠರ ಹೆಂಡತಿ ಅರುಂಧತಿಯು,

ತೌ=ಆ ದಿಲೀಪ ದಂಪತಿಗಳನ್ನು, ಪ್ರೀತ್ಯಾ=ಸಂತೋಷದಿಂದ, ಪ್ರತಿನನಂದತುಃ= ಆಶೀರ್ವಾದಗಳಿಂದ ಸನ್ಮಾನಿಸಿದರು.

**ತಾ:** ಆ ದಿಲೀಪ ಸುದಕ್ಷಿಣೆಯರು ಆ ವಸಿಷ್ಠ ದಂಪತಿಗಳನ್ನು ನೋಡಿದ ಕೂಡಲೆ ಅವರನ್ನು ನಮಸ್ಕಾರ ಮಾಡಿದರು. ಆ ವಸಿಷ್ಠ ದಂಪತಿಗಳೂ ಆ ದಿಲೀಪ–ದಂಪತಿಗಳಿಗೆ ಆಶೀರ್ವಾದಮಾಡಿ ಸನ್ಮಾನಿಸಿದರು.

**58. ಅ.** ಮುನಿಃ= ವಸಿಷ್ಠ ಮುನಿಗಳು, ಆತಿಥ್ಯಕ್ರಿಯಾ= ಅತಿಥಿಸತ್ಕಾರದಿಂದ, ಶಾಂತ= ಅಡಗಿದ, ರಥಕ್ಷೋಭ=ರಥದ ಅಲ್ಲಾಡುವಿಕೆಯಿಂದುಂಟಾದ, ಪರಿಶ್ರಮಂ=ಆಯಾಸವುಳ್ಳ, ರಾಜ್ಯಾಶ್ರಮ=ರಾಜ್ಯವೆಂಬ ಆಶ್ರಮಕ್ಕೆ, ಮುನಿಂ=ಮುನಿಯಂತಿರುವ, ತಂ=ಆ ದಿಲೀಪನನ್ನು, ರಾಜ್ಯೇ=ರಾಜ್ಯದಲ್ಲಿ, ಕುಶಲಂ=ಕ್ಷೇಮವನ್ನು, ಪಪ್ರಚ್ಛ= ಕೇಳಿದರು,

**ತಾ:** ಮುನಿಗಳು ಅತಿಥಿಯಾದ ಆ ದಿಲೀಪನಿಗೆ ಸತ್ಕಾರವನ್ನು ಮಾಡಿದುದರಿಂದ ಅವನಿಗೆ ರಥದಲ್ಲಿ ಪ್ರಯಾಣಮಾಡಿದ್ದರಿಂದಾದ ಆಯಾಸವು ನೀಗಿತು. ಅನಂತರ ವಸಿಷ್ಠರು ರಾಜ್ಯವೆಂಬ ಋಷ್ಯಾಶ್ರಮಕ್ಕೆ ಮುನಿಯಂತೆ ಇರುವ ಆ ದಿಲೀಪನನ್ನು ಕುಶಲವೇ? ಎಂದು ಕೇಳಿದರು. ಬ್ರಾಹ್ಮಣನನ್ನು ಕುಶಲವೇ? ಎಂದೂ, ಕ್ಷತ್ರಿಯನನ್ನು ಅನಾಮಯವೇ? ಎಂದೂ, ವೈಶ್ಯನನ್ನು ಕ್ಷೇಮವೇ? ಎಂದೂ, ಶೂದ್ರನನ್ನು ಆರೋಗ್ಯವೇ? ಎಂದೂ, ಪ್ರಶ್ನಿಸಬೇಕೆಂದು ಮನುವು ವಿಧಿಸಿರುವನು. ಆದರೂ ಈ ದಿಲೀಪನು ಮಹಾನುಭಾವನಾದ್ದರಿಂದ ವಸಿಷ್ಠರು ಅವನನ್ನು ಕುಶಲವೇ? ಎಂದು ಪ್ರಶ್ನೆ ಮಾಡಿದ್ದಾರೆ,

**59. ಅ:** ಅಥ=ಬಳಿಕ, ವಿಜಿತ=ಗೆಲ್ಲಲ್ಪಟ್ಟ, ಅರಿ=ಶತ್ರುಗಳ, ಪುರಃ= ಪಟ್ಟಣಗಳುಳ್ಳ, ವದತಾಂ= ಮಾತಾಡುವವರಲ್ಲಿ, ವರಃ=ಶ್ರೇಷ್ಠನಾದ, ಅರ್ಥಪತಿಃ=ದೊರೆಯಾದ ದಿಲೀಪನು, ಅರ್ಥನಿಧೇಃ=ಅಥರ್ವಣವೇದಕ್ಕೆ ಗಣಿಯಂತಿರುವ, ತಸ್ಯ=ಆ ವಸಿಷ್ಠರ, ಪುರಃ=ಮುಂದೆ, ಅರ್ಥ್ಯಾಂ=ಅರ್ಥದಿಂದ ಕೂಡಿದ, ವಾಚಂ=ಮಾತನ್ನು, ಆದದೇ=ತೆಗೆದುಕೊಂಡನು. (ಮಾತನಾಡಲಾರಂಭಿಸಿದನು).

**ತಾ:** ದಿಲೀಪನು ಅರಿಗಳ ಪಟ್ಟಣಗಳನ್ನೆಲ್ಲ ಗೆದ್ದು ತನ್ನ ವಶಪಡಿಸಿ ಕೊಂಡಿದ್ದನು. ಮಾತಾಡುವವರಲ್ಲಿಯೂ ಶ್ರೇಷ್ಠನಾಗಿದ್ದನು. ಅವನು ಅಥರ್ವಣವೇದವನ್ನು ಸಂಪೂರ್ಣವಾಗಿ ಅರಿತ ಆ ವಸಿಷ್ಠರ ಮಂದೆ ಅರ್ಥವತ್ತಾದ ಮಾತನ್ನು ಆಡಲಾರಂಭಿಸಿದನು.

**60**. **ಅ**. ಯಸ್ಯ= ಯಾವ, ಮೇ=ನನ್ನ, ಸಪ್ತಸು= ಏಳು, ಅಂಗೇಷು=ಸ್ವಾಮ್ಯಾದಿ ಅಂಗಗಳಲ್ಲಿ, ಶಿವಂ=ಕ್ಷೇಮವು, ಉಪಪನ್ನಂ, ನನು=ಉಚಿತವೆ, ತ್ವಂ=ನೀನು(ವು), ದೈವೀನಾಂ= ದೇವ ಸಂಬಂಧಿಯಾದ, ಚ=ಮತ್ತು, ಮಾನುಷೀಣಾಂ= ಮನುಷ್ಯ ಸಂಬಂಧವಾದ, ಅಪದಾಂ=ಕಷ್ಟಗಳನ್ನು, ಪ್ರತಿಹರ್ತಾ=ನಿವಾರಿಸತಕ್ಕವರು.

**ತಾ**. ಮುನಿವರ್ಯರೇ ತಾವು ಬೆಂಕಿ, ನೀರು, ಕಾಯಿಲೆ, ಕ್ಷಾಮ, ಸಾವು ಎಂಬ ಐದು ವಿಧವಾದ ದೇವಸಂಬಂಧವಾದ ಆಪತ್ತನ್ನೂ, ಅಧಿಕಾರಿಗಳು (ಆಯುಕ್ತರು), ಕಳ್ಳರು, ಶತ್ರುಗಳು, ರಾಜನ ಸ್ನೇಹಿತರು, ರಾಜನ ಅತ್ಯಾಶೆ ಎಂಬ 5 ಬಗೆಯ ಮಾನವ ಸಂಬಂಧವಾದ ಕಷ್ಟಗಳನ್ನೂ ಪರಿಹರಿಸತಕ್ಕವರು ಆದ್ದರಿಂದ ನನ್ನ ಪ್ರಭು, ಮಂತ್ರಿ, ಮಿತ್ರ, ಬೊಕ್ಕಸ, ರಾಜ್ಯ, ಕೋಟೆ, ಸೈನ್ಯ, ಎಂಬ ಸಪ್ತಾಂಗಗಳು ಕ್ಷೇಮವಾಗಿರುವುವು.

**61**. **ಅ**. ದೂರಾತ್=ದೂರದಿಂದಲೇ, ಪ್ರಶಮಿತಾರಿಭಿಃ=ನಾಶಗೊಳಿಸಲ್ಪಟ್ಟ ಶತ್ರುಗಳುಳ್ಳ, ಮಂತ್ರಕೃತಃ=ಮಂತ್ರಗಳನ್ನು ಕಂಡುಹಿಡಿದ, ತವ=ನಿಮ್ಮ ಮಂತ್ರೈಃ=ಮಂತ್ರಗಳಿಂದ, ಮೇ=ನನ್ನ ದೃಷ್ಟ=ಕಾಣುವ ಲಕ್ಷ್ಯ=ಗುರಿಯನ್ನು, ಭಿದಃ=ಭೇದಿಸುವ, ಶರಾಃ=ಬಾಣಗಳು, ಪ್ರತ್ಯಾದಿಶ್ಯಂತೇ ಇವ=ತಿರಸ್ಕರಿಸಲ್ಪಡುತ್ತವೆಯೋ ಎಂಬಂತಿವೆ.

**ತಾ:** ನೀವು ಮಂತ್ರಗಳನ್ನು ಕಂಡುಹಿಡಿದವರು ನಿಮ್ಮ ಮಂತ್ರಗಳು ಕಾಣದಿದ್ದರೂ ದೂರದಿಂದಲೇ ಶತ್ರುಗಳನ್ನು ನಾಶಗೊಳಿಸುವುವು. ನನ್ನ ಬಾಣಗಳು ಕಣ್ಣಿಗೆ ಕಾಣುವ ಗುರಿಯನ್ನು ಮಾತ್ರ ಭೇದಿಸತಕ್ಕವು. ಆದ್ದರಿಂದ ನನ್ನ ಬಾಣಗಳು ನಿಮ್ಮ ಮಂತ್ರಗಳಿಗಿಂತ ಕೀಳಾಗಿವೆ.

**62**. **ಅ:** ಹೋತಃ=ಹೋಮಮಾಡುವ ಗುರುಗಳೆ, ತ್ವಯಾ=ನಿಮ್ಮಿಂದ, ಅಗ್ನಿಷು= ಅಗ್ನಿಗಳಲ್ಲಿ, ವಿಧಿವತ್=ಶಾಸ್ತ್ರೋಕ್ತ ರೀತಿಯಿಂದ, ಆವರ್ಜಿತಂ=ಹಾಕಲ್ಪಟ್ಟ, ಹವಿಃ=ಹವಿಸ್ಸು,

ಅವಗ್ರಹ=ಮಳೆಯ ತಡೆಯಿಂದ, ವಿಶೋಷಿಣಾಂ=ಒಣಗುವ, ಸಸ್ಯಾನಾಂ=ಪೈರುಗಳಿಗೆ, ವೃಷ್ಟಿಃ=ಮಳೆಯು, ಭವತಿ=ಆಗುತ್ತದೆ,

**ತಾ:** ಗುರುಗಳೆ ತಾವು ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಎಂಬ ಅಗ್ನಿತ್ರಯಗಳಲ್ಲಿ ಶಾಸ್ತ್ರೋಕ್ತ ರೀತಿಯಿಂದ ಹವಿಸ್ಸನ್ನು ಹಾಕಿ ಹೋಮ ಮಾಡುತ್ತೀರಿ. ಅದು ಮಳೆ ಬೀಳದೆ ಒಣಗಿ ಹೋಗುತ್ತಿರುವ ಪೈರುಗಳಿಗೆ ಮಳೆಯಾಗಿ ಪರಿಣಮಿಸಿ ಅವು ಬೆಳೆಯುವಂತೆ ಮಾಡುವುದು. ಈ ವಿಷಯದಲ್ಲಿ ಮನುವು ಹೀಗೆ ಹೇಳಿರುತ್ತಾನೆ. "ಅಗ್ನೌ ಪ್ರಾಸ್ತಾಹುತಿಸ್ಸಮ್ಯಕ್ ಆದಿತ್ಯಮುಪತಿಷ್ಠತೇ! ಆದಿತ್ಯಾಜ್ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ॥" (ಬೆಂಕಿಯಲ್ಲಿ ಹೋಮಿಸಿದ ಆಹುತಿಯು ಸೂರ್ಯನನ್ನು ಸೇರುತ್ತದೆ. ಸೂರ್ಯನಿಂದ ಮಳೆ ಬರುತ್ತದೆ, ಮಳೆಯಿಂದ ಪೈರು ಬೆಳೆದು ಅನ್ನದ ಧಾನ್ಯಗಳುಂಟಾಗುವುವು. ಅದನ್ನು ತಿಂದು ಜನರು ಬದುಕುತ್ತಾರೆ).

**63**. **ಅ**. ಮದೀಯಾಃ=ನನ್ನ, ಪ್ರಜಾಃ=ಪ್ರಜೆಗಳು, ಪುರುಷಾಯುಷ=ಮನುಷ್ಯನ ಜೀವಿತ ಕಾಲಾವಧಿಯಾದ ನೂರುವರ್ಷ, ಜೀವಿನ್ಯಃ=ಬದುಕುವವರೂ, ನಿರಾತಂಕಾಃ= ಹೆದರಿಕೆಯಿಲ್ಲದವರೂ, ನಿರೀತಯಃ=ಈತಿ ಬಾಧೆಯಿಲ್ಲವರೂ ಆಗಿದ್ದಾರೆಂಬುದು, ಯತ್= ಯಾವುದೂ, ತಸ್ಯ=ಅದಕ್ಕೆ, ತ್ವತ್=ನಿಮ್ಮ, ಬ್ರಹ್ಮವರ್ಚಸಂ=ವ್ರತಾಧ್ಯಯನಾದಿಗಳು, ಹೇತುಃ=ಕಾರಣಗಳು.

**ತಾ:** ನೀವು ನಿಯಮ, ವೇದಾಧ್ಯಯನ ಸಂಪತ್ತುಳ್ಳವರಾಗಿರುವಿರಿ. ಅದರಿಂದಲೇ ನನ್ನ ಪ್ರಜೆಗಳು ಮನುಷ್ಯನ ಜೀವಿತಕಾಲವಾದ ನೂರುವರ್ಷ ಬದುಕುತ್ತಿದ್ದಾರೆ. ಯಾವ ವಿಧವಾದ ಭಯವೂ ಇಲ್ಲದವರಾಗಿದ್ದಾರೆ. ಅತಿವೃಷ್ಟಿ ಮೊದಲಾದ ಈತಿಯಿಲ್ಲದವರಾಗಿದ್ದಾರೆ. (ಅತಿವೃಷ್ಟಿ, ಅನಾವೃಷ್ಟಿ, ಇಲಿಗಳು ಮಿಡತೆಗಳು, ಗಿಣಿಗಳು, ಅತಿ ಸಮೀಪದಲ್ಲಿರುವ ರಾಜರು ಇವು ಆರು ಈತಿಬಾಧೆಗಳು. ಇವುಗಳಿಂದ ಜನಜೀವನ ಅಸ್ತವ್ಯಸ್ತವಾಗುವುದು).

**64**. **ಅ**. ಬ್ರಹ್ಮಯೋನಿನಾ=ಬ್ರಹ್ಮನ ಮಗನಾದ, ಗುರುಣಾ= ಗುರುಗಳಾದ, ತ್ವಯಾ=ನಿಮ್ಮಿಂದ, ಏವಂ=ಈ ರೀತಿ, ಚಿಂತ್ಯಮಾನಸ್ಯ=ಆಲೋಚಿಸಲ್ಪಡುತ್ತಿರುವ, ನಿರಾಪದಃ=ಕಷ್ಟಗಳಿಲ್ಲದೆ,

ಮೇ=ನನ್ನ, ಸಂಪದಃ=ಐಶ್ವರ್ಯಗಳು, ಕಥಂ=ಹೇಗೆ, ಸಾನುಬಂಧಾಃ=ಸೇರಿಕೊಂಡಿರುವುವು, ನ ಸ್ಯುಃ=ಆಗಲಾರವು.

**ತಾ**. ಗುರುಗಳೇ ಬ್ರಹ್ಮನ ಮಕ್ಕಳಾದ ತಾವು ಹೀಗೆ ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದೀರಿ. ಇದರಿಂದ ಯಾವ ಕಷ್ಟಗಳು ಇಲ್ಲದೆ ನನ್ನ ಸಂಪತ್ತುಗಳು ನಿರ್ವಿಘ್ನವಾಗಿ ಮುಂದುವರೆಯುತ್ತಿವೆ.

**65**. **ಅ**. ಕಿಂತು= ಆದರೆ, ತವ= ನಿಮ್ಮ, ಏತಸ್ಯಾಂ=ಈ, ವಧ್ವಾಂ= ಸೊಸೆಯಾದ ಸುದಕ್ಷಿಣೆಯಲ್ಲಿ, ಅದೃಷ್ಟ= ಕಾಣಲ್ಪಡದ, ಸದೃಶಪ್ರಜಂ=ಸರಿಯಾದ ಸಂತತಿಯುಳ್ಳ, ಮಾಂ=ನನ್ನನ್ನು, ಸದ್ವೀಪಾ=ದ್ವೀಪಗಳಿಂದ ಕೂಡಿದ, ಮೇದಿನೀ=ಭೂಮಿಯು, ರತ್ನಸೂಃ ಅಪಿ=ರತ್ನಗಳನ್ನು ಸುರಿಸುವುದಾದಾಗ್ಯೂ, ನ ಅವತಿ=ಸಂತೋಷಗೊಳಿಸುವುದಿಲ್ಲ,

**ತಾ.**: ಗುರುಗಳೆ ಅನೇಕ ದ್ವೀಪಗಳಿಂದ ಕೂಡಿದ ಭೂಮಿಯು ನನ್ನ ವಂಶದಲ್ಲಿದ್ದು ರತ್ನಗಳೇ ಮೊದಲಾದ ಅಮೂಲ್ಯ ವಸ್ತುಗಳನ್ನು ಕೊಡುತ್ತಿದೆ, ಆದರೆ ತನ್ನ ಸೊಸೆಯಂತಿರುವ ಈ ನನ್ನ ಪತ್ನಿಯಲ್ಲಿ ಸಂತತಿಯಾಗದಿರುವುದರಿಂದ ನನಗೆ ಆ ಭೂಮಿಯಿಂದ ಸಂತೋಷವಾಗುತ್ತಿಲ್ಲ. ಎಂದರೆ ನನಗೆ ಎಲ್ಲ ಸಂಪತ್ತುಗಳಿಗಿಂತ ಪುತ್ರಸಂಪತ್ತೇ ಹೆಚ್ಚಾದುದು.

**66**. **ಅ:** ಮತ್ತಃ ಪರಂ=ನನ್ನ ಅನಂತರ, ಪಿಂಡವಿಚ್ಛೇದ= ಪಿಂಡವು ತಪ್ಪಿ ಹೋಗುವುದನ್ನು, ದರ್ಶಿನಃ=ಊಹಿಸುವ, ವಂಶ್ಯಾಃ=ನನ್ನ ವಂಶದ ಪಿತೃಗಳು, ಶ್ರಾದ್ಧೇ=ಶ್ರಾದ್ಧದಲ್ಲಿ, ಸ್ವಧಾಸಂಗ್ರಹ=ಪಿತೃಗಳು ಭುಂಜಿಸುವ ಅನ್ನವನ್ನು ಕೂಡಿಹಾಕುವುದರಲ್ಲಿ, ತತ್ಪರಾಃ= ಆಸಕ್ತರಾಗಿ, ಪ್ರಕಾಮಭುಜಃ= ಚೆನ್ನಾಗಿ ಭುಂಜಿಸುವವರು, ನ=ಆಗುವುದಿಲ್ಲ, ನೂನಂ=ನಿಶ್ಚಯ.

**ತಾ:** ನನ್ನ ವಂಶದ ಪಿತೃಗಳು ನನಗೆ ಸಂತತಿಯಿಲ್ಲದಿರುವುದರಿಂದ ನನ್ನ ಕಾಲದ ಅನಂತರ ತಮಗೆ ಪಿಂಡದಾನ ಮಾಡುವವರಿಲ್ಲವೆಂದು ಶಂಕಿಸುತ್ತಿದ್ದಾರೆ, ಆದ್ದರಿಂದ ಅವರು, ನಾನು ಮಾಡುವ ಶ್ರಾದ್ಧ ಕಾರ್ಯದಲ್ಲಿ (ತಿಥಿಯಲ್ಲಿ) ನಾನು ಕೊಟ್ಟ ಪಿಂಡದಲ್ಲಿ ಕೆಲವು ಭಾಗವನ್ನು ಆಪದ್ಧನದಂತೆ ಕೂಡಿಹಾಕುತ್ತಲಿದ್ದಾರೆ. ಆದ್ದರಿಂದ ಅವರು ಶ್ರಾದ್ಧದಲ್ಲಿ ನಿಜವಾಗಿಯೂ ತೃಪ್ತಿಯಾಗುವಷ್ಟು ಭುಂಜಿಸುತ್ತಿಲ್ಲ.

**67**. **ಅ**. ಮತ್ಪರಂ=ನನ್ನ ತರುವಾಯ, ದುರ್ಲಭಂ=ಸಿಕ್ಕುವುದು ಕಷ್ಟವೆಂದು, ಮತ್ವಾ=ತಿಳಿದು, ಮಯಾ=ನನ್ನಿಂದ, ಆವರ್ಜಿತಂ=ಕೊಡಲ್ಪಟ್ಟ, ಪಯಃ=ತರ್ಪಣದ ನೀರು, ಪೂರ್ವೈಃ= ಹಿಂದಿನ ಪಿತೃಗಳಿಂದ, ಸ್ವನಿಃಶ್ವಾಸೈಃ=ತಮ್ಮ ನಿಟ್ಟುಸಿರುಗಳಿಂದ, ಕವೋಷ್ಣಂ=ಸ್ವಲ್ಪ ಬಿಸಿಯಾಗಿ, ಉಪಭುಜ್ಯತೇ=ಕುಡಿಯಲ್ಪಡುತ್ತದೆ, ನೂನಂ=ನಿಶ್ಚಯ.

**ತಾ**. ನಾನು ಪಿತೃಗಳಿಗೆ ತರ್ಪಣವನ್ನು ಮಾಡುವಾಗ ನೀರನ್ನು ಕೊಡುವೆನಷ್ಟೇ, ಅದನ್ನು ನನ್ನ ಪಿತೃಗಳು ನನ್ನ ತರುವಾಯ ಕೊಡುವವರಿಲ್ಲವಾದ್ದರಿಂದ ತಮಗೆ ಸಿಕ್ಕುವುದು ಕಷ್ಟವೆಂದು ತಿಳಿದು ವ್ಯಥೆಗೊಳ್ಳುವರು. ಆದುದರಿಂದ ಅವರ ಉಸಿರು ಬಿಸಿಯಾಗುವುದು. ಅಂತಹ ಬಿಸಿಯಾದ ಉಸಿರಿನಿಂದ ತರ್ಪಣೋದಕವು ಸ್ವಲ್ಪ ಬಿಸಿಯಾಗುವುದು. ಅಂತಹ ನೀರನ್ನು ನಿಜವಾಗಿಯೂ ಅವರು ಕುಡಿಯುವರು.

**68**. **ಅ**. ಇಜ್ಯಾ=ಯಾಗದಿಂದ, ವಿಶುದ್ಧ=ಪವಿತ್ರವಾದ, ಆತ್ಮಾ=ಮನಸ್ಸುಳ್ಳ, ಪ್ರಜಾಲೋಪ= ಸಂತತಿಯಿಲ್ಲದಿರುವುದರಿಂದ, ನಿಮೀಲಿತಃ=ಕುರುಡನಂತಿರುವ, ಸಃ=ಆ, ಅಹಂ=ನಾನು, ಪ್ರಕಾಶಃ ಚ=ಬೆಳಕಾಗಿಯೂ, ಅಪ್ರಕಾಶಃ ಚ=ಬೆಳಕಿಲ್ಲದೆಯೂ ಇರುವ ಲೋಕಾಲೋಕಃ= ಲೋಕಾಲೋಕವೆಂಬ, ಅಚಲಃ ಇವ=ಪರ್ವತದಂತೆ ಇದ್ದೇನೆ.

**ತಾ**. ಲೋಕಾಲೋಕ ಪರ್ವತವು ಒಳಗಡೆ ಅತ್ಯಂತ ಸೂರ್ಯಪ್ರಕಾಶವು ಬೀಳುವುದರಿಂದ ಬೆಳಕಾಗಿರುವುದು. ಹೊರಗಡೆ ಸೂರ್ಯನ ಪ್ರಕಾಶವು ಬೀಳದಿರುವುದರಿಂದ ಕತ್ತಲಾಗಿರುವುದು. ಅಂತೆಯೇ ನನ್ನ ಮನಸ್ಸು ಯಾಗ ಮಾಡುವುದರಿಂದ ದೇವಋಣ ಪರಿಹಾರವಾಗಿ ಶುದ್ಧವಾಗಿರುವುದು. ಸಂತತಿ ಇಲ್ಲದಿರುವುದರಿಂದ ಪಿತೃಋಣ ಪರಿಹಾರವಾಗದೆ ವ್ಯಥೆಗೊಂಡಿರುವುದು. ಹೀಗೆ ನಾನು ಲೋಕಾಲೋಕ ಪರ್ವತದಂತಿದ್ದೇನೆ.

**69**. **ಅ** : ತಪಃ=ತಪಸ್ಸು, ದಾನ ಇವುಗಳೇ, ಸಮುದ್ಭವಂ=ಕಾರಣವಾದ, ಪುಣ್ಯಂ=ಪುಣ್ಯವು, ಲೋಕಾಂತರ=ಇನ್ನೊಂದು ಲೋಕದಲ್ಲಿ, ಸುಖಂ=ಸೌಖ್ಯವನ್ನುಂಟುಮಾಡುವುದು, ಶುದ್ಧವಂಶ್ಯಾ=ಪರಿಶುದ್ಧ ಕುಲದಲ್ಲಿ ಜನಿಸಿದ, ಸಂತತಿಃ=ಪುತ್ರಾದಿ ಸಂತತಿಯು, ಪರತ್ರ=ಇನ್ನೊಂದು ಲೋಕದಲ್ಲಿ, ಚ=ಮತ್ತು, ಇಹ=ಈ ಲೋಕದಲ್ಲಿ, ಶರ್ಮಣೇ ಹಿ=ಸುಖವನ್ನುಂಟುಮಾಡಲು ಕಾರಣವಾಗುವುದಷ್ಟೆ.

**ತಾ :** ಕೃಚ್ಛ್ರ ಚಾಂದ್ರಾಯಣಾದಿತಪಸ್ಸು, ಗೋ, ಭೂಮಿ ಮೊದಲಾದವುಗಳ ದಾನ ಇವುಗಳಿಂದ ಉಂಟಾದ ಪುಣ್ಯದಿಂದ ಪರಲೋಕದಲ್ಲಿ ಮಾತ್ರ ಸುಖವು ದೊರೆಯುವುದು. ಈ ಲೋಕದಲ್ಲಿ ಅಲ್ಲ. ಒಳ್ಳೆವಂಶದಲ್ಲಿ ಹುಟ್ಟಿದ ಪುತ್ರನಿಂದ ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಸೌಖ್ಯವುಂಟಾಗುವುದು.

**70 ಅ :** ವಿಧಾತಃ=ಸೃಷ್ಟಿಸುವ ಗುರುಗಳೇ, ತಯಾ=ಆ ಸಂತತಿಯಿಂದ, ಹೀನಂ= ರಹಿತನಾದ, ಮಾಂ=ನನ್ನನ್ನು, ಸ್ವಯಂ=ಸ್ವಂತವಾಗಿ, ಸ್ನೇಹಾತ್=ಪ್ರೀತಿಯಿಂದ, ಸಿಕ್ತಂ=ನೀರನ್ನರೆದು ಬೆಳೆಸಿದ, ವಂಧ್ಯಂ=ಹಣ್ಣನ್ನು ಬಿಡದ, ಆಶ್ರಮವೃಕ್ಷಕಂ=ಇವ ಆಶ್ರಮದಲ್ಲಿರುವ ಗಿಡದಂತೆ, ಪಶ್ಯನ್= ನೋಡುತ್ತ, ಕಥಂ= ಹೇಗೆ, ನ ದೂಯಸೇ=ವ್ಯಥೆಗೊಳ್ಳುವವರಾಗುವುದಿಲ್ಲ,

**ತಾ:** ಸೃಷ್ಟಿಸುವ ಸಾಮರ್ಥ್ಯವುಳ್ಳ ಗುರುಗಳೇ ನಾನು ನಿಮ್ಮವನಾಗಿದ್ದೇನೆ. ನೀವು ನಿಮ್ಮ ಆಶ್ರಮದಲ್ಲಿ ಒಂದು ಗಿಡವನ್ನು ಪ್ರೀತಿಯಿಂದ ನಿತ್ಯವೂ ನೀರನ್ನು ಹಾಕಿ ಬೆಳೆಸಿ, ಅದು ಕಾಯಿ ಹಣ್ಣುಗಳನ್ನೀಯದೆ ಬಂಜೆಯಾದರೆ ಅದರಿಂದ ನಿಮಗೆ ವ್ಯಥೆಯಾಗುವುದಿಲ್ಲವೆ? ಅದರಂತಿರುವ ನನಗೆ ಸಂತತಿಯಿಲ್ಲದಿರುವುದನ್ನು ನೋಡಿ ನಿಮಗೆ ವ್ಯಥೆಯಾಗುವುದಿಲ್ಲವೆ?

**71. ಅ :** ಭಗವನ್=ಪೂಜ್ಯರೆ, ಮೇ=ನನ್ನ, ಅತ್ಯಂ=ಕೊನೆಯದಾದ ಪಿತೃ ಋಣವು, ಅನಿರ್ವಾಣಸ್ಯ=ಸ್ನಾನವಿಲ್ಲದ, ದಂತಿನಃ=ಆನೆಗೆ, ಅರುಂತುದಂ=ಮರ್ಮಸ್ಥಳಕ್ಕೆ ವ್ಯಥೆಯನ್ನುಂಟುಮಾಡುವ, ಆಲಾನಂ=ಕಟ್ಟುವ ಕಂಬದಂತೆ, ಅಸಹ್ಯಪೀಡಂ=ಸಹಿಸಲಾಗದ ವ್ಯಥೆಯುಳ್ಳದ್ದನ್ನಾಗಿ, ಅವೇಹಿ=ತಿಳಿಯಿರಿ..

**ತಾ :** ಪೂಜ್ಯ ಗುರುಗಳೆ ಸಂತತಿಯಿಲ್ಲದಿರುವುದರಿಂದ ನಾನು ಪಿತೃ ಋಣವುಳ್ಳವನಾಗಿದ್ದೇನೆ. ಸ್ನಾನವಿಲ್ಲದ ಆನೆಯನ್ನು ಒಂದೇ ಸ್ಥಳದಲ್ಲಿ ಕಟ್ಟಿದರೆ ಅದಕ್ಕೆ ಆ ಕಟ್ಟುವ ಕಂಬವು ಅತ್ಯಂತ ವ್ಯಥೆಯನ್ನುಂಟುಮಾಡುವುದು. ಹಾಗೆಯೇ ನನಗೆ ಆ ಪಿತೃಋಣದಿಂದ ಮನಸ್ಸಿಗೆ ಬಹಳ ವ್ಯಥೆಯಾಗಿದೆ.

**72. ಅ :** ತಾತ=ತಂದೆಯಂತಿರುವ (ಪೂಜ್ಯರಾದ) ಗುರುಗಳೆ, ಹಿ=ಯಾವ ಕಾರಣದಿಂದ, ಇಕ್ಷ್ವಾಕೂಣಾಂ=ಇಕ್ಷಾಕುವಂಶದ ರಾಜರ, ದುರಾಪೇ=ಹೊಂದಲಶಕ್ಯವಾದ, ಅರ್ಥೇ=

ಪ್ರಯೋಜನದಲ್ಲಿ, ಸಿದ್ಧಯಃ=ಕಾರ್ಯಸಿದ್ಧಿಗಳು, ತ್ವದಧೀನಾಃ=ನಿಮ್ಮ ಅಧೀನವಾದುವೋ, ಆದ್ದರಿಂದ, ಯಥಾ=ಹೇಗೆ, ತಸ್ಮಾತ್=ಆ ಪಿತೃಋಣದಿಂದ, ಮುಚ್ಯೇ=ಬಿಡಲ್ಪಡುವನೊ, ತಥಾ=ಹಾಗೆ, ಸಂವಿಧಾತುಂ=ಮಾಡುವುದಕ್ಕೆ, ಆರ್ಹಸಿ=ಯೋಗ್ಯರಾಗಿದ್ದೀರಿ.

**ತಾ :** ಗುರುಗಳೆ ತಾವು ನಮ್ಮ ಇಕ್ಷ್ವಾಕು ವಂಶದ ರಾಜರಿಗೆ ಅಸಾಧ್ಯವಾದ ಪ್ರಯೋಜನವನ್ನೂ ಸಾಧಿಸಿಕೊಡತಕ್ಕವರು. ಆದ್ದರಿಂದ ಆ ವಂಶದ ರಾಜನಾದ ನಾನು ಆ ಪಿತೃಋಣದಿಂದ ಬಿಡುಗಡೆಯನ್ನು ಹೊಂದುವಂತೆ ಮಾಡಿರಿ.

**73. ಅ.** ರಾಜ್ಞಾ=ದಿಲೀಪ ರಾಜನಿಂದ, ಇತಿ=ಈ ರೀತಿ, ವಿಜ್ಞಾಪಿತಃ=ಬಿನ್ನವಿಸಲ್ಪಟ್ಟ, ಧ್ಯಾನ=ಧ್ಯಾನದಿಂದ, ಸ್ತಿಮಿತ=ಅಲ್ಲಾಡದಿರುವ, ಲೋಚನಃ=ಕಣ್ಣುಗಳುಳ್ಳ, ಋಷಿಃ=ವಸಿಷ್ಠರು, ಕ್ಷಣಮಾತ್ರಂ=ಸ್ವಲ್ಪ ಹೊತ್ತು, ಸುಪ್ತಮೀನಃ=ನಿದ್ರಿಸಿದ ಮೀನುಗಳುಳ್ಳ, ಹ್ರದಃ ಇವ=ಮಡುವಿನಂತೆ, ತಸ್ಥೌ=ಇದ್ದರು.

**ತಾ:** ರಾಜನು ಈ ರೀತಿ ಬಿನ್ನವಿಸಿದ ಕೂಡಲೆ ವಸಿಷ್ಠರು ಅವನಿಗೆ ಸಂತತಿಯಾಗದಿರಲು ಕಾರಣವೇನೆಂದು ಆಲೋಚಿಸುತ್ತ  ಕಣ್ಣುಗಳು ಚಲಿಸದಂತೆ ಇದ್ದರು. ಆಗ ಅವರು ಮೀನುಗಳು ನಿದ್ರಿಸಿರುವುದರಿಂದ ಅಲ್ಲಾಡದೆ ಇರುವ ಮಡುವಿನಂತೆ ಸ್ವಲ್ಪ ಹೊತ್ತು ಕಂಡರು. ಎಂದರೆ ವಸಿಷ್ಠರ ಕಣ್ಣುಗಳು ಮೀನಿನಂತೆಯೂ, ಅವರು ಮಡುವಿನಂತೆಯೂ ಇದ್ದರು. ವಸಿಷ್ಠರು ಸ್ವಲ್ಪ ಹೊತ್ತು ಧ್ಯಾನಮಗ್ನರಾದರು.

**74. ಅ :** ಸಃ=ಆ ಮುನಿಯ, ಪ್ರಣಿಧಾನೇನ=ಧ್ಯಾನದಿಂದ (ಒಮ್ಮನಸ್ಸಿನಿಂದ) ಭಾವಿತಾತ್ಮಾ=ಶುದ್ಧಮನಸ್ಸುಳ್ಳವನಾಗಿ, ಭುವಃ=ಭೂವಿಗೆ, ಭರ್ತುಃ=ಒಡೆಯನಾದ ದಿಲೀಪನ, ಸಂತತೇಃ=ಸಂತಾನದ, ಸ್ತಂಭಕಾರಣಂ=ತಡೆಗೆ ಕಾರಣವನ್ನು, ಅಪಶ್ಯತ್=ತಿಳಿಸಿದನು, ಅಥ=ತರುವಾಯ, ಏನಂ=ಈ ದಿಲೀಪನನ್ನು, ಪ್ರತ್ಯಬೋಧಯತ್= ಎಚ್ಚರಿಸಿದನು,

**ತಾ:** ಆ ವಸಿಷ್ಠರು ಒಮ್ಮನಸ್ಸಿನಿಂದ ಆಲೋಚಿಸಿದರು, ದಿಲೀಪನಿಗೆ ಪುತ್ರೋತ್ಪತ್ತಿಯಾಗದಿರಲು ಕಾರಣಗಳನ್ನು ತಿಳಿದರು, ಅನಂತರ ರಾಜನಿಗೆ ಈ ರೀತಿ ತಿಳಿಸಿದರು.

**75. ಅ:** ಪುರಾ=ಹಿಂದೆ, ಶಕ್ರಂ= ಇಂದ್ರನನ್ನು, ಉಪಸ್ಥಾಯ=ಸೇವಿಸಿ ಉರ್ವೀಂ=ಪ್ರತಿ ಭೂಮಿಯನ್ನು ಕುರಿತು, ಯಾಸ್ಯತಃ=ಹೋಗುತ್ತಿರುವ, ತವ=ನಿನ್ನ, ಪಥಿ=ದಾರಿಯಲ್ಲಿ,

ಸುರಭಿಃ=ಕಾಮಧೇನುವು, ಕಲ್ಪತರು=ಕಲ್ಪವೃಕ್ಷದ, ಛಾಯಾಂ=ನೆರಳನ್ನು, ಆಶ್ರಿತಾ= ಆಶ್ರಯಿಸಿರುವುದು, ಆಸೀತ್=ಆಗಿತ್ತು,

**ತಾ:** ದೊರೆಯೆ ಹಿಂದೆ ನೀನು ದೇವಲೋಕಕ್ಕೆ ತೆರಳಿ ದೇವೇಂದ್ರನನ್ನು ಸೇವಿಸಿ ಭೂಲೋಕಕ್ಕೆ ಬರುತ್ತಿದ್ದೆ, ಆಗ ಕಾಮಧೇನುವು ನೀನು ಬರುತ್ತಿರುವ ದಾರಿಯಲ್ಲಿ ಕಲ್ಪವೃಕ್ಷದ ನೆರಳಿನಲ್ಲಿ ಮಲಗಿತ್ತು.

**76.** **ಅ.** ಋತುಸ್ನಾತಾಂ=ರಜಸ್ವಲೆಯಾಗಿ ಸ್ನಾನಮಾಡಿದ ಇಮಾಂ=ಈ, ರಾಜ್ಞೀಂ=ರಾಣಿಯಾದ ಸುದಕ್ಷಿಣೆಯನ್ನು ಧರ್ಮಲೋಪಭಯಾತ್=ಋತು ಕಾಲಸಂಗ ರೂಪವಾದ ಧರ್ಮವು ಹಾಳಾಗುವ ಹೆದರಿಕೆಯಿಂದ, ಸ್ಮರನ್=ನೆನೆಯುತ್ತ, ಪ್ರದಕ್ಷಿಣ–ಕ್ರಿಯಾಹರ್ಾಯಾಂ=ಪ್ರದಕ್ಷಿಣೆಮಾಡಲು ಯೋಗ್ಯವಾದ, ತಸ್ಯಾಂ=ಆ ಕಾಮಧೇನುವಿನಲ್ಲಿ ತ್ವಂ=ನೀನು, ಸಾಧು ಪ್ರದಕ್ಷಿಣೆ ರೂಪವಾದ, ಒಳ್ಳೆಯ ಕಾರ್ಯವನ್ನು, ನ ಆಚರಃ=ಮಾಡಲಿಲ್ಲ

**ತಾ:** ನೀನು ದೇವಲೋಕದಿಂದ ಭೂಮಿಗೆ ಬರುವಾಗ ಈ ರಾಣಿಯು ರಜಸ್ವಲೆಯಾಗಿ ಸ್ನಾನಮಾಡಿದ್ದಾಳೆ ಎಂಬುದನ್ನು ಜ್ಞಾಪಿಸಿಕೊಂಡೆ. ತಡ ಮಾಡಿದರೆ ಋತುಕಾಲದಲ್ಲಿ ಪತ್ನಿಯ ಸಂಗವನ್ನು ಮಾಡಬೇಕೆಂಬ ನಿಯಮವು ಕೆಡುವುದೆಂದು ಹೆದರಿದೆ. ಅದರಿಂದ ಪ್ರದಕ್ಷಿಣೆ ಮಾಡಲು ಯೋಗ್ಯಳಾದ ಕಾಮಧೇನುವನ್ನು ಪ್ರದಕ್ಷಿಣೆ ಮಾಡಿ ವಂದಿಸದೆ ಭೂಮಿಗೆ ಬಂದೆ.

***ವಿಶೇಷ ವಿಷಯ :*** ಹೆಂಗಸು ರಜಸ್ವಲೆಯಾದ ದಿನದಿಂದ ಹದಿನಾರು ದಿನಗಳು ಋತುಕಾಲವೆನ್ನಿಸಿಕೊಳ್ಳುವುದು. ಈ ಕಾಲದಲ್ಲಿ ಆರೋಗ್ಯವಂತನಾದ ಗಂಡನು ಅವಳನ್ನು ಸೇರಬೇಕು. ಹಾಗೆ ಸೇರದಿದ್ದಲ್ಲಿ ಆ ಗಂಡನು ನಿಶ್ಚಯವಾಗಿಯೂ ಬಾಲಹತ್ಯೆ, ಗೋಹತ್ಯೆ ದೋಷಗಳಿಗೆ ಒಳಗಾಗುವನು. ದಾರಿಯಲ್ಲಿ ಹೋಗುವಾಗ ಮಣ್ಣು, ಹಸು, ದೇವತೆ, ಬ್ರಾಹ್ಮಣ, ತುಪ್ಪ, ಜೇನು, ಚೌಕ (ನಾಲ್ಕು ದಾರಿ ಕೂಡುವ ಸ್ಥಳ), ಪ್ರಸಿದ್ಧವಾದ ಅಶ್ವತ್ಥ ಮೊದಲಾದ ಮರಗಳು ಇವುಗಳಿಗೆ ಪ್ರದಕ್ಷಿಣೆ ಮಾಡಿ ಮುಂದೆ ಹೋಗಬೇಕೆಂದು ಧರ್ಮಶಾಸ್ತ್ರವಿರುವುದು.

**77. ಅ:** ಯಸ್ಮಾತ್=ಯಾವ ಕಾರಣದಿಂದ, ಮಾಂ=ನನ್ನನ್ನು, ಅವಜಾನಾಸಿ=ಅವಮಾನ ಮಾಡುತ್ತೀಯೋ, ಆತಃ=ಈ ಕಾರಣದಿಂದ, ಮತ್ಪ್ರಸೂತಿಂ=ನನ್ನ ಸಂತತಿಯನ್ನು,

ಅನಾರಾಧ್ಯ=ಸೇವಿಸದೆ, ಪ್ರಜಾ=ಸಂತತಿಯು ತೇ=ನಿನಗೆ, ನ ಭವಿಷ್ಯತಿ=ಆಗುವುದಿಲ್ಲ, ಇತಿ=ಹೀಗೆಂದು, ಸಾ=ಆ ಕಾಮಧೇನುವು, ತ್ವಾಂ=ನಿನ್ನನ್ನು, ಶಶಾಪ= ಶಪಿಸಿತು,

**ತಾ:** ಮಹಾರಾಜ ನೀನು ನನ್ನನ್ನು ಪ್ರದಕ್ಷಿಣೆ ಮಾಡದೆ ಅವಮಾನ ಮಾಡಿರುವೆ. ಆದ್ದರಿಂದ ನಿನಗೆ ನನ್ನ ಸಂತತಿಯನ್ನು ಸೇವಿಸದೆ ಸಂತತಿಯಾಗುವುದಿಲ್ಲ ಎಂದು ಆ ಕಾಮಧೇನುವು ನಿನಗೆ ಶಾಪಕೊಟ್ಟಿತು.

**78**. **:** **ಅ**. ರಾಜನ್=ದೊರೆಯೆ, ಆಕಾಶಗಂಗಾಯಾಃ=ಆಕಾಶದಲ್ಲಿರುವ ಗಂಗೆಯ, ಉದ್ದಾಮದಿಗ್ಗಜೇ=ಹಗ್ಗವಿಲ್ಲದ ದಿಗ್ಗಜಗಳುಳ್ಳ, ಸ್ರೋತಸಿ=ಪ್ರವಾಹವು, ನದತಿ=ಶಬ್ದ ಮಾಡುತ್ತಿರಲು, ಸಃ=ಆ ಕಾಮಧೇನುವು ಕೊಟ್ಟ, ಶಾಪಃ=ಶಾಪವು, ತ್ವಯಾ=ನಿನ್ನಿಂದ, ಚ=ಮತ್ತು ಸಾರಥಿನಾ=ಸಾರಥಿಯಿಂದ, ನ ಶ್ರುತಃ=ಕೇಳಲ್ಪಡಲಿಲ್ಲ,

**ತಾ :** ರಾಜನೆ ಆ ಕಾಮಧೇನುವು ಶಾಪವನ್ನು ಕೊಡುವಾಗ ಆಕಾಶ ಗಂಗೆಯ ಪ್ರವಾಹದಲ್ಲಿ ದಿಗ್ಗಜಗಳು ಸ್ವೇಚ್ಛೆಯಿಂದ ವಿಹಾರ ಮಾಡುತ್ತಿದ್ದುವು. ಅದರಿಂದ ಬಹಳ ಗದ್ದಲವಾಗುತ್ತಿದ್ದಿತು. ಆದ ಕಾರಣ ಶಾಪವು ನಿನಗಾಗಲಿ ನಿನ್ನ ಸಾರಥಿಗಾಗಲಿ ಕೇಳಿಸಲಿಲ್ಲ.

**79**. **ಅ :** ತದವಜ್ಞಾನಾತ್=ಆ ಕಾಮಧೇನುವಿಗೆ ಅವಮಾನ ಮಾಡಿರುವುದರಿಂದ, ಆತ್ಮನಃ=ನಿನ್ನ, ಈಪ್ಸಿತಂ=ಅಭಿಲಾಷೆಯನ್ನು, ಸಾರ್ಗಲಂ=ಅಡ್ಡಿಯಿಂದ ಸಹಿತವಾದುದನ್ನಾಗಿ, ವಿದ್ಧಿ=ತಿಳಿ, ಹಿ=ಯಾವ ಕಾರಣದಿಂದ, ಪೂಜ್ಯ–ಪೂಜಾವ್ಯತಿಕ್ರಮಃ=ಪೂಜೆ ಮಾಡಲು ಯೋಗ್ಯರಾದವರ ಪೂಜೆಯ ಉಲ್ಲಂಘನೆಯು, ಶ್ರೇಯಃ= ಒಳಿತನ್ನು ಪ್ರತಿಬಧ್ನಾತಿ= ತಡೆಯುತ್ತದೆ.

**ತಾ :** ಲೋಕದಲ್ಲಿ ಯಾರು ಪೂಜೆಮಾಡಲು ಯೋಗ್ಯರೋ ಅವರನ್ನು ಪೂಜಿಸಲೇಬೇಕು. ಹಾಗೆ ಪೂಜೆ ಮಾಡದಿದ್ದಲ್ಲಿ ಆಗಬೇಕಾದ ಇಷ್ಟಾರ್ಥವು ನೆರವೇರುವುದಿಲ್ಲ. ಅದರಂತೆ ನೀನು ಆ ಕಾಮಧೇನುವನ್ನು ಪೂಜಿಸದೆ ಇದ್ದುದರಿಂದ ನಿನ್ನ ಮನೋರಥವು ಕೈಗೂಡಲಿಲ್ಲ.

**80**. **ಅ. :** ಸಾ=ಆ ಕಾಮಧೇನುವು, ಇದಾನೀಂ=ಈಗ, ದೀರ್ಘಸತ್ರಸ್ಯ=ಬಹಳ ಕಾಲ ಮಾಡುವ ಯಾಗವುಳ್ಳ, ಪ್ರಚೇತಸಃ=ವರುಣನ, ಹವಿಷೇ=ಹಾಲು ಮೊಸರು ತುಪ್ಪ

ಮೊದಲಾದ ಹವಿಸ್ಸಿಗಾಗಿ, ಭುಜಂಗ=ಹಾವುಗಳಿಂದ, ಪಿಹಿತ=ಮುಚ್ಚಲ್ಪಟ್ಟ, ದ್ವಾರಂ=ಬಾಗಿಲುಳ್ಳ, ಪಾತಾಲಂ=ಪಾತಾಳಲೋಕದಲ್ಲಿ ಅಧಿತಿಷ್ಠತಿ=ವಾಸಮಾಡುತ್ತಿದೆ.

**ತಾ:** ವರುಣನು ಪಾತಾಳಲೋಕದಲ್ಲಿ ಯಾಗ ಮಾಡುತ್ತಿರುವನು. ಆ ಯಾಗವು ಬಹಳ ಕಾಲ ನಡೆಯುವುದು. ಆ ಕಾಮಧೇನುವು ಈಗ ಆ ವರುಣನ ಯಾಗಕ್ಕೆ ಬೇಕಾಗಿರುವ ಹಾಲು, ಮೊಸರು, ತುಪ್ಪ ಮೊದಲಾದ ಹವಿಸ್ಸನ್ನು ಒದಗಿಸಬೇಕಾಗಿದೆ. ಅದರಿಂದ ಅದು ಪಾತಾಳದಲ್ಲಿದೆ.

**81**. **ಅ :** ತದೀಯಾಂ=ಆ ಕಾಮಧೇನುವಿನ ಸುತಾಂ=ಮಗಳಾದ ನಂದಿನಿಯನ್ನು, ಸುರಭೇಃ=ಕಾಮಧೇನುವಿಗೆ, ಪ್ರತಿನಿಧಿಂ=ಕೃತ್ವಾ ಬದಲಾಗಿಮಾಡಿ, ಶುಚಿಃ=ಶುದ್ದನಾಗಿ, ಸಪತ್ನೀಕಃ= ಹೆಂಡತಿಯಿಂದ ಸಹಿತನಾಗಿ, ಆರಾಧಯ=ಪೂಜಿಸು, ಹಿ=ಯಾವ ಕಾರಣದಿಂದ, ಸಾ= ಆ ನಂದಿನಿಯು, ಪ್ರೀತಾ=ಸಂತೋಷಗೊಂಡದ್ದಾಗಿ, ಕಾಮದುಘಾ=ಇಷ್ಟಾರ್ಥವನ್ನು ಕೊಡತಕ್ಕದ್ದೋ,

**ತಾ :** ದೊರೆಯ ನೀನು ಈಗ ಆ ಕಾಮಧೇನುವು ಪೂಜಿಸಲು ಸಿಕ್ಕದಿರುವುದರಿಂದ, ಅದರ ಮಗಳಾದ ನಂದಿನಿಯನ್ನು ಆ ಕಾಮಧೇನುವಿಗೆ ಬದಲಾಗಿ ಶುದ್ಧನಾಗಿ ಹೆಂಡತಿಯೊಡನೆ ಪೂಜಿಸು. ಅದು ಕೂಡ ಸಂತೋಷಗೊಂಡಲ್ಲಿ ನಿನ್ನ ಇಷ್ಟಾರ್ಥವನ್ನು ಪೂರೈಸುವುದು.

**82**. **ಅ :** ಇತಿ ವಾದಿನಃ ಏವ=ಹೀಗೆ ಹೇಳುತ್ತಿರುವ, ಹೋತುಃ=ಹೋಮ ಮಾಡುವ, ಅಸ್ಯ=ಈ ವಸಿಷ್ಠರ, ಆಹುತಿಸಾಧನಂ=ಅಹುತಿಗಳಿಗೆ ಕಾರಣವಾದ ನಂದಿನೀ ನಾಮ=ನಂದಿನೀ ಎಂದು ಪ್ರಸಿದ್ಧವಾದ, ಅನಿಂದ್ಯಾ=ಶ್ಲಾಘ್ಯವಾದ, ಧೇನುಃ=ಹಸುವು, ವನಾತ್=ಕಾಡಿನಿಂದ ಆವವೃತೇ=ಹಿಂದಕ್ಕೆ ಬಂದಿತು.

**ತಾ:** ಆ ಶ್ರೇಷ್ಠವಾದ ನಂದಿನಿಯು ಹೋಮಮಾಡುವ ವಸಿಷ್ಠರಿಗೆ ಹೋಮಕ್ಕೆ ಉಪಯೋಗಿಸುವ (ಹಾಲು) ತುಪ್ಪ ಮೊದಲಾದುವನ್ನು ಕೊಡುತ್ತಿದ್ದಿತು. ಅದು ಆಗ ಕಾಡಿಗೆ ಮೇಯಲು ಹೋಗಿದ್ದಿತು. ಮಾತಾಡುತ್ತಿರುವಾಗಲೇ ಅದು ಕಾಡಿನಿಂದ ಹಿಂದಕ್ಕೆ ಬಂದಿತು. ಇದರಿಂದ ಆ ರಘುರಾಜನ ಇಷ್ಟಾರ್ಥವು ಬೇಗನೆ ಕೈಗೂಡುವುದೆಂಬುದು ಸೂಚಿತವಾಯಿತು.

**83**. **ಅ** : ಪಲ್ಲವ=ಚಿಗುರಿನಂತೆ, ಸ್ನಿಗ್ಧ=ಮನೋಹರವೂ, ಪಾಟಲಾ=ಕೆಂಪಗೂ ಆಗಿರುವ ಲಲಾಟ=ಹಣೆಯಲ್ಲಿ ಉದಯಂ=ಹುಟ್ಟುವಿಕೆಯುಳ್ಳ, ಅಭುಗ್ನಂ=ಸ್ವಲ್ಪ ಸೊಟ್ಟಗಿರುವ, ಶ್ವೇತ=ಬೆಳ್ಳಗಿರುವ, ರೋಮ=ಕೂದಲುಗಳೆಂಬ, ಅಂಕಂ=ಚಿಹ್ನೆಯನ್ನು ಬಿಭ್ರತೀ=ಧರಿಸಿರುವ, ನವಂ=ಹೊಸಬನಾದ, ಶಶಿನಂ=ಚಂದ್ರನನ್ನು ಬಿಭ್ರತೀ=ಧರಿಸಿರುವ, ಸಂಧ್ಯಾ ಇವ=ಸಂಧ್ಯಾಕಾಲದಂತಿರುವ, (ಹಸುವು ಕಾಡಿನಿಂದ ಹಿಂದಿರುಗಿತು).

**ತಾ:** ಆ ಹಸುವು ಎಳೆ ಚಿಗುರಿನಂತೆ ನುಣುಪಾಗಿಯೂ, ಕೆಂಪಗೂ ಇದ್ದಿತು. ಅದರ ಹಣೆಯಲ್ಲಿ ಬಿಳಿಯ ಕೂದಲಿನ ಚಿಹ್ನೆಯಿದ್ದಿತು. (ಬೊಟ್ಟು ಇದ್ದಿತು). ಅದು ಆಗ ತಾನೆ ಉದಯಿಸಿದ ಪಾಡ್ಯದ ಚಂದ್ರನಿರುವ ಸಂಜೆಯಂತಿದ್ದಿತು. ಎಂದರೆ ಧೇನುವು ಸಂಧ್ಯಾಕಾಲದಂತೆಯೂ, ಹಣೆಯಲ್ಲಿರುವ ರೋಮದ ಬೊಟ್ಟು ಪಾಡ್ಯದ ಚಂದ್ರನಂತೆಯೂ ಇದ್ದಿತು.

**84**. **ಅ** : ಕೋಷ್ಣೇನ=ಸ್ವಲ್ಪ ಬಿಸಿಯಾದ, ಅವಭೃಥಾತ್ ಅಪಿ=ಅವಭೃಥ ಸ್ನಾನಕ್ಕಿಂತಲೂ, ಮೇಧ್ಯೇನ=ಪವಿತ್ರವಾದ, ವತ್ಸ=ಕರುವಿನ, ಆಲೋಕ=ನೋಡುವಿಕೆಯಿಂದ ಪ್ರವರ್ತಿನಾ= ಉಂಟಾದ, ಪ್ರಸ್ನವೇನ=ಹಾಲಿನ ಸುರಿಸುವಿಕೆಯಿಂದ, ಭುವಂ=ನೆಲವನ್ನು, ಆಭಿವರ್ಷಂತೀ=ನೆನೆಸುತ್ತಿರುವ, ಕುಂಡೋಧ್ನೀ=ಮಡಕೆಯಂತೆ ಕೆಚ್ಚಲಿರುವ (ಹಸುವು ಕಾಡಿನಿಂದ ಹಿಂದಿರುಗಿತು).

**ತಾ** . ಯಾಗ ಮೊದಲಾದ ದೀಕ್ಷೆಯು ಪೂರೈಸಿದ ತರುವಾಯ ಸ್ನಾನ ಮಾಡುವರು, ಅದನ್ನು ಅವಭೃಥ ಸ್ನಾನವೆನ್ನುವರು, ಆಗ ದೊಡ್ಡ ಕೆಚ್ಚಲುಳ್ಳ ಆ ಹಸುವು ಇಂತಹ ಅವಭೃಥಸ್ನಾನಕ್ಕಿಂತ ಪವಿತ್ರವೂ, ಸ್ವಲ್ಪ ಬಿಸಿಯೂ, ಕರುವನ್ನು ನೋಡಿದ ಕೂಡಲೆ ಜಿನುಗುವುದೂ ಅದ ತನ್ನ ಕೆಚ್ಚಲಿನ ಹಾಲನ್ನು ನೆಲದ ಮೇಲೆ ಸುರಿಸಿ ಒದ್ದೆ ಮಾಡುತ್ತಿದ್ದಿತು, ಇಂತಹ ಹಸುವು ಕಾಡಿನಿಂದ ಹಿಂದಿರುಗಿತು.

**85**. **ಅ**. ಖುರೋದ್ಧೂತೈಃ=ಗೊರಸುಗಳಿಂದ ಮೇಲಕ್ಕೆದ್ದ, ಅಂತಿಕಾತ್=ಸಮೀಪದಲ್ಲಿ, ಗಾತ್ರಂ=ಶರೀರವನ್ನು, ಸ್ಪೃಶದ್ಭಿಃ=ಮುಟ್ಟುತ್ತಿರುವ, ರಜಃಕಣೈಃ=ಧೂಳುಕಣಗಳಿಂದ,

ಮಹೀಕ್ಷಿತಃ=ದೊರೆಗೆ, ತೀರ್ಥಾಭಿಷೇಕಜಾಂ=ತೀರ್ಥಜಲದ ನೀರಿನ ಸ್ನಾನದಿಂದುಂಟಾದ, ಶುದ್ಧಿಂ=ಪಾವಿತ್ರ್ಯವನ್ನು ಅದಧಾನಾ=ಉಂಟುಮಾಡುವ ಹಸುವು ಕಾಡಿನಿಂದ ಹಿಂದಿರುಗಿತ್ತು.

**ತಾ:** ಆ ಹಸುವು ರಾಜನ ಹತ್ತಿರ ಬರುತ್ತಿರುವಾಗ ಅದರ ಕಾಲುಗಳ ಗೊರಸುಗಳಿಂದ ಧೂಳು ಮೇಲಕ್ಕೆದ್ದು ದೊರೆಯ ಮೈಮೇಲೆ ಬೀಳುತ್ತಿದ್ದಿತು. ಅದರಿಂದ ರಾಜನಿಗೆ ತೀರ್ಥದ ನೀರಿನಲ್ಲಿ ಮಾಡಿದ ಸ್ನಾನದಿಂದುಂಟಾದ ಶುದ್ಧಿಯುಂಟಾಯಿತು. ಹೀಗೆ ಮಾಡುತ್ತಿರುವ ಹಸುವು ಕಾಡಿನಿಂದ ಹಿಂದಿರುಗಿತು.

**86**. **ಅ:** ನಿಮಿತ್ತಜ್ಞಃ=ಶಕುನವನ್ನರಿತ, ತಪೋನಿಧಿಃ=ತಪಸ್ಸಿನ ಗಣಿಯಾದ ವಸಿಷ್ಠ ಮುನಿಗಳು, ಪುಣ್ಯದರ್ಶನಾಂ=ಪುಣ್ಯವನ್ನು ಉಂಟುಮಾಡುವ ನೋಟವುಳ್ಳ, ತಾಂ=ಆ ನಂದಿನಿಯನ್ನು, ದೃಷ್ಟ್ವಾ=ನೋಡಿ, ಆಶಂಸಿತ=ಅಭಿಲಾಷೆಯ ವಿಷಯದಲ್ಲಿ, ಅವಂಧ್ಯ=ಸಫಲನಾದ, ಪ್ರಾರ್ಥನಂ=ಪ್ರಾರ್ಥನೆಯುಳ್ಳ (ಬೇಡಿಕೆಯುಳ್ಳ), ಯಾಜ್ಯಂ=ಯಾಗಮಾಡಿಸಲು ಯೋಗ್ಯನಾದ ದೊರೆಯನ್ನು ಕುರಿತು, ಪುನಃ=ತಿರುಗಿ, ಅಬ್ರವೀತ್=ಹೇಳಿದರು.

**ತಾ:** ತಪಸ್ವಿಗಳಾದ ವಸಿಷ್ಠರು ಶಕುನವನ್ನರಿತವರು. ಅವರು ದರ್ಶನದಿಂದಲೇ ಪುಣ್ಯವನ್ನುಂಟುಮಾಡುವ ಆ ನಂದಿನೀ ಧೇನುವನ್ನು ನೋಡಿ ಮಾತನಾಡುತ್ತಿರುವಾಗಲೇ ನಂದಿನಿಯು ಬಂದ ಈ ಶಕುನದಿಂದಲೇ ದಿಲೀಪನ ಇಷ್ಟಾರ್ಥವು ಕೈಗೂಡುವುದೆಂದು ಭಾವಿಸಿ, ದೊರೆಯನ್ನು ಕುರಿತು ತಿರುಗಿ ಇಂತೆಂದರು,

**87**. **ಅ :** ಯತ್=ಯಾವ ಕಾರಣದಿಂದ, ಕಲ್ಯಾಣೀ= ಮಂಗಳರೂಪವಾದ, ಇಯಂ=ಈ ನಂದಿನಿಯು, ನಾಮ್ನಿ=ಹೆಸರು, ಕೀರ್ತಿತೇ ಏವ=ಹೇಳಲ್ಪಟ್ಟ ಕೂಡಲೇ, ಉಪಸ್ಥಿತಾ=ಸಮೀಪಿಸಿತೊ, ಆದ್ದರಿಂದ, ರಾಜನ್=ದೊರೆಯೆ, ಆತ್ಮನಃ=ನಿನ್ನ, ಸಿದ್ಧಿಂ=ಕಾರ್ಯಸಿದ್ದಿಯನ್ನು, ಅದರವರ್ತಿನೀಂ=ಸಮೀಪದಲ್ಲಿಯೇ ಇರುವುದನ್ನಾಗಿ (ಬೇಗನೆ ಆಗುವುದನ್ನಾಗಿ), ವಿಗಣಯ=ಎಣಿಸು (ತಿಳಿ).

**ತಾ:** ದೊರೆಯೆ ನಾನು ನಂದಿನಿಯ ಹೆಸರನ್ನು ಪ್ರಸ್ತಾಪಿಸಿದ ಕೂಡಲೇ ಅದು ನನ್ನ ಹತ್ತಿರ ಬಂದಿದೆ. ಆದುದರಿಂದ ನಿನ್ನ ಕಾರ್ಯವು ಬೇಗನೆ ಕೈಗೂಡುವುದೆಂದು ತಿಳಿ.

**88**. **ಅ:** ವನ್ಯವೃತ್ತಿಃ=ಕಾಡಿನ ಗಡ್ಡೆ-ಗೆಣಸುಗಳ ಆಹಾರವುಳ್ಳವನಾಗಿ, ಇಮಾಂ=ಈ, ಗಾಂ=ಧೇನುವನ್ನು, ಶಶ್ವತ್=ಯಾವಾಗಲೂ, ಆತ್ಮ=ನಿನ್ನ, ಅನುಗಮನೇನ= ಅನುಸರಣೆಯಿಂದ, ಅಭ್ಯಸನೇನ=ಅಭ್ಯಾಸದಿಂದ, ವಿದ್ಯಾಂ ಇವ=ವಿದ್ಯೆಯಂತೆ, ಪ್ರಸಾದಯಿತುಂ=ಅನುಗ್ರಹ ಮಾಡುವಂತೆ ಮಾಡಿಕೊಳ್ಳಲು, ಆರ್ಹಸಿ=ಯೋಗ್ಯನಾಗಿರುವೆ,

**ತಾ :** ವಿದ್ಯೆಯನ್ನು ಕಲಿಯಲು ಇಚ್ಚಿಸುವ ವಿದ್ಯಾರ್ಥಿಯು ತನ್ನ ಆಹಾರದಲ್ಲಿಯೂ ಆಸಕ್ತಿಯಿಲ್ಲದವನಾಗಿ ವಿದ್ಯೆಯು ಸ್ವಾಧೀನವಾಗುವವರೆಗೆ ಕಷ್ಟಪಟ್ಟು ಅಭ್ಯಾಸಮಾಡುವನು, ಅದರಂತೆ ನೀನು ಕಾಡಿನಲ್ಲಿ ಗಡ್ಡೆ- ಗೆಣಸುಗಳನ್ನು ತಿಂದು ಜೀವಿಸುತ್ತ ಈ ನಂದಿನೀ ಧೇನುವನ್ನು ಅನುಗ್ರಹವಾಗುವವರೆಗೆ ಅನುಸರಿಸುತ್ತಾ ಪ್ರಸನ್ನವಾಗುವಂತೆ ಮಾಡು.

**89**. **ಅ**. ಆಸ್ಯಾಂ=ಈ ಧೇನುವು, ಪ್ರಸ್ಥಿತಾಯಾಂ=ಹೊರಟಾಗ, ಪ್ರತಿಷ್ಠೇಥಾಃ=ಪ್ರಯಾಣಮಾಡು, ಸ್ಥಿತಾಯಾಂ=ನಿಲ್ಲಲು, ಸ್ಥಿತಿಂ ಆಚರೇಃ=ನಿಲ್ಲು, ನಿಷಣ್ಣಾಯಾಂ=ಕೂತುಕೊಳ್ಳಲು (ಮಲಗಲು), ನಿಷೀದ=ಕೂತುಕೊ, ಪೀತಾಂಭಸಿ= ಕುಡಿಯಲ್ಪಟ್ಟ ನೀರುಳ್ಳದ್ದಾಗಲು, ಆಪಃ=ನೀರನ್ನು, ಪಿಭೇಃ=ಕುಡಿ,

**ತಾ :** ಈ ನಂದಿನೀ ಧೇನುವು ಮುಂದಕ್ಕೆ ಹೋಗುತ್ತಿರುವಾಗ ನೀನು ಆದನ್ನು ಹಿಂಬಾಲಿಸಿ ಹೋಗು. ಅದು ನಿಂತಾಗ ನಿಲ್ಲು. ಅದು ಮಲಗಿದಾಗ ಕೂತುಕೊ. ಅದು ನೀರನ್ನು ಕುಡಿದ ತರುವಾಯ ನೀನು ನೀರನ್ನು ಕುಡಿ. ಈ ರೀತಿ ಅದನ್ನು ಅನುಸರಿಸು.

**90**. **ಅ :** ವಧೂ ಚ=ನಿನ್ನ ಪತ್ನಿಯಾದ ಸುದಕ್ಷಿಣೆಯೂ, ಭಕ್ತಿಮತೀ=ಭಕ್ತಿಯುಳ್ಳವಳಾಗಿ, ಪ್ರಯತಾ=ಶುದ್ಧಳಾಗಿ, ಅರ್ಚಿತಾಂ=ಪೂಜಿಸಲ್ಪಟ್ಟ, ಏನಾಂ=ಈ ಧೇನುವನ್ನು, ಪ್ರಾತಃ=ಬೆಳಿಗ್ಗೆ, ಆತಪೋವನಾತ್=ತಪೋವನದವರೆಗೆ, ಅನ್ವೇತು=ಹಿಂಬಾಲಿಸಲಿ, ಸಾಯಂ ಅಪಿ= ಸಾಯಂಕಾಲವೂ, ಪ್ರತ್ಯುದ್ವ್ರಜೇತ್=ಎದುರುಗೊಳ್ಳಲಿ,

**ತಾ:** ನಿನ್ನಂತೆ ನಿನ್ನ ಹೆಂಡತಿಯೂ ಬೆಳಗ್ಗೆ ಸ್ನಾನಾದಿಗಳಿಂದ ಶುದ್ಧಳಾಗಿ ಭಕ್ತಿಯಿಂದ ಈ ನಂದಿನೀ ಧೇನುವನ್ನು ಪೂಜಿಸಿ, ಅದು ಆಶ್ರಮದಿಂದ ಮೇಯಲು ಹೋಗುವಾಗ ತಪೋವನದವರೆಗೆ ಹಿಂಬಾಲಿಸಿ ಹೋಗಬೇಕು. ಸಾಯಂಕಾಲವೂ ಅದು ಕಾಡಿನಿಂದ ಹಿಂದಿರುಗುವಾಗ ಎದುರುಗೊಳ್ಳಬೇಕು.

**91. ಅ :** ಇತಿ=ಈ ರೀತಿಯಿಂದ, ತ್ವಂ=ನೀನು, ಆಪ್ರಸಾದಾತ್=ಅನುಗ್ರಹ ವಾಗುವವರೆಗೆ, ಅಸ್ಯಾಃ=ಈ ನಂದಿನಿಯ, ಪರಿಚರ್ಯಾಪರಃ=ಸೇವೆಯಲ್ಲಿ ಆಸಕ್ತನು, ಭವ=ಆಗು, ತೇ=ನಿನಗೆ, ಅವಿಘ್ನಂ=ಅಡ್ಡಿಯಿಲ್ಲದಿರುವಿಕೆಯು, ಅಸ್ತು=ಅಗಲಿ, ಪಿತಾ=ಇವ ನಿನ್ನ ತಂದೆಯಂತೆ, ಪುತ್ರಿಣಾಂ=ಮಕ್ಕಳೊಂದಿಗರ, ಧುರಿ=ಮಂದೆ, ಸ್ಥೇಯಾಃ=ಇರು.

**ತಾ:** ನೀನು ಈ ರೀತಿ ಈ ಧೇನುವಿನ ಅನುಗ್ರಹ ಆಗುವವರೆಗೆ ಇದರ ಸೇವೆಯಲ್ಲಿ ಆಸಕ್ತನಾಗು. ನಿನ್ನೀ ಕೆಲಸಕ್ಕೆ ಯಾವ ವಿಘ್ನವೂ ಬಾರದಿರಲಿ. ನಿನ್ನ ತಂದೆಯು ನಿನ್ನನ್ನು ಪಡೆದು ಶ್ರೇಷ್ಠನಾದಂತೆ ನೀನೂ ನಿನ್ನಂತಹ ಪುತ್ರನನ್ನು ಪಡೆದು ಮಕ್ಕಳೊಂದಿಗರಲ್ಲಿ ಶ್ರೇಷ್ಠನಾಗು.

**92. ಅ:** ದೇಶ=ಅಗ್ನಿಯ ಹತ್ತಿರದ ಪ್ರದೇಶ, ಕಾಲ=ಅಗ್ನಿಹೋತ್ರವು ಮುಗಿಯುವ ಕಾಲ ಇವುಗಳನ್ನು, ಜ್ಞಃ=ತಿಳಿದ, ಪ್ರೀತಿಮಾನ್=ಪ್ರೀತಿಯುಳ್ಳ, ಶಿಷ್ಯಃ=ಶಿಷ್ಯನಾದ ರಾಜನು, ಸಪರಿಗ್ರಹಃ=ಹೆಂಡತಿಯಿಂದ ಸಹಿತನಾಗಿ, ಆನತಃ=ಬಗ್ಗಿದವನಾಗಿ, ಶಾಸಿತುಃ=ಗುರುವಿನ, ಅಜ್ಞಾಂ=ಅಪ್ಪಣೆಯನ್ನು, ತಥಾ ಇತಿ=ಹಾಗೆಯೇ ಆಗಲೆಂದು ಪ್ರತಿಜಗ್ರಾಹ=ಸ್ವೀಕರಿಸಿದನು.

**ತಾ :** ಅಗ್ನಿ ಸಮೀಪದಲ್ಲಿ ಹೋಮದ ಸಮಾಪ್ತಿಯ ಸಮಯದಲ್ಲಿ ವಸಿಷ್ಠರು ಹೇಳಿದ ಮಾತು ನಿಜವಾಗುತ್ತದೆಂದು ದೊರೆಯು ಅರಿತನು. ಅವನು ಸಂತೋಷದಿಂದ ಹೆಂಡತಿಯೊಡನೆ ನಮ್ರನಾಗಿ ವಸಿಷ್ಠರ ಅಣತಿಯನ್ನು ಹಾಗೆಯೇ ಆಗಲೆಂದು ಶಿರಸಾವಹಿಸಿದನು.

**93. ಅ.** ಅಥ=ಬಳಿಕ, ಪ್ರದೋಷೇ=ರಾತ್ರಿಯಲ್ಲಿ, ದೋಷಜ್ಞಃ=ವಿದ್ವಾಂಸರಾದ, ಸೂನೃತವಾಕ್=ಸತ್ಯವಾದ ಮಾತುಳ್ಳ, ಸ್ರಷ್ಟುಃ=ಬ್ರಹ್ಮನ ಸೂನುಃ=ಮಗನಾದ ವಸಿಷ್ಠರು, ಉದಿತಶ್ರಿಯಂ=ಉಂಟಾದ ಸಂಪತ್ತುಳ್ಳ, (ಕಾಂತಿಯುಳ್ಳ) ವಿಶಾಂಪತಿಂ=ದೊರೆಯನ್ನು ಸಂವೇಶಾಯ=ನಿದ್ರೆಗಾಗಿ, ವಿಸಸರ್ಜ=ಕಳುಹಿಸಿದನು (ಅಪ್ಪಣೆಮಾಡಿದನು).

**ತಾ :** ವಸಿಷ್ಠರು ಜ್ಞಾನಿಗಳು, ಬ್ರಹ್ಮದೇವರ ಪುತ್ರರು. ಸತ್ಯವಾದ ಮಾತುಳ್ಳವರು. ಅವರು ತರುವಾಯ ರಾತ್ರಿಯಲ್ಲಿ ಉತ್ತಮ ಸಂಪತ್ತುಳ್ಳ ದಿಲೀಪನಿಗೆ ನಿದ್ರೆಮಾಡುವಂತೆ ಅಪ್ಪಣೆಮಾಡಿ ಕಳುಹಿಸಿದರು.

**94. ಅ :** ಕಲ್ಪವಿತ್=ವ್ರತದ ಪ್ರಯೋಗಗಳನ್ನರಿತ, ಮುನಿಃ=ವಸಿಷ್ಠ ಮುನಿಗಳು, ತಪಸಿದ್ಧೌ=ತಪಸ್ಸಿನ ಸಿದ್ಧಿಯು, ಸತ್ಯಾಂ ಅಪಿ=ಇದ್ದಾಗ್ಯೂ, ನಿಯಮಾಪೇಕ್ಷಯಾ= ವ್ರತಾನುಷ್ಠಾನದ ಅಪೇಕ್ಷೆಯಿಂದ, ಅಸ್ಯ=ಈ ದಿಲೀಪನಿಗೆ, ವನ್ಯಾಂ ಏವ=ಕಾಡಿನದೇ ಆದ, ಸಂವಿಧಾಂ=ಸಾಮಗ್ರಿಯನ್ನು, ಕಲ್ಪಯಾಮಾಸ=ಸಿದ್ಧಗೊಳಿಸಿದರು,

**ತಾ:** ವಸಿಷ್ಠ ಮುನಿಗಳು ತಪಸ್ಸಿನಿಂದ ಸಿದ್ದಿಯನ್ನು ಪಡೆದವರು. ಅವರು ತಮ್ಮ ತಪಸ್ಸಿನ ಸಿದ್ದಿಯಿಂದ ದಿಲೀಪನಿಗೆ ರಾಜೋಚಿತವಾದ ಭೋಗಸಾಮಗ್ರಿಗಳನ್ನು ಸಿದ್ಧಗೊಳಿಸಲು ಸಮರ್ಥರು. ಆದರೂ ಅವರು ವ್ರತಾನುಷ್ಠಾನದ ಕ್ರಮವನ್ನರಿತವರಾದ್ದರಿಂದಲೂ, ರಾಜನು ವ್ರತವನ್ನು ಆಚರಿಸಬೇಕಾಗಿರುವುದರಿಂದಲೂ ಅವನಿಗೆ ಕಾಡಿನ ದರ್ಭೆಯ ಹಾಸಿಗೆ ಮೊದಲಾದುವನ್ನು ಅಣಿಮಾಡಿಸಿದರು.

**95. ಅ :** ಸಃ=ಆ ದಿಲೀಪನು, ಕುಲಪತಿನಾ=ಮುನಿವಂಶದ ಒಡೆಯರಾದ ವಸಿಷ್ಠರಿಂದ, ನಿರ್ದಿಷ್ಟಾಂ=ತೋರಿಸಲ್ಪಟ್ಟ, ಪರ್ಣಶಾಲಾಂ=ಎಲೆಮನೆಯಲ್ಲಿ ಅಧ್ಯಾಸ್ಯ=ಇದ್ದು, ಪ್ರಯತ=ಶುದ್ಧಳಾದ, ಪರಿಗ್ರಹ=ಹೆಂಡತಿಯೇ, ದ್ವಿತೀಯಃ=ಎರಡನೆಯವಳಾಗುಳ್ಳವನಾಗಿ, ಕುಶಶಯನೇ=ದರ್ಭೆಯ ಹಾಸಿಗೆಯಲ್ಲಿ, ಸಂವಿಷ್ಟಃ=ಸನ್ ನಿದ್ರಿಸಿದವನಾಗಿ, ತತ್=ಆ ವಸಿಷ್ಠರ, ಶಿಷ್ಯ=ಶಿಷ್ಯರ, ಅಧ್ಯಯನ=ವೇದಾಧ್ಯಯನದಿಂದ, ನಿವೇದಿತ=ತಿಳಿಸಲ್ಪಟ್ಟ ಅವಸಾನಾಂ=ಕೊನೆಯುಳ್ಳ, ನಿಶಾಂ=ರಾತ್ರಿಯನ್ನು ನಿನಾಯ= ಕಳೆದನು.

**ತಾ:** ಆ ದಿಲೀಪನು ಮುನಿವಂಶದ ಒಡೆಯರಾದ ವಸಿಷ್ಠರು ತೋರಿಸಿದ ಪರ್ಣಶಾಲೆಯಲ್ಲಿ ಹೆಂಡತಿಯೊಡನೆ ಇದ್ದನು. ಅಲ್ಲಿ ರಾತ್ರಿ ದರ್ಭೆಯ ಹಾಸಿಗೆಯಲ್ಲಿ ಮಲಗಿದನು. ಬೆಳಿಗ್ಗೆ ಆ ವಸಿಷ್ಠರ ಶಿಷ್ಯರು ವೇದಾಧ್ಯಯನ ಮಾಡುತ್ತಿರುವುದರಿಂದ ಬೆಳಗಾಯಿತೆಂದು ತಿಳಿದು ಎಚ್ಚರಗೊಂಡನು.

॥ **ಸಮಾಪ್ತಮ್** ॥

# *व्याकरणांशाः*

१. वाक्च अर्थश्च वागर्थौ, वागर्थसदृशौ वागर्थाविव । वाक्च अर्थश्च वागर्थौ,, वागर्थयोः प्रतिपत्तिः वागर्थप्रतिपत्तिः, तस्यै वागर्थप्रतिपत्तये । माता च पिता च पितरौ तौ । पार्वती च परमेश्वरश्च पार्वती परमेश्वरौ, तौ, वागर्थविव । 'इवेन सह नित्यसमासो विभक्त्यलोपश्च'–अस्वपद विग्रहः । पितरौ–पा.सू.– पिता मात्रा – एकशेषः । वन्दे–वदि अभिवादनस्तुत्योः, प्रथमगणः, सकर्मकः, लट्, आत्मनेपदं, उत्तमपुरुषः, एकवचनम् । वन्दते, वन्देते, वन्दन्ते । वन्दसे, वन्देथे, वन्दध्वे । वन्दे, वन्दावहे, वन्दामहे । पार्वतीपरमेश्वरौ शब्दार्थाविव–उपमालङ्कारः । लक्षणम्–उपमा यत्र सादृश्यलक्ष्मीरुल्लसतिद्वयोः । १–९४ अनुष्टुप् वृत्तम् । (छात्राणां पठनसौकर्यार्थं बहुत्र अनुस्वारस्थाने बिन्दुः एव प्रदत्तः)

२. प्रभवति अस्मात् इति प्रभवः । सूर्यः प्रभवः यस्य सः सूर्यप्रभवः । अल्पः विषयः यस्यास्सा अल्पविषया । तरितुमिच्छुः तितीर्षुः । तरितुमशक्यः दुस्तरः, तं दुस्तरम् । अस्मि–अस् भुवि, द्वितीयगणः, अकर्मकः, लट्, परस्मैपदं, उत्तमपुरुषः, एकवचनम् । अस्ति स्तः सन्ति । असि स्थः स्थ । अस्मि स्वः स्मः । 'विषमं वर्ण्यते यत्र घटनाननुरूपयोः' विषमालङ्कारः । (तितीर्षुः) वर्ण्ये स्याद्वर्ण्यवृत्तान्तप्रतिबिम्बस्य वर्णनम् । ललितालङ्कारः ।

३. कवीनां यशः कवियशः, कवियशः,प्रार्थयते ताच्छील्येनेति कवियशःप्रार्थी । उपहसितुं योग्यः उपहास्यः, उपहास्यस्य भावः उपहास्यता, तां उपहास्यताम् । प्रांशुना लभ्यं, प्रांशुलभ्यं, तस्मिन् प्रांशुलभ्ये । उद्गतौ बाहू यस्य सः उद्बाहुः । गमिष्यामि– गम्लृ गतौ । प्र.ग, सक, लृट्, पर, उ.ए । गमिष्यति गमिष्यतः,

गमिष्यन्ति । गमिष्यसि, गमिष्यथः, गमिष्यथ । गमिष्यामि, गमिष्यावः, गमिष्यामः । उपमालङ्कारः ।

४. वाक् एव द्वारं वाग्द्वारं, तस्मिन् वाग्द्वारे । पूर्वे च ते सूरयश्च पूर्वसूरयः, तैः पूर्वसूरिभिः । वज्रेण समुत्कीर्णः वज्रसमुत्कीर्णः, तस्मिन् । उपमालङ्कारः ।

५. जन्म आरभ्य आजन्म, आजन्म शुद्धाः आजन्मशुद्धाः, तेषां आजन्मशुद्धानाम् । फलस्य उदयः फलोदयः, फलोदयं अभिव्याप्य आफलोदयं, आफलोदयं कर्म येषां ते आफलोदयकर्माणः, तेषां आफलोदयकर्मणाम् । समुद्रं अभिव्याप्य आसमुद्रं , आसमुदं ,क्षितिः आसमुद्रक्षितिः, आसमुद्रक्षितेः ईशाः आसमुद्रक्षितीशाः, तेषां आसमुद्रक्षितीशानाम् । नाकं अभिव्याप्य आनाकं, रथस्य वर्त्म रथवर्त्म, आनाकं रथवर्त्म येषां ते अनाकरथवर्त्मानः, तेषां अनाकरथवर्त्मनाम् ।

६. विधिं अनतिक्रम्य यथाविधि, यथाविधि हुताः यथाविधिहुताः, यथाविधिहुताः अग्नयः यैः ते यथाविधिहुताग्नयः, तेषां यथाविधिहुताग्नीनां कामं अनतिक्रम्य यथा कामं, यथाकामं अर्चिताः यथाकामार्चिताः, यथाकामार्चिताः, आर्थिनः यैस्ते यथाकामार्चितार्थिनः तेषां यथाकामार्चितार्थिनां । अपराधं अनतिक्रम्य यथापराधं, यथापराधं दण्डः येषा ते यथापराधदण्डाः, तेषां यथापराधदण्डानाम्, कालं अनतिक्रम्य यथाकालं, यथाकालं प्रबोधन्ति ताच्छील्येनेति यथाकालप्रबोधिनः, तेषां यथाकालप्रबोधिनाम्।

७. संभृतः अर्थः यैस्ते संभृतार्थाः, तेषां संभृतार्थानाम् । मितं भाषन्ते इति मितभाषिणः, तेषां मितभाषिणाम् । विजेतुमिच्छवः विजिगीषवः, तेषां विजिगीषूणाम् । गृहैः मेधन्ते इति गृहमेधिनः, तेषां गृहमेधिनाम् ।

८. शिशोः भावः शैशवम्, तस्मिन् । अभ्यस्ता विद्या यैस्ते अभ्यस्तविद्याः, तेषां अभ्यस्तविद्यानाम् । यूनः भावः यौवनं, तस्मिन् यौवने । विषयान् इच्छन्तीति विषयैषिणः, तेषाम् विषयैषिणाम् । वृद्धस्य भावः वार्धकं, तस्मिन् वार्धके । मुनीनां वृत्तिरिव वृत्तिः येषां ते मुनिवृत्तयः, तेषां मुनिवृत्तीनाम् । तनुं त्यजन्तीति तनुत्यजः, तेषां तनुत्यजाम् ।

९. वाचः विभवः वाग्विभवः, तनुः वाग्विभवः यस्य सः तनुवाग्विभवः । तेषां गुणाः तद्गुणाः, तैः तद्गुणैः । वक्ष्ये–ब्रूञ् व्यक्तायां वाचि, द्वि.ग, सक, लृट्, आत्म, उ.ए । वक्ष्यते, वक्ष्येते, वक्ष्यन्ते । वक्ष्यसे, वक्ष्येथे, वक्ष्यध्वे । वक्ष्ये, वक्ष्यावहे, वक्ष्यामहे । चापलाय– 'क्रियार्थोपपदस्य च कर्मणि स्थानिनः' अनेन सूत्रेण चतुर्थी विभक्तिः ।

१०. सच्च असच्च सदसती, सदसतोः व्यक्तिः सदसद्व्यक्तिः, सदसद्व्यक्तेः हेतवः सदसद्व्यक्तिहेतवः । अर्हन्ति – अर्ह पूजयां, प्र.ग, सक, लट्, पर, प्र.ब। अर्हति, अर्हतः, अर्हन्ति । अर्हसि, अर्हथः, अर्हथ । अर्हामि, अर्हावः, अर्हामः । संलक्ष्यते–लक्ष दर्शनाङ्कनयोः, दशमगणः, कर्मणि, लट्, आत्म, प्र.ए, सं–उपसर्गः। सं+लक्ष्यते, लक्ष्येते, लक्ष्यन्ते । लक्ष्यसे, लक्ष्येथे, लक्ष्यध्वे । लक्ष्ये, लक्ष्यावहे, लक्ष्यामहे ।

११. विवस्वतः अपत्यं पुमान् वैवस्वतः । मनसः ईषिणः मनीषिणः, तेषां मनीषिणाम् । महीं क्षियन्तीति महीक्षितः, तेषां महीक्षिताम् । आसीत्–अस् भुवि। द्वि.ग, अक, लङ्, पर, प्र.ए । आसीत्, आस्तां, आसन् । आसीः, आस्तं, आस्त । आसं, आस्व, आस्म ।

१२. तस्य अन्वयः तदन्वयः, तस्मिन् तदन्वये । शुद्धिरस्यास्तीति शुद्धिमान्, तस्मिन् शुद्धिमति । अतिशयेन शुद्धिमान् शुद्धिमत्तरः । राजा इन्दुः इव राजेन्दुः।

१३. व्यूढं उरः यस्य सः व्यूढोरस्कः । वृषस्य स्कन्धः इव स्कन्धः यस्य सः वृषस्कन्धः । शालः इव प्रांशुः शालप्रांशुः । महान्तौ भुजौ यस्य सः महाभुजः। आत्मनः कर्म आत्मकर्म, आत्मकर्मणः क्षमं आत्मकर्मक्षमं, तत् । क्षत्रस्य अयं क्षात्रः ।

१४. सर्वेभ्यः अतिरिक्तः, सर्वातिरिक्तश्चासौ सारश्च सर्वा....सारः, तेन सर्वा.....सारेण। सर्वाणि तेजसा अभिभवतीति सर्वतेजोभिभावी, तेन सर्वतेजोभिभाविना । सर्वेभ्यः उन्नतः सर्वोन्नतः, तेन सर्वोन्नतेन ।

१५. आकारेण सदृशी, आकारसदृशी प्रज्ञा यस्य सः आकारसदृशप्रज्ञः । सदृशः आगमः यस्य सः सदृशागमः । सदृशः आरम्भः यस्य सः सदृशारम्भः। आरम्भेण सदृशः आरम्भसदृशः उदयः यस्य सः आरम्भसदृशोदयः ।

१६. भीमाश्च ते कान्ताश्च भीमकान्ताः, तैः भीमकान्तैः, नृपस्य गुणाः नृपगुणाः, तैः नृपगुणैः, उपसृत्य जीवन्तीति उपजीविनः, तेषां उपजीविनाम् । न धृष्यः अधृष्यः अभिगन्तुं योग्यः अभिगम्यः । यादांसि च रत्नानि च यादोरत्नानि, तैः यादोरत्नैः । बभूव–भू सत्तायां । प्र.ग, अक, लिट्, पर, प्र.ए । बभूव, बभूवतुः, बभूवुः । बभूविथ, बभूवथुः, बभूव । बभूव, बभूविव, बभूविम ।

१७. रेखा प्रमाणं अस्येति रेखामात्रम् । नेमीनां वृत्तिः इव वृत्तिः यासां ताः नेमिवृत्तयः. आमनोः, पा.सू. ‘आङ् मर्यादावचने’, ‘पञ्चम्यपाङ्परिभिः’–

पञ्चमिविभक्तिः । व्यतीयुः–इण् गतौ, द्वि.ग, सक, लिट्, पर, प्र.ब, वि+अति+उपसर्गौ । व्यति+इयाय, ईयतुः, ईयुः । इययिथ इयेथ, ईयथुः, ईय । इयाय इयय, ईयिव ईयिम ।

१८. सहस्रम् गुणाः यस्मिन् तद्यथा भवति तथा सहस्रगुणं, क्रियाविशेषण । अग्रहीत्–ग्रह उपादाने, नवमगणः, लुङ्, पर, प्र.ए । अग्रहीत्, अग्रहीष्टां, अग्रहीषुः। अग्रहीः, अग्रहीष्टं, अग्रहीष्ट । अग्रहीषं, अग्रहीष्व, अग्रहीष्म । आदत्ते–डु दाञ् दाने, तृ.ग, सक, लट्, आत्म, प्र,ए, आ+उपसर्गः । आ+दत्ते, ददाते, ददते । दत्से, ददाथे, दद्ध्वे । ददे, दद्वहे, दद्महे ।

१९. अर्थस्य साधनं अर्थसाधनम् । न कुण्ठिता अकुण्ठिता ।

२०. संवृतः मन्त्रः यस्य सः संवृतमन्त्रः, तस्य आकारश्च इङ्गितं च आकारेङ्गिते, गूढे आकारेङ्गिते यस्य सः गूढाकारेङ्गितः, तस्य गूढाकारेङ्गितस्य । फलेन अनुमातुं योग्याः फलानुमेयाः । प्राक् भवाः प्राक्तनाः ।

२१. न त्रस्तः अत्रस्तः । न आतुरः अनातुरः । न गृध्नुः अगृध्नुः । न सक्तः असक्तः । भेजे–भज सेवायां, प्र.ग, सक, लिट्, आत्म, प्र,ए । भेजे, भेजाते, भेजिरे । भेजिषे, भेजाथे, भेजिध्वे (ढ्वे) । भेजे, भेजिवहे, भेजिमहे । आददे–दाञ्, धातुः, लिट्, आत्म, प्र.ए, आ–उपसर्गः, रूपाणि पूर्ववत् । अन्वभूत्–भू धातुः लुङ्, अभूत्, अभूतां, अभूवन् । अभूः, अभूतं, अभूत । अभूवं अभूव अभूम । जुगोप–गुपू रक्षणे, प्र.ग, सक, लिट्, प्र,ए । जुगोप, जुगुपतुः, जुगुपुः। जुगोपिथ जुगोप्थ, जुगुपथुः, जुगुप । जुगोप, जुगुपिव, जुगुपिम ।

२२. श्लाघायाः विपर्ययः श्लाघाविपर्ययः । गुणानां अनुबन्धः, गुणानुबन्धः, गुणानुबन्धः एषां अस्तीति गुणानुबन्धिनः, गुणानुबन्धिनां, भावः गुणानुबन्धित्वं, तस्मात् गुणानुबन्धित्वात् । सह प्रसवः येषां ते सप्रसवाः ।

२३. न आकृष्टः अनाकृष्टः, तस्य अनाकृष्टस्य । पारं दृष्टवान् पारदृश्वा, तस्य पारदृश्वनः । धर्मे रतिः यस्य सः धर्मरतिः तस्य । वृद्धस्य भावः वृद्धत्वम् । जरसा विना– 'पृथग्विनानानाभिः तृतीयान्यतरस्याम्' – अनेन सूत्रेण तृतीयाविभक्तिः ।

२४. प्रजायन्त इति प्रजाः, तासाम् । विनयस्य अधानं विनयाधानं, तस्मात् । जन्मनः हेतवः जन्महेतवः ।

२५. दण्डं अर्हन्तीति दण्ड्याः, तान् दण्ड्यान् । अर्थश्च कामश्च अर्थकामौ ।

२६. सम्पदः विनिमयः सम्पद्विनिमयः, तेन सम्पद्विनिमयेन । भुवनयोः द्वयं भुवनद्वयम् । दुदोह–दुह प्रपूरणे, द्वि.ग, सक, लिट्, पर, प्र,ए । दुदोह, दुदुहतुः दुदुहुः । दुदोहिथ, दुदुहथुः, दुदुह । दुदोह, दुदुहिव, दुदुहिम । दधतुः–डु धाञ् धारणपोषणयोः, तृ.ग, सक, लिट्, पर, प्र,द्वि । दधौ दधतुः दधुः । दधिथ दधाथ, दधथुः दध । दधौ दधिव दधिम ।

२७. परेषां स्वानि परस्वानि, तेभ्यः परस्वेभ्यः । तस्करस्य भावः तस्करता । अनुययुः – या प्रापणे, द्वि.ग, सक, लिट्, पर, प्र,ब, अनु–उपसर्गः । अनु+ययौ, ययतुः, ययुः । ययिथ ययाथ, ययथुः यय । ययौ ययिव ययिम ।

२८. द्वेष्टुं योग्यः द्वेष्यः । त्यक्तुं योग्यः त्याज्यः । उरगेण क्षता उरगक्षता ।

२९. समाधीयते अनेनेति समाधिः, महाभूतानां समाधिः महाभूतसमाधिः । तेन महाभूतसमाधिना । परेषां अर्थः, परार्थः एकं फलं येषां ते परार्थैकफलाः ।

३०. वप्रस्य वलयः, वेलैव वप्रवलयः यस्यास्सा वेलावप्रवलया, तां वेलावप्रवलयाम् । अपरिखाः परिखाः संपद्यमानाः कृताः परिखीकृताः, परिखीकृताः सागराः यस्यास्सा परिखीकृतसागरा, ताम् परिखीकृतसागराम् । अन्यस्य शासनं अन्यशासनं, न विद्यते अन्यशासनं यस्यास्सा अनन्यशासना, ताम् अनन्यशासनाम्। एका च सा पुरी च एकपुरी, ताम् एकपुरीम् । शशास – शासु अनुशिष्टौ । द्वि.ग, सक, लिट्, पर, प्र,ए । शशास, शशासतुः शशासुः । शशासिथ, शशासथुः, शशास । शशास, शशासिव, शशासिम ।

३१. दक्षिणस्य भावः दाक्षिण्यं, दाक्षिण्येन रूढं दाक्षिण्यरूढं, तेन दाक्षिण्यरूढेन, मगधानां वंशः मगधवंशः, मगधवंशाज्जाता मगधवंशजा । उपमालङ्कारः ।

३२. कलत्रं अस्यास्तीति कलत्रवान्, तं कलत्रवन्तम् । वसुधायाः अधिपः वसुधाधिपः । मेने – मन ज्ञाने, च.ग, सक, लिट्, आत्म, प्र,ए । मेने, मेनाते, मेनिरे । मेनीषे, मेनाथे, मेनिध्वे (ढ्वे) । मेने, मेनिवहे, मेनिमहे ।

३३. आत्मनः अनुरूपा आत्मानुरूपा, तस्यां आत्मानुरूपायाम् । आत्मनः जन्म यस्य सः आत्मजन्मा, आत्मजन्मनि समुत्सुकः आत्मजन्मसमुत्सुकः । विलम्भितं फलं एषां ते विलम्बितफलाः, तैः विलम्बितफलैः । निनाय–णीञ् प्रापणे, प्रथम गणः, सक, लिट्, पर, प्र.ए. । निनाय, निन्यतुः, निन्युः । निनयिथ निनेथ, निन्यथुः, निन्य । निनाय निनय, निन्यिव, निन्यिम ।

३४. सन्तानः अर्थः यस्य सः सन्तानार्थः, तस्मै सन्तानार्थाय । स्वस्य भुजः स्वभुजः, तस्मात् स्वभुजात् । निचिक्षिपे क्षिप प्रेरणे, षष्ठगणः, सक, लिट्, आत्म, प्र.ए, नि– उपसर्गः । नि + चिक्षिपे, चिक्षिपाते, चिक्षिपिरे । चिक्षिपिषे, चिक्षिपाथे, चिक्षिपिध्वे (ढ्वे) । चिक्षिपे, चिक्षिपिवहे, चिक्षिपिमहे ।

३५. पुत्रस्य काम्या पुत्रकाम्या, तया पुत्रकाम्याया । जाया च पतिश्च दम्पती – जाया शब्दस्य दम् आगमः । जग्मतुः–गम्लृ गतौ, प्रथमगणः, सक, लिट्, पर, प्र.ए । जगाम, जग्मतुः, जग्मुः । जगमिथ जगन्थ, जग्मथुः, जग्म । जगाम जगम, जग्मिव, जग्मिम ।

३६. स्निग्धः गम्भीरः निर्घोषः यस्य सः स्निग्धगम्भीरनिर्घोषः, तं स्निग्धगम्भीरनिर्घोषम् । प्रावृषि भवः प्रावृषेण्यः तं, 'प्रावृष एण्यः' अनेन सूत्रेण एण्य प्रत्ययः । पयः वहतीति पयोवाट्, तं पयोवाहम् । विद्युच्च ऐरावतश्च विद्युदैरावतौ ।

३७. आश्रमस्य पीडा आश्रमपीडा । परिमातुं योग्याः परिमेयाः, परिमेयाः पुरस्सराः ययोस्तौ परिमेयपुरस्सरौ । अनुभावस्य विशेषः अनुभावविशेषः तस्मात् । सेनया परिवृतौ सेनाापरिवृतौ । मा भूत् "न माङ् योगे" – अनेन अडागमो न ।

३८. सुखः स्पर्शः येषां ते सुखस्पर्शाः तैः । शालस्य निर्यासः शालनिर्यासः, शालनिर्यासस्य गन्धः इव गन्ध एषां अस्तीति शालनिर्यासगन्धिनः तैः. उत्किरतीति उत्किराः । पुष्पाणां रेणवः पुष्परेणवः, पुष्परेणूनां उत्किराः

पुष्परेणूत्किराः तैः । वनानां राजयः वनराजयः, आधूताः वनराजयः यैस्ते आधूतवनराजयः, तैः आधूतवनराजिभिः ।

३९. मनसः अभिरामाः मनोभिरामाः ताः । रथस्य नेमिः रथनेमिः, रथनेमेः स्वनः रथनेमिस्वनः, रथनेमिस्वने उन्मुखाः रथनेमिस्वनोन्मुखाः तैः । षड्भ्यः जातः, षड्जः, षड्जेन संवादिनीः षड्जसंवादिनीः ताः । केका वाणी मयूरस्य ।

४०. अक्ष्णां सादृश्यं अक्षिसादृश्यम्, परस्परयोः अक्षिसादृश्यं परस्पराक्षिसादृश्यं तत् । अदूरं यथा भवति तथा उज्झितं अदूरोज्झितं, अदूरोज्झितं, वर्त्म यैस्तानि अदूरोज्झितवर्त्मानि तेषु । मृगयश्च मृगाश्च मृगाः । मृगाणां द्वन्द्वानि मृगद्वन्द्वानि तेषु । स्यन्दने आबद्धा स्यन्दनाबद्धा, स्यन्दनाबद्धा दृष्टिः यैस्तानि स्यन्दनाबद्धदृष्टीनि तेषु ।

४१. श्रेण्याः बन्धः, श्रेणीबन्धः, तस्मात् । न विद्यते स्तंभः यस्यास्सा अस्तम्भा, ताम् । तोरणे स्रक् तोरणस्रक्, तां । कलः निर्ह्लादः येषां ते कलनिर्ह्लादाः तैः । उन्नमिते अनने याभ्यां तौ उन्नमिताननौ ।

४२. अनुकूलस्य भावः अनुकूलत्वं, तस्मात् । प्रार्थनायाः सिद्धिः प्रार्थनासिद्धिः, प्रार्थनासिद्धिं शंसतीति प्रार्थनासिद्धिशंसी, तस्य प्रार्थनासिद्धिशंसिनः । तुरगाभ्यां उत्कीर्णानि तुरगोत्कीर्णानि, तैः । अलकाश्चवेष्टनं च अलकवेष्टने, न स्पृष्टे अस्पृष्टे अलकवेष्टने ययोस्तौ ।

४३. वीचेः विक्षोभः वीचिविक्षोभः वीचिविक्षोभेण शीतलः वीचिविक्षोभशीतलः, तम् । स्वयोः निःश्वासः स्वनिःश्वासः स्वनिश्वासं अनुकरोतीति स्वनिश्श्वासानुकारी, तम् ।

४४. आत्मना विसृष्टाः आत्मविसृष्टाः, तेषु । यूपा एव चिह्नानि येषां ते यूपचिह्नाः तेषु । अर्घ्यस्य अनुपदं अर्घ्यानुपदम् ।

४५. घोषे वृद्धाः घोषवृद्धाः, तान् । वने भवाः वन्याः, तेषाम् । मार्गे शाखिनः, तेषाम् ।

४६. शुद्धः वेषः ययोस्तौ शुद्धवेषौ, तयोः शुद्धवेषयोः । हिमेन निर्मुक्तौ, हिमनिर्मुक्तौ, तयोः हिमनिर्मुक्तयोः । चित्रा च चन्द्रमाश्च चित्राचन्द्रमसौ, तयोः चित्राचन्द्रमसोः ।

४७. भूमेः पतिः भूमिपतिः । प्रियं दर्शनं यस्य सः, प्रियदर्शनः । बुधः उपमा यस्य सः बुधोपमः । बुबुधे – बुध अवगमने , चतुर्थगणः, सक, लिट्, आत्म, प्र.ए. । बुबुधे, बुबुधाते, बुबुधिरे । बुबुधिषे, बुबुधाथे, बुबुधिध्वे (ढ्वे) । बुबुधे, बुबुधिवहे, बुबुधिमहे ।

४८. दुःखेन प्राप्तुं शक्यं दुष्पापं, दुष्पापं, यशः यस्य सः दुष्प्रापयशाः, श्रान्तौ वाहनौ यस्य सः श्रान्तवाहनः । संयमः अस्यास्तीति संयमी, तस्य । महांश्चासौ ऋषिश्च महर्षिः, तस्य । महिष्याः सखा महिषीसखः, सूत्रम् – 'राजाहस्सखिभ्यष्टच्' । प्रापत् – आप्लृ व्याप्तौ, पञ्चमगणः सक, लुङ्, पर, प्र.ए, प्र–उपसर्गः । प्र+आपत्, आपतां, आपन् । आपः, आपतं, आपत । आपं आपाव, आपाम ।

४९. अन्यत् वनं वनान्तरं, तस्मात् वनान्तरात् समिधश्च कुशाश्च फलानि च समित्कुशफलानि, समित्कुशफलानि, अहर्तुं शीलं येषां ते समित्कुशफलाहराः,

तैः। द्रष्टुं योग्याः दृश्याः, न दृश्याः अदृश्याः, अदृश्याश्च ते अग्नयश्च अदृश्याग्नयः, अदृश्याग्निभिः प्रत्युद्याताः अदृश्याग्निप्रत्युद्याताः तैः ।

५०. ऋषीणां पत्न्यः ऋषिपत्न्यः, तासाम् । उटजानां द्वाराणि, उटजद्वाराणि रुन्धन्तीति उटजद्वाररोधीनि, तैः । नीवारस्य भागधेयं नीवारभागधेयं , नीवारभागधेयस्य उचिताः नीवारभागधेयोचिताः, तैः नीवारभागधेयोचितैः ।

५१. सेकस्य अन्तः सेकान्तः, तस्मिन् । मुनीनां कन्याः मुनिकन्याः, ताभिः मुनीकन्याभिः । स चासौ क्षणश्च तत्क्षणः, तत्क्षणे उज्झिताः तत्क्षणोज्झिताः, वृक्षकाः यस्मिन् सः तत्क्षणोज्झितवृक्षकः, तम् । आलवालेषु अम्बु आलवालाम्बु। आलवालाम्बु पिबन्तीति आलवालाम्बुपायिनः, तेषाम् ।

५२. आतपस्य अत्ययः आतपात्ययः, आतपात्यये संक्षिप्ताः, आतपात्यय संक्षिप्ताः नीवाराः यासु ताः आतपात्यय...... नीवाराः तासु । वर्तितः रोमन्थः यस्मिन्सः वर्तितरोमन्थः, तम् । अङ्गणस्य भूमयः अङ्गणभूमयः, उटजानां अङ्गणभूमयः उटजाङ्गणभूमयः, तासु ।

५३. अभ्युत्थिताश्च ते अग्नयश्च अभ्युत्थिताग्नयः अभ्युत्थिताग्नीनां पिशुनाः अभ्युत्थिताग्निपिशुनाः, तैः । आश्रमस्य उन्मुखाः आश्रमोन्मुखाः, तान् । पवनेन उद्धूताः पवनोद्धूताः, तैः पवनोद्धूतैः । आहुतेः गन्धः आहुतिगन्धः आहुतिगन्धः एषां अस्तीति आहुतिगन्धिनः, तैः ।

५४. धुरं वहन्तीति धुर्याः, तान् धुर्यान् । विश्रामय –श्रमु तपसि खेदे च, चतुर्थगणः, अक, णिजन्त, लोट्, पर, म.ए, वि.उपसर्गः । वि+श्रामयतु श्रामयतात्, श्रामयतां, श्रामयन्तु । श्रामय श्रामयतात्, श्रामयतं, श्रामयत ।

श्रामयाणि, श्रामयाव, श्रामयाम । अवारोहयत् – रुह बीजजन्मनि प्रादुर्भावे च, प्रथमगणः, अक, णिजन्त, लङ्, पर, प्र.ए, अव–उपसर्गः । अभवत् इव रूपाणि। अवततार–तॄ प्लवनतरणयोः, प्रथमगणः, सक, लिट्, पर, प्र.ए, अव–उपसर्गः । अव+ततार, तेरतुः, तेरुः । तेरिथ ततर्थ, तेरथुः, तेर । ततार ततर, तेरिव, तेरिम ।

५५. सभायां साधवः सभ्याः । भार्यया सहितः सभार्यः, तस्मै । अतिशयेन गुप्तानि गुप्ततमानि, गुप्ततमानि इन्द्रियाणि येषां ते गुप्ततमेन्द्रियाः । नयः चक्षुः यस्य सः नयचक्षुः तस्मै । चक्रुः– डु कृञ् करणे, अष्टमगणः, सक, लिट्, पर, प्र.ब । चकार, चक्रथुः, चक्रुः । चकर्थ, चक्रथुः, चक्र । चकार चकर, चकृव, चकृम ।

५६. सायं भवः सायन्तनः, तस्य । तपसां निधिः तपोनिधिः, तम् । हविः भुङ्क्ते इति हविर्भुक्, तम् । ददर्श–दृशिर् प्रेक्षणे, प्रथमगणः, सक, लिट्, पर, प्र.ए । ददर्श, ददृशतुः, ददृशुः । ददर्शिथ दद्रष्ठ, ददृशथुः, ददृश । ददर्श, ददृशिव, ददृशिम । उपमालङ्कारः ।

५७. मगधानां राजा मागधः, मागधस्य अपत्यं स्त्री मागधी । गुरोः पत्नी गुरुपत्नी । जगृहतुः–ग्रह उपादाने, नवमगणः, सक, लिट्, पर, प्र.द्वि । जग्राह जगृहतुः जगृहुः । जग्रहिथ, जगृहथुः जगृह । जग्राह जग्रह, जगृहिव, जगृहिम। प्रतिननन्दतुः – टु नदि समृद्धौ, प्रथमगणः सक, लिट्, पर, प्र.द्वि । प्रति–उपसर्ग । प्रति + ननन्द, ननन्दतुः, ननन्दुः । ननन्दिथ, ननन्दथुः, ननन्द । ननन्द, ननन्दिव, ननन्दिम ।

४८. अतिथ्यर्थं, आतिथ्यं, आतिथ्यस्य क्रिया आतिथ्यक्रिया, आतिथ्यक्रियया शान्तः आतिथ्यक्रियाशान्तः, रथस्य क्षोभः रथक्षोभः, रथक्षोभेण परिश्रमः रथक्षोभपरिश्रमः, आतिथ्यक्रियाशान्तः, रथक्षोभपरिश्रमः यस्य सः अतिथ्य......परिश्रमः, तम् । राज्यं एव आश्रमः राज्याश्रमः, राज्याश्रमे मुनिः राज्याश्रममुनिः, तम् । पप्रच्छ– प्रच्छ ज्ञीप्सायां, षष्ठगणः, सक, लिट्, पर, प्र.ए। पप्रच्छ, पप्रच्छतुः, पप्रच्छुः । पप्रच्छिथ पप्रष्ठ, पप्रच्छथुः, पप्रच्छ । पप्रच्छ, पप्रच्छिव, पप्रच्छिम ।

५९. अथर्वणः निधिः अथर्वनिधिः, तस्य । अरीणां पुराणि अरिपुराणि, विजितानि अरिपुराणि, येन सः विजितारिपुरः । अर्थादनपेता अर्थ्या, ताम् अर्थ्यां. 'धर्मपथ्यर्थन्यायादनपेते' अनेन यत् –प्रत्ययः ।आददे–श्लोकः–२१।

६०. देवेभ्यः अगताः दैव्यः, तासाम् । मनुष्येभ्यः अगताः मानुष्यः, तासां मानुषीणाम् । 'तत अगतः' । अनेन सूत्रेण अण् । टिड्ढाणञ् –इति ङीप् ।

